ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ನವೆಂಬರ್ 01, 2024

ಸಂಪುಟ : 51 ಸಂಚಿಕೆ : 169 ☎ 08192-254736 91642 99999 RNI No: 27369 ಪುಟ : 8 ರೂ : 5.00 www.janathavani.com janathavani@mac.com







## ಶಕ್ತಿ ಯೋಜನೆ ಪರಿಷ್ಕರಣೆ ಪ್ರಸ್ತಾಪ ಇಲ್ಲ : ಸಿದ್ದರಾಮಯ್ಯ

ಬೆಂಗಳೂರು, ಅ. 31 - ಶಕ್ತಿ ಯೋಜನೆ ಪರಿಷ್ಕರಣೆಯ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ. ಆ ರೀತಿಯ ಉದ್ದೇಶವೂ ಸರ್ಕಾರಕ್ಕೆ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ವಿಧಾನಸೌಧದಲ್ಲಿ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಅವರು, ಎಲ್ಲಾ ಗ್ಯಾರಂಟಿ ಯೋಜನೆಗಳು ನೂರಕ್ಕೆ ನೂರರಷ್ಟು ಮುಂದುವರೆಯಲಿವೆ ಎಂದು ತಿಳಿಸಿದ್ದಾರೆ. ಅನೇಕ (2ನೇ ಪುಟಕ್ಕೆ)

## ವಕ್ಫ್ ವಿವಾದ : ಕಲ್ಲು ತೂರಾಟ, 32 ಜನರ ಬಂಧನ

ಹಾವೇರಿ, ಅ. 31 - ವಕ್ಫ್ ಆಸ್ತಿ ವಿಚಾರಕ್ಕೆ ಸಂಬಂಧಪಟ್ಟಂತೆ ಮನೆ ಖಾಲಿ ಮಾಡಿಸುತ್ತಾರೆ ಎಂಬ ಮಾಹಿತಿ ಹರಿದಾಡಿದ್ದರಿಂದ ಹಾವೇರಿ ಜಿಲ್ಲೆಯ ಸವಣೂರು ತಾಲ್ಲೂಕಿನ ಕಡಕೋಳದಲ್ಲಿ ಎರಡು ಕೋಮಿನ ನಡುವೆ ಗಲಾಟೆ ನಡೆದಿದೆ. ಬುಧವಾರ ರಾತ್ರಿ ಒಂದು ಕೋಮಿನ ಮುಖಂಡರ ಮನೆಗಳ ಮೇಲೆ ಮತ್ತೊಂದು ಕೋಮಿನ ಜನರು ಕಲ್ಲು ತೂರಾಟ ನಡೆಸಿದ್ದಾರೆ. ಇದರಿಂದಾಗಿ ಗ್ರಾಮದಲ್ಲಿ ಕೆಲ ಹೊತ್ತು ಪರಿಸ್ಥಿತಿ (2ನೇ ಪುಟಕ್ಕೆ)

## ವಿವಾದಕ್ಕೆ ಆಸ್ಪದವಿಲ್ಲದೇ ವೈಜ್ಞಾನಿಕವಾಗಿ ಒಳಮೀಸಲಾತಿ

**ಒಳಮೀಸಲಾತಿಗಾಗಿ ಆಯೋಗ ರಚನೆ ವಿಳಂಬ ನೀತಿಯಲ್ಲ : ರಾಜ್ಯ ಸರ್ಕಾರ**

ಬೆಂಗಳೂರು, ಅ.31- ರಾಜ್ಯದಲ್ಲಿ ಒಳ ಮೀಸಲಾತಿ ಕುರಿತು 3 ದಶಕಗಳ ನಿರಂತರ ಬೇಡಿಕೆ, ಒತ್ತಾಯಗಳ ಹಿನ್ನೆಲೆಯಲ್ಲಿ ರಾಜ್ಯ ಸಚಿವ ಸಂಪುಟವು ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿಯನ್ನು ಕಲ್ಪಿಸಲು ತಾತ್ವಿಕವಾಗಿ ಒಪ್ಪಿಗೆ ನೀಡಿದೆ. ಪರಿಶಿಷ್ಟ ಜಾತಿಗಳಲ್ಲಿ 101 ಒಳ ಪಂಗಡಗಳಿದ್ದು, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ವೈಜ್ಞಾನಿಕವಾಗಿ ಒಳ ಮೀಸಲಾತಿಯನ್ನು ಜಾರಿಗೊಳಿಸುವುದಾಗಿ ರಾಜ್ಯ ಸರ್ಕಾರದ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಒಳ ಮೀಸಲಾತಿ ನೀಡುವುದು ಸಂವಿಧಾನ ಬದ್ಧವಾದ ಕ್ರಮ ಎಂದು ಸುಪ್ರೀಂಕೋರ್ಟ್ ಇತ್ತೀಚೆಗೆ ತಿಳಿಸಿದ್ದು, ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಒಳ ಮೀಸಲಾತಿ ಜಾರಿಗೊಳಿಸುವ ಕ್ರಾಂತಿಕಾರಿ ನಿರ್ಣಯ ಕೈಗೊಂಡಿದೆ. ಸಮರ್ಪಕವಾಗಿ, (2ನೇ ಪುಟಕ್ಕೆ)


## ಸಾರ್ವಜನಿಕ ಪ್ರಕಟಣೆ

1) ದಾವಣಗೆರೆ ಸಿಟಿ, ವಾಸಿಯಾದ ಶ್ರೀಮತಿ ಗೀತಾ ಗೌಡ ಬಿನ್ ಲೇಟ್ ದೊಗ್ಗಳ್ಳಿ ಪರಮೇಶ್ವರಪ್ಪ 2) ಲತಾ ದೊಗ್ಗಳ್ಳಿ ಬಿನ್ ಲೇಟ್ ದೊಗ್ಗಳ್ಳಿ ಪರಮೇಶ್ವರಪ್ಪ ಡೋ. 212/3, ನರಸರಾಜ ರಸ್ತೆ, ದಾವಣಗೆರೆ ಆದ ನಾನು ಮೊ. ನಂ. 98804 98469.

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಒಟ್ಟು ಕುಟುಂಬದ ಎಲ್ಲಾ ಆಸ್ತಿಗಳ ಮೇಲೆ ದಾವಣಗೆರೆ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಕೇಸ್ ದಾಖಲಾಗಿದ್ದು, ಎಫ್.ಡಿ.ಪಿ-21/2015ರಲ್ಲಿ 1/5ನೇ ಭಾಗವಾಗಿ ವಿಂಗಡಿಸಿದ್ದು, ನಾವುಗಳು ಸದರಿ ಆದೇಶದ ವಿರುದ್ಧ ಅಧೀನ 2ನೇ ಜಿಲ್ಲಾ ಸತ್ರ ನ್ಯಾಯಾಲಯದಲ್ಲಿ ದಾವಣಗೆರೆ ಆರ್.ಎ. ಕೇಸ್ ನಂ. 30/2022 ರಲ್ಲಿ ಅಫೀಲು ಸಲ್ಲಿಸಿದ್ದು, ದಿನಾಂಕ : 01.06.2022 ರಂದು ತಾತ್ಕಾಲಿಕ ಪ್ರತಿಬಂಧಕಾಜ್ಞೆ ಇದ್ದು, ದಾವೆಗಳು ಇರುತ್ತವೆ. ಶ್ಯಾಮನೂರು-ನಾಗನೂರು ಗಡಿಯಲ್ಲಿ ಬರತಕ್ಕ ನಾಗನೂರು ಗ್ರಾಮದ ರೀ. ಸರ್ವೆ ನಂಬರ್ 136/3 ರಲ್ಲಿ ವಿಸ್ತೀರ್ಣ : 7 ಎಕರೆ, 22-ಗುಂಟೆ, ಜಮೀನು ಭಾಗ-1. ಭಾಗ-2 ರಲ್ಲಿ ವಿಂಗಡಿಸಿರುವ ಜಮೀನನ್ನು ಮತ್ತು ನಾನು ವಾಸವಾಗಿರುವ ಮನೆ ಈ ಆಸ್ತಿಯ ಮೇಲೆ ಪ್ರತಿಬಂಧಕಾಜ್ಞೆ ಇದ್ದು, ಈ ಪ್ರತಿಬಂಧಕಾಜ್ಞೆ ಇಲ್ಲಿಯವರೆಗೂ ಮುಂದುವರೆದಿರುತ್ತದೆ. ನಮ್ಮ ಯಾವುದೇ ಆಸ್ತಿಗಳನ್ನು ಪರಭಾರೆ ಮತ್ತು ಖಾತೆ ಬದಲಾವಣೆಯನ್ನು ಮಾಡಬಾರದು. ಯಾವುದೇ ರೀತಿಯ ನ್ಯಾಯಾಲಯದ ಕಾನೂನು ಬಾಹಿರ ನಡೆದಲ್ಲಿ ಅಂತವರ ಮೇಲೆ ನಾನು ಕಾನೂನು ಕ್ರಮಕೈಗೊಳ್ಳುತ್ತೇನೆ. ನಮ್ಮ ಯಾವುದೇ ಆಸ್ತಿಗಳು ಮಾರಾಟಕ್ಕೆ ಇರುವುದಿಲ್ಲ.

ವಂದನೆಗಳೊಂದಿಗೆ,
ಸ್ಥಳ : ದಾವಣಗೆರೆ, ದಿನಾಂಕ : 31.10.2024
ಸಹಿ/- ಎಂ.ಆರ್. ಮಹಾಬಲೇಶ್ವರ, ಬಿ.ಕಾಂ., ಎಲ್ಎಲ್.ಬಿ
ವಕೀಲರು, ಷಡಕಪ್ಪ ಕಾಂಪೌಂಡ್,
ಪಂಜಾಬ್ ನ್ಯಾಷನಲ್ ಬ್ಯಾಂಕ್ ಹಿಂಭಾಗ,
ಹಳೆ ಪಿ.ಬಿ. ರೋಡ್, ದಾವಣಗೆರೆ-2, ಕರ್ನಾಟಕ-418/1982,
ಮೊ. : 9886003466

ತಮ್ಮ ವಿಶ್ವಾಸಿ
ಸಹಿ/- ಲತಾ . ಡಿ

## ಹೃದಯಪೂರ್ವಕ ಕೃತಜ್ಞತೆಗಳು




ರಾಜ್ಯ ಸರ್ಕಾರಿ ನೌಕರ ಸಂಘದ ನಿರ್ದೇಶಕರ ಚುನಾವಣೆಯಲ್ಲಿ
ಹರಿಹರ ತಾಲ್ಲೂಕು ಘಟಕದ ವತಿಯಿಂದ ನಿರ್ದೇಶಕರಾಗಿ
**ಶ್ರೀ ನಾಗರಾಜ್ ಪಿ.** ಚಿತ್ರಕಲಾ ಶಿಕ್ಷಕರು ಗುತ್ತೂರು
ಇವರನ್ನು ಅಭೂತಪೂರ್ವವಾಗಿ ಬೆಂಬಲಿಸಿ ಸಹಕಾರ ಸಲಹೆಯೊಂದಿಗೆ ಮಾರ್ಗದರ್ಶನ ನೀಡಿ ಗೆಲುವಿಗೆ ಕಾರಣರಾದ ತಾಲ್ಲೂಕಿನ ಸಮಸ್ತ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು, ದೈಹಿಕ ಶಿಕ್ಷಕರು, ವೃತ್ತಿ ಶಿಕ್ಷಕರು, ಚಿತ್ರಕಲಾ ಶಿಕ್ಷಕರು, ಟಿ.ಜಿ.ಟಿ ಶಿಕ್ಷಕರು, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು, ಡಿ ದರ್ಜೆ ನೌಕರರು, ಪ್ರತ್ಯಕ್ಷವಾಗಿ, ಪರೋಕ್ಷವಾಗಿ, ಯಾವುದೇ ಆಸೆ, ಆಮಿಷಗಳಿಗೆ ಬೆಲೆ ಕೊಡದೇ ನಿಷ್ಪಕ್ಷಪಾತವಾಗಿ ಸೂಕ್ತ ವ್ಯಕ್ತಿಗಳನ್ನು ಆಯ್ಕೆ ಮಾಡಿದ ಸಮಸ್ತ ಪ್ರೌಢಶಾಲಾ ವೃಂದದವರಿಗೆ
ಹೃದಯಪೂರ್ವಕ ಕೃತಜ್ಞತೆಗಳು...

|| ಶ್ರೀ ಕುಲದೇವತಾ ಪ್ರಸನ್ನ ||

## ದ್ವಿತೀಯ ವರ್ಷದ ಪುಣ್ಯಸ್ಮರಣೆ



ಜನನ : 15.7.1975
ಮರಣ: 24.10.2022

**ದಿ|| ಶ್ರೀಮತಿ ವಿ.ಶಾಂತಲಾ**
(ಭೂ ಮಾಪನ ಇಲಾಖೆ)

ನಮ್ಮ ಜೀವದ ಹಣತೆ ಬೆಳಗಿದ ಶಾಂತಲಾ...

*ನೀನೊಂದು ಬಾಳಿನ ಪರಪಂಚ... ನೀನೊಂದು ಜೀವನದ ವೇದಾಂತ...*
*ನೀನೊಂದು ಬದುಕು ಬೆಳಗೋ ಸೂರ್ಯ...*
*ನೀನೊಂದು ನಮ್ಮ ಪಾಲಿನ ಅನುರಾಗ ಕಡಲು... ನೀನೊಂದು ಮುಗಿಯದ ರಾಜಬೀದಿ...*
*ನೀನೊಂದು ಭರವಸೆಯ ಮಳೆಮೋಡ... ನೀನೇ ಎಲ್ಲಾ, ನಿನ್ನಿಂದಲೇ ಎಲ್ಲಾ...*
*ಓ ನನ್ನ ನಲ್ಲೆ ಶಾಂತಲಾ.... ದೇವರು ನಿನ್ನ ಆತ್ಮಕ್ಕೆ ಶಾಂತಿಯನ್ನು ನೀಡಲಿ*

ನೀವು ನಮ್ಮನ್ನಗಲಿ ಎರಡು ವರ್ಷಗಳಾದವು. ಪರಮಾತ್ಮನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ. ಸದಾ ನಿಮ್ಮ ಸ್ಮರಣೆಯಲ್ಲಿರುವ...

ಪತಿ : ರವಿಚಂದ್ರ, ಎಂ.ಆರ್.
ಮಕ್ಕಳು : ತನ್ಮಯ್, ಆದಿತ್ಯ ಸೂರಜ್
ಮತ್ತು ಸಹೋದರರು, ಸಹೋದರಿಯರು
ಹಾಗೂ ಕ್ಯಾತಂ ಕುಟುಂಬಸ್ಥರು, ಬಂಧುಗಳು
ಮತ್ತು ಸ್ನೇಹಿತರ ಬಳಗ, ದಾವಣಗೆರೆ.

ಶಿವ ಶಿವ

## ಹೆಗ್ಗೆರೆ ಹೆಚ್.ಎಮ್. ಭೀಮಪ್ಪನವರು ನಿಧನ



ದಾವಣಗೆರೆ ವಿದ್ಯಾನಗರ ವಾಸಿ
ಶ್ರೀಮತಿ ಭಾಗ್ಯಮ್ಮ ಭೀಮಪ್ಪ ಇವರ ಪತಿಯವರಾದ

**ಹೆಗ್ಗೆರೆ ಹೆಚ್.ಎಮ್. ಭೀಮಪ್ಪ**
(ನಿವೃತ್ತ ಶಿಕ್ಷಕರು ತರಳಬಾಳು ವಿದ್ಯಾಸಂಸ್ಥೆ, ಸಿರಿಗೆರೆ)

ಇವರು, ದಿನಾಂಕ : 30.10.2024 ರಂದು ಬಧವಾರ ಬೆಳಿಗ್ಗೆ 4.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 94 ವರ್ಷ ವಯಸ್ಸಾಗಿತ್ತು. ಮೃತರ ಪತ್ನಿ, ಮಕ್ಕಳು, ಮೊಮ್ಮಕ್ಕಳು, ಸೊಸೆ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಭೀಮಪ್ಪನವರ ಪಾರ್ಥಿವ ಶರೀರವನ್ನು 01.11.2024ರ ಶುಕ್ರವಾರ ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ ದಾವಣಗೆರೆ ವಿದ್ಯಾನಗರ ಲಾಸ್ಟ್ ಬಸ್ ಸ್ಟಾಪ್ ಹತ್ತಿರವಿರುವ ಮೃತರ ಸ್ವಗೃಹದಲ್ಲಿ ಅಂತಿಮ ದರ್ಶನಕ್ಕೆ ಇರಿಸಲಾಗುವುದು. ನಂತರ 11 ಗಂಟೆಗೆ ದಾವಣಗೆರೆಯ ಶಾಮನೂರು ರುದ್ರಭೂಮಿಯಲ್ಲಿ ಅಂತ್ಯ ಸಂಸ್ಕಾರ ನೆರವೇರಿಸಲಾಗುವುದು.

ದುಃಖತಪ್ತರು :
• ಶ್ರೀಮತಿ ಭಾಗ್ಯಮ್ಮ ಭೀಮಪ್ಪ • ಶ್ರೀಮತಿ ಮಂಜುಳಾದೇವಿ (ನಿವೃತ್ತ ಎಕ್ಸಿಕ್ಯೂಟಿವ್ ಇಂಜಿನಿಯರ್)
• ಶ್ರೀಮತಿ ಸುಮನ ಡಾ. ಬಿ. ರವಿ (USA) • ಕುಮಾರಿ ರವಿನಾ ರವಿ (USA)
• ಶ್ರೀಮತಿ ಬಿ. ಗೀತಾದೇವಿ (USA)
• ಶ್ರೀಮತಿ ಡಾ. ಬಿ.ಎಸ್. ಭಾವನ ಮತ್ತು ಡಾ. ಗುರುಸಿದ್ದಪ್ಪ ಪ್ರಭು (USA)
ಚಿರಂಜೀವಿ ಆನ್ಯ ಮತ್ತು ಚಿರಂಜೀವಿ ಅರುಣ್ (USA) ಮತ್ತು ಬಂಧು - ಮಿತ್ರರು.
ಮೊ : 96637 66173, ಫೋ. : 08192 260128



# ಜಾತಿ ಗಣತಿಯ ಸಮುದ್ರ ಮಂಥನ

ದೇಶದಲ್ಲಿ ಮತ್ತೆ ಜನಗಣತಿ ನಡೆಯುವ ಸಮಯ ಹತ್ತಿರ ಬರುತ್ತಿರುವಂತೆಯೇ, ಜಾತಿ ಗಣತಿಯ ಕೂಗೂ ಜೋರಾಗುತ್ತಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಕೊನೆಯ ಜಾತಿ ಗಣತಿ ನಡೆಸಲಾಗಿತ್ತು. ನಂತರದಲ್ಲಿ ಜಾತಿ ಗಣತಿ ಕೈ ಬಿಡಲಾಗಿತ್ತು. ಜಾತ್ಯತೀತ ದೇಶದಲ್ಲಿ ಮತ್ತೆ ಜಾತಿ ಗಣತಿಯ ಅಗತ್ಯದ ಬಗ್ಗೆ ಹಲವರು ವಾದ ಮಂಡಿಸುತ್ತಿದ್ದಾರೆ.

ಜಾತಿ ಗಣತಿಯನ್ನು ಕೆಲವರು ದೇಶದ ಪರಿಸ್ಥಿತಿಗೆ ಹಿಡಿಯುವ ಎಕ್ಸ್-ರೇ ಎಂದು ಬಣ್ಣಿಸುತ್ತಿದ್ದಾರೆ. ಆದರೆ, ಇದು ಎಕ್ಸ್-ರೇ ಅಷ್ಟೇ ಅಲ್ಲದೇ, ಸಮುದ್ರ ಮಂಥನವೂ ಆಗಲಿದೆ. ಪುರಾಣಗಳಲ್ಲಿ ನಡೆದ ಸಮುದ್ರ ಮಂಥನದಲ್ಲಿ ಹಾಲಾಹಲ ವಿಷ ಹಾಗೂ ಅಮೃತ ಎರಡೂ ಉದ್ಭವಿಸಿದ್ದವು. ಹಲವು ಒಳಿತು ಹಾಗೂ ಕೆಡಕುಗಳು ಉಂಟಾಗಿದ್ದವು. ವಿಷ ಯಾರಿಗೆ, ಅಮೃತ ಯಾರಿಗೆ ಎಂಬುದು ಗಣತಿಯ ನಂತರವೇ ಸ್ಪಷ್ಟವಾಗಲಿದೆ.

ಆದರೆ, ನಿರ್ದಿಷ್ಟ ಸಮುದಾಯದ ಹಕ್ಕುಗಳನ್ನು ಕಸಿಯುವ ವಿಷಯ ಬಂದಾಗ ಅಂತಹ ಬೆನ್ನೆಲುಬು ಆಡಳಿತಗಾರರಿಗೆ ಇದೆಯೇ? ಎಂಬುದೇ ಈಗಿರುವ ಪ್ರಶ್ನೆ. ಉದಾಹರಣೆಗೆ : ಜಿತನಿ ಆಬಾದಿ, ಉತನಾ ಹಕ್ (ಜನಸಂಖ್ಯೆಗೆ ಅನುಗುಣವಾಗಿ ಹಕ್ಕು) ಎಂಬುದು ರಾಜಕೀಯ ವಲಯದ ಇತ್ತೀಚಿನ ತಾಜಾ ಘೋಷಣೆ. ಆದರೆ, ಜನಸಂಖ್ಯೆ ಆಧಾರದ ಮೇಲೆ ಕ್ಷೇತ್ರ ಪುನರ್ವಿಂಗಡಣೆ ಮಾಡಲು ಮುಂದಾದರೆ ದಕ್ಷಿಣದ ರಾಜ್ಯಗಳು ಪ್ರಾಬಲ್ಯ ಕಳೆದುಕೊಳ್ಳಲಿವೆ. ಹೀಗಾಗಿ ಜಿತನಿ ಆಬಾದಿ - ಉತನಾ ಹಕ್ ಸೂಕ್ತವಾಗದು. ಜಾರ್ಖಂಡ್ ವಿಧಾನಸಭಾ ಕ್ಷೇತ್ರಗಳ ಪುನರ್ವಿಂಗಡಣೆ ಮಾಡಲು ಹೋದರೆ, ಬುಡಕಟ್ಟು ಜನರಿಗೆ ಮೀಸಲಿಡುವ ಸ್ಥಾನಗಳ ಸಂಖ್ಯೆ ಕಡಿಮೆಯಾಗಲಿದೆ. ಹೀಗಾಗಿ ಆ ರಾಜ್ಯದಲ್ಲಿ ಕ್ಷೇತ್ರ ಪುನರ್ವಿಂಗಣೆಯನ್ನೇ ಸ್ಥಗಿತಗೊಳಿಸಲಾಗಿದೆ!

ಬಿಹಾರದಲ್ಲಿ ಜಾತಿ ಗಣತಿ ನಡೆಸಿದ ನಂತರ ಮೀಸಲಾತಿ ಹೆಚ್ಚಿಸಲಾಗಿತ್ತು. ಈ ಮೀಸಲಾತಿ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು. ರಾಜ್ಯದ ಮೀಸಲಾತಿ ಪಟ್ಟಿಯಲ್ಲಿರುವ ಕೆಲ ಜಾತಿಗಳು ಮುಂದುವರೆದಿವೆ. ಇಷ್ಟಾದರೂ ಆ ಜಾತಿಗಳನ್ನು ಮೀಸಲಾತಿ ಪಟ್ಟಿಯಲ್ಲಿ ಮುಂದುವರೆಸಿದ್ದು ಏಕೆ? ಎಂಬ ಪ್ರಶ್ನೆ ನ್ಯಾಯಾಲಯದಲ್ಲಿ ಕೇಳಿ ಬಂದಿತ್ತು. ಜಾತಿ ಗಣತಿ ನಂತರ, ಮೀಸಲಾತಿ ಪಟ್ಟಿಯಲ್ಲಿರುವ ಜಾತಿಗಳು ಮುಂದುವರೆದಿದ್ದು ಕಂಡು ಬಂದರೆ, ಅವರನ್ನು ಮೀಸಲಾತಿ ಪಟ್ಟಿಯಿಂದ ಕೈ ಬಿಡಲಾಗುವುದೇ? ಅಂತಹ ರಾಜಕೀಯ ಇಚ್ಛಾಶಕ್ತಿ ಯಾರಲ್ಲಿದೆ?

**ಬಂದಿದ್ದೆಲ್ಲ ಸ್ವೀಕರಿಸಲು ಪಟ್ಟಭದ್ರರಿಗೆ ಇದೆಯೇ ಇಚ್ಛಾಶಕ್ತಿ ?**

ಇನ್ನು ಪರಿಶಿಷ್ಟರ ಪ್ರಮಾಣ ಹೆಚ್ಚಾಗಿದ್ದರೆ, ಅವರ ಜನಸಂಖ್ಯೆಗೆ ಅನುಗುಣವಾಗಿ ಅನುದಾನವಾದರೂ ಹೆಚ್ಚಿಸಬಹುದು ಎಂಬ ವಾದವಿದೆ. ಆದರೆ, ಸಕಲ ರಾಜ್ಯಗಳೂ ಈಗ ಗ್ಯಾರಂಟಿ ಪ್ರಿಯವಾಗಿವೆ. ಗ್ಯಾರಂಟಿ, ವೇತನ - ಪಿಂಚಣಿಗಳಿಗೇ ಬಹುತೇಕ ಹಣ ಹೋಗುತ್ತಿರುವಾಗ ಜಾತಿ ಆಧರಿತವಾಗಿ ವಿಶೇಷ ಅನುದಾನ ಸಿಗುವುದು ಕಷ್ಟವೇ ಇದೆ.

ಹೋಗಲಿ ಸರ್ಕಾರಿ ಹುದ್ದೆಗಳಲ್ಲಿ ಭರ್ಜರಿ ಕೊಡುಗೆ ಸಿಗಬಹುದು ಎಂದರೆ, ಅಲ್ಲೂ ಕಷ್ಟವಿದೆ. ಖಾಸಗೀಕರಣದ ಈ ದಿನಗಳಲ್ಲಿ ಸರ್ಕಾರಿ ಹುದ್ದೆಗಳ ಅವಕಾಶ ಸೀಮಿತವಾಗಿದೆ. ಖಾಸಗಿಯಲ್ಲಾದರೂ ಮೀಸಲಾತಿ ಜಾರಿಗೆ ತಂದರೆ, ಜಾತಿ ಗಣತಿ ಹೆಚ್ಚು ಸಾರ್ಥಕವಾಗಲಿದೆ. ಆದರೆ, ಖಾಸಗಿ ಮೀಸಲಾತಿಯಂತಹ ಆತ್ಮಘಾತುಕ ಕ್ರಮಕ್ಕೆ ಮುಂದಾಗುವ ಧೈರ್ಯವನ್ನು ಯಾವ ಪಕ್ಷವೂ ತೋರುತ್ತಿಲ್ಲ.

ಕೇವಲ ಜಾತಿ ಆಧಾರದ ಮೇಲೆ ಸಾಮಾಜಿಕ ಅಸಮಾನತೆ ನಿಂತಿದೆ ಎಂದು ಕೆಲವರು ಬಿಂಬಿಸುವ ಯತ್ನ ನಡೆಸುತ್ತಾರೆ. ಆದರೆ, ಜಾತಿಯಷ್ಟೇ ಅಲ್ಲದೇ ವರ್ಗ, ಪ್ರಾಂತ್ಯ, ಲಿಂಗ ಇತ್ಯಾದಿ ಭೇದಗಳು ಅಸಮಾನತೆಗೆ ಕಾರಣ. ಇತ್ತೀಚೆಗಷ್ಟೇ ರಾಜ್ಯದ ಒಬ್ಬ ರಾಜವಂಶಸ್ಥರಿಗೆ ಒ.ಬಿ.ಸಿ. ವರ್ಗದವರು ಎಂಬ ಹಣೆಪಟ್ಟಿ ಕಟ್ಟಿ ಚುನಾವಣಾ ಕಣಕ್ಕಿಳಿಸಿ, ಗೆಲ್ಲಿಸಲಾಗಿತ್ತು. ಇವರು ಹಿಂದುಳಿದವರು ಎಂದು ಹೇಳಲು ಕಾರಣವೇನಿದೆ ಎಂಬುದನ್ನು ಜಾತಿ ಪಂಡಿತರೇ ಹೇಳಬೇಕು. ನೂರಾರು ಕೋಟಿ ರೂ.ಗಳ ಆಸ್ತಿ ಹಾಗೂ ಅಪಾರ ಸಾಮಾಜಿಕ ಗೌರವ ಹೊಂದಿರುವವರನ್ನು ಒ.ಬಿ.ಸಿ. ಎಂದರೆ ಅದಕ್ಕಿಂತ ತಮಾಷೆ ಇನ್ನೊಂದಿಲ್ಲ.

ಉನ್ನತ ಸ್ಥಾನ, ನೂರಾರು ಕೋಟಿ ರೂ.ಗಳ ಒಡೆತನ, ಸಾಮಾಜಿಕ ಗೌರವ ಇತ್ಯಾದಿಗಳನ್ನು ಹೊಂದಿರುವವರೂ ಸಹ ತಮ್ಮನ್ನು ತಾವು ದಮನಿತರು ಎಂದು ಹೇಳಿಕೊಳ್ಳುವುದನ್ನು ನೋಡಿದರೆ, ನಗಬೇಕೋ ಅಳಬೇಕೋ ಗೊಂದಲವಾಗುತ್ತದೆ.

ಸ್ವಾತಂತ್ರ್ಯ ಪೂರ್ವದ ಭಾರತಕ್ಕೂ, 2024ರ ಭಾರತಕ್ಕೂ ಬಹಳ ವ್ಯತ್ಯಾಸವಿದೆ. ಈಗಿನ ಆರ್ಥಿಕ, ಸಾಮಾಜಿಕ, ರಾಜಕೀಯ ಪರಿಸ್ಥಿತಿಗಳೂ ಭಿನ್ನವಾಗಿವೆ. ಈಗಿನ ಕಾಲದ ಸಮಸ್ಯೆಗಳಿಗೆ ಪರಿಹಾರಗಳೂ ಭಿನ್ನವಾಗಿರಬೇಕಿದೆ. ಯಾವುದೋ ಕಾಲದಂತೆ ಜಾತಿ ಗಣತಿ ನಡೆಸಿ, ಒಂದಿಷ್ಟು ಕೊಡುಗೆ ಕೊಟ್ಟು ಜನರನ್ನು ಉದ್ಧಾರ ಮಾಡುತ್ತೇವೆ ಎಂದು ಹೊರಟರೆ ಅದಕ್ಕಿಂತ ಮೂರ್ಖತನ ಇನ್ನೊಂದಿಲ್ಲ.

ಭಾರತ ಈಗ ವಿಶ್ವದಲ್ಲೇ ಅತಿ ಹೆಚ್ಚು ಯುವ ಪೀಳಿಗೆ ಹೊಂದಿದೆ. ಶಿಕ್ಷಣ, ಉದ್ಯೋಗ, ಉದ್ಯಮಶೀಲತೆಯಂತಹ ಅವಕಾಶಗಳನ್ನು ಕಲ್ಪಿಸಲು ಚಿಂತನೆಯಲ್ಲಿ ತೊಡಗಬೇಕಿದೆ. ಅದಕ್ಕೆ ಅನುಗುಣವಾಗಿ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ. ಇಂತಹ ಉದ್ದೇಶಗಳಿಗೆ ಜಾತಿ ಗಣತಿ ಬಳಕೆಯಾದಲ್ಲಿ, ಅಂತಹ ಜಾತಿ ಗಣತಿ ನಡೆಸಿದ್ದಕ್ಕೂ ಸಾರ್ಥವಾಗಲಿದೆ. ಇಲ್ಲವಾದರೆ, ಜಾತಿ ಗಣತಿಯು ಪಟ್ಟಭದ್ರರ ಅನುಕೂಲಕ್ಕಷ್ಟೇ ಸೀಮಿತವಾಗಲಿದೆ.

**- ಬಿ.ಜಿ. ಪ್ರವೀಣ್ ಕುಮಾರ್, ದಾವಣಗೆರೆ.**

# ಶಿಕ್ಷಣದಿಂದ ಸಮಾಜದ ಆಮೂಲಾಗ್ರ ಬದಲಾವಣೆ ಸಾಧ್ಯ



ಜಗಳೂರು, ಅ.31- ಶಿಕ್ಷಣದಿಂದ ಮಾತ್ರ ಸಮಾಜದ ಆಮೂಲಾಗ್ರ ಬದಲಾವಣೆ ಮತ್ತು ಪ್ರಗತಿ ಸಾಧ್ಯ ಎಂದು ಕುವೆಂಪು ವಿಶ್ವ ವಿದ್ಯಾನಿಲಯದ ಡಾ.ಬಿಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ ನಿರ್ದೇಶಕ ಡಾ.ನೆಲ್ಲಿಕಟ್ಟೆ ಎಸ್. ಸಿದ್ದೇಶ್ ಅಭಿಪ್ರಾಯಪಟ್ಟರು.

ತಾಲ್ಲೂಕಿನ ತಮಲೇಹಳ್ಳಿ ಗ್ರಾಮದ ಗಿರಿಜಾ ಸಭಾ ಭವನದಲ್ಲಿ ಶ್ರೀ ದಂಡಿನ ರಾಜಪ್ಪನವರ 4ನೇ ವರ್ಷದ ಪುಣ್ಯ ಸ್ಮರಣೆಯ ಪ್ರಯುಕ್ತ ರಾಜು ಬಿ ಲಕ್ಕಂಪುರ ರಚಿಸಿದ ಮಾರ್ದನಿ ಕೃತಿ ಬಿಡುಗಡೆ ಹಾಗೂ ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತ ದೇಶ ಬಹು ಸಂಸ್ಕೃತಿಯ ಬಹುತ್ವಸಾರುತ್ತದೆ. ಜ್ಞಾನ ಸರ್ವರ ಸ್ವತ್ತಾಗಬೇಕು ಎಂಬ ಆಶಯದ ದಿ.ದಂಡಿನ ರಾಜಪ್ಪ ಟ್ರಸ್ಟ್‌ನ ಎ.ಎಸ್.ಪಿ ಶಿವಕುಮಾರ್ ಅವರು ಶಿಕ್ಷಣ, ಕಲೆ, ಸಂಸ್ಕೃತಿಗೆ ಆದ್ಯತೆ ನೀಡಿ ಗ್ರಾಮೀಣ ಸಾಹಿತ್ಯಾಸಕ್ತಿಯ ಪ್ರತಿಭೆಗಳನ್ನು ಬೆಳಕಿಗೆ ತರುತ್ತಿರುವುದು ಶ್ಲಾಘನೀಯ ಎಂದರು.

ಆದಿಕವಿ ಪಂಪ ಅವರ ಆಶಯದಂತೆ ಮಾನವ ಕುಲ ಒಂದೇ ಎಂಬುವುದನ್ನು ಅರ್ಥೈಸಿಕೊಂಡು ಜಾತ್ಯತೀತವಾಗಿ ಸಾಮರಸ್ಯದ ಬದುಕನ್ನು ಕಟ್ಟಿಕೊಳ್ಳಬೇಕಾಗಿದೆ. ಸಮಾಜದಲ್ಲಿ ಅನ್ಯಾಯ ಕಂಡತಕ್ಷಣವೇ ಶೋಷಿತರ ಧ್ವನಿಯಾಗಬೇಕು ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಹೇಳಿದರು.

**ಜಗಳೂರಿನ ಕಾರ್ಯಕ್ರಮದಲ್ಲಿ ಕುವೆಂಪು ವಿಶ್ವ ವಿದ್ಯಾನಿಲಯದ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರ ನಿರ್ದೇಶಕ ಡಾ. ನೆಲ್ಲಿಕಟ್ಟೆ ಎಸ್.ಸಿದ್ದೇಶ್ ಅಭಿಮತ**

ರಾಯಚೂರು ಹೆಚ್ಚುವರಿ ಪೊಲೀಸ್ ಅಧೀಕ್ಷಕ ಡಾ. ದಂಡಿನ ಶಿವಕುಮಾರ್ ಮಾತನಾಡಿ, ದಂಡಿನ ರಾಜಪ್ಪ ಟ್ರಸ್ಟ್ ಗ್ರಾಮದಲ್ಲಿ ಬಡವಿದ್ಯಾರ್ಥಿಗಳಿಗೆ ಕೋಚಿಂಗ್, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಹಾಗೂ ಮಹಿಳೆಯರಿಗೆ ಉಚಿತ ಟೈಲರಿಂಗ್ ತರಬೇತಿ ನೀಡಲಾಗುತ್ತಿದೆ. ಗ್ರಾಮದ ಅಭಿವೃದ್ಧಿ, ಶೈಕ್ಷಣಿಕ ಪ್ರಗತಿ ನಮ್ಮ ಉದ್ದೇಶವಾಗಿದೆ ಎಂದು ತಿಳಿಸಿದರು.

ಇದೇ ವೇಳೆ ಸೂಲಗಿತ್ತಿ ತೊಳಸಮ್ಮ, ತಮಟೆ ಕಲಾವಿದ ಎ.ಕೆ. ನಾಗಪ್ಪ, ಇಂಜಿನಿಯರ್ ವಿದ್ಯಾರ್ಥಿನಿ ಅನುಷಾರನ್ನು ಸನ್ಮಾನಿಸಿ, ಗೌರವಿಸಲಾಯಿತು. ಸಾಹಿತಿ ಯುಗ ಧರ್ಮ ರಾಮಣ್ಣ, ಪ್ರೊ.ಜೆ.ಎಂ.ತಿಪ್ಪೇಸ್ವಾಮಿ, ದಾವಣಗೆರೆ ಜಿಲ್ಲಾ ವಾಣಿಜ್ಯ ತೆರಿಗೆ ಜಿಲ್ಲಾ ಅಧಿಕಾರಿ ಮಂಜುನಾಥ್, ಕಾಲೇಜು ಶಿಕ್ಷಣ ಇಲಾಖೆ ನಿವೃತ್ತ ಗೆಜೆಟೆಡ್ ಮ್ಯಾನೇಜರ್ ಬಿ.ಪಿ. ಜನಾರ್ದನ ರಾಜ ಅರಸ್ ಮಾತನಾಡಿದರು.

ಸಮಾರಂಭದಲ್ಲಿ ದಂಡಿನ ರಾಜಪ್ಪ ಪರಿವಾರ ಪ್ರತಿಷ್ಠಾನ ಟ್ರಸ್ಟ್ ಅಧ್ಯಕ್ಷೆ ಗಿರಿಜಮ್ಮ, ಪಿಡಿಓ ಡಿ.ಪಿ. ಹನುಮಂತಪ್ಪ, ಹೊಸಪೇಟೆ ಸಿಪಿಐ ಗುರುರಾಜ ಆರ್. ಕಟ್ಟಿಮನಿ, ಎಂ.ಶ್ರೀನಿವಾಸ್ ರಾವ್, ಸಿರಾ ತಾಲ್ಲೂಕು ಆರೋಗ್ಯ ನಿರೀಕ್ಷಣಾಧಿಕಾರಿ ವಿನಯ್ ಸಿ, ಡಾ. ರೇವಣ್ಣಸ್ವಾಮಿ ಎಂ, ಮಾರ್ದನಿ ಪುಸ್ತಕದ ಲೇಖಕ ರಾಜು ಬಿ.ಲಕ್ಕಂಪುರ, ಪ್ರಹ್ಲಾದ, ಸಂಧ್ಯಾ, ಲತಾ, ಗಾಯತ್ರಿ ಇದ್ದರು.

## ಮಧ್ಯಪ್ರದೇಶ : ವಾರದಲ್ಲಿ 10 ಆನೆಗಳ ಸಾವು



ಉಮಾರಿಯಾ, ಅ. 31 - ಮಧ್ಯಪ್ರದೇಶದ ಬಂಧವಘರ್ ಹುಲಿ ಅಭಯಾರಣ್ಯದಲ್ಲಿ ವಿಷಕಾರಿ ಆಹಾರ ಪದಾರ್ಥ ಸೇವಿಸಿದ ಹತ್ತು ಆನೆಗಳು ಕಳೆದ ಒಂದು ವಾರದಲ್ಲಿ ಸಾವನ್ನಪ್ಪಿವೆ.

ಆನೆಗಳ ಸಾವಿನ ಹಿಂದೆ ಯಾವುದೇ ದುಷ್ಕೃತ್ಯದ ಸಾಧ್ಯತೆ ಇದುವರೆಗೂ ಕಂಡು ಬಂದಿಲ್ಲ. ಆದರೆ ಮರಣೋತ್ತರ ಪರೀಕ್ಷಾ ವರದಿಗೆ ಕಾಯಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಹತ್ತಿರದ ಹೊಲಗಳಲ್ಲಿ ಬೆಳೆದಿರುವ ಬೆಳೆಗಳು, ಕೃಷಿ ಜಮೀನು ಹಾಗೂ ಜಲಮೂಲಗಳ ಮಾದರಿಗಳನ್ನೂ ಸಹ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಮೃತಪಟ್ಟಿರುವ ಆನೆಗಳೆಲ್ಲ ಒಂದೇ ಹಿಂಡಿಗೆ ಸೇರಿದವುಗಳಾಗಿವೆ. ಈ ಹಿಂಡಿನಲ್ಲಿ 13 ಆನೆಗಳಿದ್ದವು. ಉಳಿದ ಮೂರು ಆನೆಗಳು ಆರೋಗ್ಯವಾಗಿದ್ದು ಅವುಗಳ ಮೇಲೆ ಕಾಡಿನಲ್ಲಿ ನಿಗಾ ವಹಿಸಲಾಗಿದೆ.

## ಕೋಡಿ ಕ್ಯಾಂಪ್ ಕೊಟ್ಟೂರೇಶ್ವರ ಸ್ವಾಮಿ ಮಠದಲ್ಲಿಂದು ದೀಪಾವಳಿ ಅಮಾವಾಸ್ಯೆ

ಕೊಟ್ಟೂರು ಶ್ರೀ ಗುರುಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ (ದಾವಣಗೆರೆ) ವತಿಯಿಂದ ದಾವಣಗೆರೆ ಬಳಿಯ ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ಇರುವ ಶ್ರೀ ಗುರು ಕೊಟ್ಟೂರೇಶ್ವರ ಮಹಾಸ್ವಾಮಿಗಳಿಗೆ ದೀಪಾವಳಿ ಅಮಾವಾಸ್ಯೆ ಪ್ರಯುಕ್ತ ಇಂದು ಬೆಳಿಗ್ಗೆ 6.30ಕ್ಕೆ ಅಭಿಷೇಕ, ವಿಶೇಷ ಪೂಜೆ ನಡೆಯಲಿದೆ. ನಂತರ ಬೆಳಿಗ್ಗೆ 8 ರಿಂದ ಪ್ರಸಾದ ವಿನಿಯೋಗವಿರುತ್ತದೆ.



ಕಣಕ್ಕುಪ್ಪಿ ಕರಿಬಸಪ್ಪನವರ ಮಗಳು ಲಂಡನ್ ವಾಸಿ ಶ್ರೀಮತಿ ಮಾನಸ, ಅಶಿಸ್‌ಕುಮಾರ್ ಇವರ ಪುತ್ರ ಚಿ. ಈಶಾನ್ ಗುಪ್ತ ಇವರು ಪ್ರಸಾದದ ದಾಸೋಹ ಸೇವಾಕರ್ತರಾಗಿದ್ದಾರೆ.

ವಿವರಕ್ಕೆ ಕಣಕುಪ್ಪಿ ಮುರುಗೇಶಪ್ಪ (96118 89151), ಟಿ.ಜಿ. ಬಕ್ಕೇಶಪ್ಪ (91089 88898), ಬಿ. ಚಿದಾನಂದಪ್ಪ (98455 28449), ಮಲ್ಲಾಬಾದಿ ಗುರು ಬಸವರಾಜ್ (79757 97079) ತಿಳಿಸಿದ್ದಾರೆ. ದಾಸೋಹ ಮನೆ ಮತ್ತು ಸಭಾಂಗಣ ಕಟ್ಟಡವು ಪ್ರಗತಿ ಹಂತದಲ್ಲಿದೆ. ಭಕ್ತಾದಿಗಳು ದೇಣಿಗೆ ಸಲ್ಲಿಸಬಹುದು.

## ಶಕ್ತಿ ಯೋಜನೆ ಪರಿಷ್ಕರಣೆ ಪ್ರಸ್ತಾಪ ಇಲ್ಲ : ಸಿದ್ದರಾಮಯ್ಯ

**(1ನೇ ಪುಟದಿಂದ)** ಮಂದಿ ಹೆಣ್ಣು ಮಕ್ಕಳು ನಮಗೆ ಟಿಕೆಟ್ ತೆಗೆದುಕೊಳ್ಳುವ ಶಕ್ತಿ ಇದೆ. ಉಚಿತ ಪ್ರಯಾಣ ಬೇಡ ಎಂದು ಟ್ವೀಟ್ ಹಾಗೂ ಇ-ಮೇಲ್ ಮೂಲಕ ತಿಳಿಸುತ್ತಿದ್ದಾರೆ. ಈ ಬಗ್ಗೆ ಚರ್ಚೆ ಮಾಡುತ್ತೇವೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದರು. ಇದು ಉಚಿತ ಪ್ರಯಾಣ ಯೋಜನೆ ಬದಲಿಸುವ ಪ್ರಶ್ನೆ ಹುಟ್ಟು ಹಾಕಿತ್ತು.

ವಕ್ಫ್ ಆಸ್ತಿ ನೋಟೀಸ್‌ಗೆ ಸಂಬಂಧಿಸಿದ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ,ಈ ಬಗ್ಗೆ ಬಿಜೆಪಿ ಪ್ರತಿಭಟನೆ ಮಾಡುತ್ತಿರುವುದು ವಿಪರ್ಯಾಸ. ತಮ್ಮ ಸರ್ಕಾರದ ಅವಧಿಯಲ್ಲಿಯೇ ಸುಮಾರು 200ಕ್ಕೂ ಹೆಚ್ಚು ನೋಟೀಸ್‌ಗಳನ್ನು ನೀಡಿದ್ದಾರೆ. ಇದು ಇಬ್ಬದಿ ರಾಜಕೀಯ ನಡೆ ಎಂದರು.

ಯಾವ ರೈತರನ್ನೂ ಒಕ್ಕಲೆಬ್ಬಿಸುವುದಿಲ್ಲ ಎಂದು ಈಗಾಗಲೇ ಹೇಳಿದ್ದೇವೆ. ಕೊಟ್ಟಿರುವ ನೋಟೀಸ್‌ಗಳನ್ನು ಹಿಂಪಡೆಯಲು ಈಗಾಗಲೇ ಸೂಚಿಸಲಾಗಿದೆ. ರೈತರು ಆತಂಕಪಡುವ ಅಗತ್ಯವಿಲ್ಲ.

ನವೆಂಬರ್ 4ರ ಅವರ ಪ್ರತಿಭಟನೆ ಉಪಚುನಾವಣೆ ಹಿನ್ನೆಲೆಯಲ್ಲಿ ರಾಜಕೀಯ ಪ್ರೇರಿತವಾದದ್ದು. ಸಮಸ್ಯೆಗಳು ಇರದ ಕಡೆ ಅವರೇ ಸಮಸ್ಯೆಗಳನ್ನು ಸೃಷ್ಟಿಸುತ್ತಾರೆ. ಈಗ ಮುಡಾ ಪ್ರಕರಣದಲ್ಲಿ ಅದೇ ರೀತಿ ಮಾಡಲಾಗಿದೆ ಎಂದು ಸಿದ್ದರಾಮಯ್ಯ ಹೇಳಿದರು.

## ಹರಿಹರ: ಗ್ರಾಮದೇವತೆ ಉತ್ಸವ ಸಮಿತಿ ಖಜಾಂಚಿಯಾಗಿ ಕೆಂಚಪ್ಪ ದೊಡ್ಡಮನೆ



ಹರಿಹರ, ಅ.31- ನಗರದಲ್ಲಿ ಮುಂದಿನ ಮಾರ್ಚ್ 18 ರಂದು ನಡೆಯುವ ಗ್ರಾಮದೇವತೆ ಊರಮ್ಮ ದೇವಿ ಹಬ್ಬದ ಅಂಗವಾಗಿ ಶಿಬಾರ ವೃತ್ತದಲ್ಲಿರುವ ಮೂಲ ಊರಮ್ಮ ದೇವಿ ದೇವಸ್ಥಾನ ಆವರಣದಲ್ಲಿ ನಡೆದ ಪದಾಧಿಕಾರಿಗಳ ಆಯ್ಕೆ ಸಭೆಯಲ್ಲಿ ಉತ್ಸವ ಸಮಿತಿಯ ಖಜಾಂಚಿಯನ್ನಾಗಿ ಕೆಂಚಪ್ಪ ದೊಡ್ಡಮನೆ ಇವರನ್ನು ಸರ್ವಾನುಮತದಿಂದ ಆಯ್ಕೆಮಾಡಲಾಯಿತು.

ಸಭೆಯಲ್ಲಿ ಕಸಬಾ ಗೌಡ್ರು ಲಿಂಗರಾಜ್ ಪಟೇಲ್, ಗೌಡ್ರು ಪುಟ್ಟಪ್ಪ, ವೈ.ಎನ್. ಮಹೇಶ್, ಕೆ.ಜಡಿಯಪ್ಪ, ಬಣಕಾರ ಸಿದ್ದಪ್ಪ, ಶಾನಬೋಗರು ಗಿರೀಶ್, ಕೆ.ಅಣ್ಣಪ್ಪ, ಬೆಣ್ಣೆ ರೇವಣಸಿದ್ದಪ್ಪ, ಸುರೇಶ್ ಚಂದಪೂರ್, ಕರಿಬಸಪ್ಪ ಕಂಚಿಕೇರಿ, ಹುಲಿಕಟ್ಟಿ ನಾಗರಾಜ್, ನಾಗರಾಜ್, ರಾಘವೇಂದ್ರ, ಅರ್ಚಕರು ಈರಣ್ಣ ಪೂಜಾರ್, ಬೆಣ್ಣೆ ಸಿದ್ದೇಶ್, ವೇದಮೂರ್ತಿ ಇತರರು ಹಾಜರಿದ್ದರು.

## ಕಾಡಜ್ಜಿ ಸಿ. ನಾಗರಾಜಪ್ಪ ನಿಧನ



ದಾವಣಗೆರೆ ತಾಲ್ಲೂಕು ಹೊಸ ಚಿಕ್ಕನಹಳ್ಳಿ ವಾಸಿ

**ಕಾಡಜ್ಜಿ ಸಿ. ನಾಗರಾಜಪ್ಪ**

ಇವರು ದಿನಾಂಕ 31.10.2024ರ ಗುರುವಾರ ರಾತ್ರಿ 10.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 83 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ, ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 01.11.2024ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಐಗೂರು ರಸ್ತೆ ಹೊಸ ಚಿಕ್ಕನಹಳ್ಳಿಯ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ :

**98446 80250, 92424 57816**

# ಆಸ್ಪದವಿಲ್ಲದೇ ವೈಜ್ಞಾನಿಕವಾಗಿ ಒಳಮೀಸಲಾತಿ

**(1ನೇ ಪುಟದಿಂದ)** ವೈಜ್ಞಾನಿಕವಾಗಿ ಹಾಗೂ ವಿವಾದಗಳಿಗೆ ಆಸ್ಪದ ನೀಡದಂತೆ ಒಳ ಮೀಸಲಾತಿಯನ್ನು ಅನುಷ್ಠಾನಗೊಳಿಸಬೇಕೆಂಬ ಉದ್ದೇಶದಿಂದ ಸರ್ಕಾರ ಆಯೋಗ ಸರ್ಕಾರ ರಚಿಸಿದ್ದು, ಇದರಲ್ಲಿ ಯಾವುದೇ ವಿಳಂಬ ನೀತಿ ಅಥವಾ ಕಾಲಹರಣ ತಂತ್ರ ಇರುವುದಿಲ್ಲ. ಸಾಮಾಜಿಕ ನ್ಯಾಯದ ವಿಷಯದಲ್ಲಿ ಯಾವುದೇ ರಾಜೀ ಮಾಡಿಕೊಳ್ಳದೇ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸರ್ಕಾರ ಕಾರ್ಯ ನಿರ್ವಹಿಸಲಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಈ ಹಿನ್ನೆಲೆಯಲ್ಲಿ ರಾಜ್ಯ ಹೈಕೋರ್ಟ್ ನ ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಕಮೀಷನ್ ಆಫ್ ಇನ್‌ಕ್ವೈರಿ ಆಕ್ಟ್ 1952 ಅನ್ವಯ ಆಯೋಗವನ್ನು ರಚಿಸಲು ನಿರ್ಧರಿಸಲಾಗಿದೆ. ಸದರಿ ಆಯೋಗವು ಎರಡು ತಿಂಗಳ ಒಳಗಾಗಿ ವರದಿ ಸಲ್ಲಿಸುವ ಷರತ್ತು ವಿಧಿಸಲು ರಾಜ್ಯ ಸಚಿವ ಸಂಪುಟ ತೀರ್ಮಾನಿಸಿದೆ.

ಮುಂದಿನ ತೀರ್ಮಾನದವರೆಗೆ ರಾಜ್ಯ ಸರ್ಕಾರದ ಅಧೀನದ ಸಿವಿಲ್ ಸೇವೆಗಳಲ್ಲಿನ ಹಾಗೂ ಮೀಸಲಾತಿ ಅನ್ವಯವಾಗುವ ವೃಂದಗಳ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಹೊಸದಾಗಿ ಯಾವುದೇ ಅಧಿಸೂಚನೆಯನ್ನು ಹೊರಡಿಸದಿರುವ ನಿರ್ಧಾರವನ್ನೂ ಸಹ ಕೈಗೊಳ್ಳಲಾಗಿದೆ.

ತೆಲಂಗಾಣ ಸರ್ಕಾರ ಸಹ ಒಳ ಮೀಸಲಾತಿ ಜಾರಿ ಸಂಬಂಧ ಈಗಾಗಲೇ ಇದೇ ಮಾದರಿಯಲ್ಲಿ ಒಂದು ಆಯೋಗ ರಚನೆ ಮಾಡಿದೆ.

ಸರ್ವೋಚ್ಛ ನ್ಯಾಯಾಲಯದ ಆದೇಶದಂತೆ ಒಳ ಮೀಸಲಾತಿಯನ್ನು ವೈಜ್ಞಾನಿಕವಾಗಿ, ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸೂಕ್ತ ಅಂಕಿ-ಅಂಶಗಳ ಅಗತ್ಯವಿರುತ್ತದೆ. ಈ ಅಂಕಿ-ಅಂಶಗಳನ್ನು ವೈಜ್ಞಾನಿಕವಾಗಿ ನಿರ್ಧರಿಸಲು ರಾಜ್ಯ ಸರ್ಕಾರವು ಆಯೋಗವನ್ನು ರಚನೆ ಮಾಡಲು ನಿರ್ಧರಿಸಿದೆ.

ಆಯೋಗವು ನಿಗದಿತ ಗಡುವಿನೊಳಗೆ ವರದಿಯನ್ನು ಸಲ್ಲಿಸಲು ಬೇಕಾದ ಅಗತ್ಯ ಕ್ರಮಗಳನ್ನು ಸರ್ಕಾರವು ತೆಗೆದುಕೊಳ್ಳಲಿದೆ. ಆಯೋಗದ ವರದಿ ಬಂದ ತಕ್ಷಣ ಒಳ ಮೀಸಲಾತಿಯನ್ನು ಜಾರಿಗೊಳಿಸಲು ಕ್ರಮವಹಿಸಲಾಗುವುದು.

# ಸೇಂಟ್ ಮೇರೀಸ್ ಶಾಲೆ ವಿದ್ಯಾರ್ಥಿಗಳು ಜಿಲ್ಲಾ ಮಟ್ಟಕ್ಕೆ ಆಯ್ಕೆ



ಹರಿಹರ, ಅ. 31 - ಹರಿಹರದಲ್ಲಿ ಶುಕ್ರವಾರ ನಡೆದ ತಾಲ್ಲೂಕು ಮಟ್ಟದ ಕ್ರೀಡಾ ಕೂಟದಲ್ಲಿ ಭಾಗವಹಿಸಿದ್ದ ನಗರದ ಸೇಂಟ್ ಮೇರಿಸ್ ಕಾನ್ವೆಂಟ್ ಪ್ರೌಢ ಶಾಲೆಯ ವಿದ್ಯಾರ್ಥಿಗಳಾದ ಎಸ್. ಭುವನ್ ಜಾಧವ್ 100, 200, 400 ಮೀ. ಓಟ ಹಾಗೂ 4x100 ಮೀ., 4x400 ಮೀ. ರಿಲೇ ಓಟದಲ್ಲಿ ಪ್ರಥಮ, ವಿ.ಕೆ. ಅಮೋಘ ಉದ್ದ ಜಿಗಿತದಲ್ಲಿ ಪ್ರಥಮ, ಓಂಕಾರೇಶ್ ತ್ರಿವಿಧ ಜಿಗಿತದಲ್ಲಿ ಪ್ರಥಮ, ಉದ್ದ ಜಿಗಿತದಲ್ಲಿ ಪ್ರೀತಮ್ ದ್ವಿತೀಯ, ಸೈಯದ್ ಅಮೀನ್ ಸರ್ವರ್, ಅಮೋಘ ವಿ.ಕೆ., ಓಂಕಾರೇಶ್, ಪ್ರೀತಮ್, ಎಸ್. ಭುವನ್ ಜಾಧವ್ ವಿದ್ಯಾರ್ಥಿಗಳು 4x100 ಮೀ. ಹಾಗೂ 4x400 ಮೀ. ರಿಲೇಯಲ್ಲಿ ಪ್ರಥಮ, 100 ಮೀ. ಓಟದಲ್ಲಿ ತ್ರಿವೇಣಿ ದ್ವಿತೀಯ, ಉದ್ದ ಜಿಗಿತದಲ್ಲಿ ಎಸ್.ಬಿ. ನಿಕಿತಾ ಪ್ರಥಮ ಸ್ಥಾನವನ್ನು ಪಡೆದಿರುತ್ತಾರೆ.

ಪ್ರಾಥಮಿಕ ಶಾಲಾ ವಿಭಾಗದಲ್ಲಿ 4x100 ಮೀ. ರಿಲೇ ವಿಭಾಗದಲ್ಲಿ ಕಾವ್ಯ, ಆರ್. ಸಿಂಧು, ಆರ್. ದರ್ಶಿನಿ, ಜಿ.ಎಂ. ಭಾಗ್ಯಶ್ರೀ, ಯು. ನಯನ ಪ್ರಥಮ ಸ್ಥಾನ, ಉದ್ದ ಜಿಗಿತದಲ್ಲಿ ಭಾಗ್ಯಶ್ರೀ ಪ್ರಥಮ, 100 ಮೀ. ಓಟದಲ್ಲಿ ಚಿದಂಬರ್ ಪ್ರಥಮ, ಗುಂಡು ಎಸೆತದಲ್ಲಿ ಪಿ.ಬಿ. ಅಮೃತ ಪ್ರಥಮ ಸ್ಥಾನ ಪಡೆದಿರುತ್ತಾರೆ.

14 ವರ್ಷದೊಳಗಿನ ವಿಭಾಗದಲ್ಲಿ ಎಸ್. ಚಂದನ್ ಜಾಧವ್ 400 ಮತ್ತು 600 ಮೀ. ಓಟದಲ್ಲಿ ಪ್ರಥಮ, 100 ಮತ್ತು 200 ಮೀ. ಓಟದಲ್ಲಿ ಎಂ. ಸುಜಯ್ ಪ್ರಥಮ ಸ್ಥಾನ ಪಡೆದಿದ್ದಾರೆ.

# ಹರಪನಹಳ್ಳಿ : ಕನ್ನಡ ರಾಜ್ಯೋತ್ಸವ ಬಹಿಷ್ಕಾರಕ್ಕೆ ತೀರ್ಮಾನ

ಹರಪನಹಳ್ಳಿ, ಅ. 31 - ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ರಾಜ್ಯೋತ್ಸವದ ಆಹ್ವಾನ ಪತ್ರಿಕೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರನ್ನು ಕಡೆಗಣನೆ ಮಾಡಲಾಗಿದ್ದು, ಕಾರ್ಯಕ್ರಮ ಬಹಿಷ್ಕರಿಸಲಾಗುವುದು ಎಂದು ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಕೆ. ಉಚ್ಚಂಗೆಪ್ಪ ತಿಳಿಸಿದ್ದಾರೆ.

ಕಳೆದ ಐದು ದಿನಗಳ ಹಿಂದೆ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಜರುಗಿದ ಪೂರ್ವ ಭಾವಿ ಸಭೆಯಲ್ಲಿ ರಾಜ್ಯೋತ್ಸವ ಕಾರ್ಯಕ್ರಮದ ಆಹ್ವಾನ ಪತ್ರಿಕೆಯಲ್ಲಿ, ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರ ಹೆಸರನ್ನು ಹಾಕಬೇಕು ಎಂದು ಹೇಳಿದಾಗ, ತಹಶಿಲ್ದಾರ್ ಗಿರೀಶ್ ಬಾಬು ನಾವು ಜಿಲ್ಲಾಧಿಕಾರಿಯವರ ಹತ್ತಿರ ಚರ್ಚೆ ಮಾಡಿ ನಿಮಗೆ ತಿಳಿಸುತ್ತೇವೆ ಎಂದು ಹೇಳಿದ್ದರು.



ಆದರೆ, ಏಕಾಏಕಿ ಆಹ್ವಾನ ಪತ್ರಿಕೆ ಸಿದ್ಧ ಮಾಡಿದ್ದು, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರ ಹೆಸರನ್ನು ಉದ್ದೇಶ ಪೂರ್ವಕವಾಗಿ ಬಿಡಲಾಗಿದೆ. ಈ ಬಗ್ಗೆ ನಾವು ತಹಶೀಲ್ದಾರ್‌ರಿಗೆ ದೂರವಾಣಿ ಮೂಲಕ ಸಂಪರ್ಕ ಮಾಡಿದಾಗ ನಾವು ಶಿಷ್ಟಾಚಾರದಂತೆ ಆಹ್ವಾನ ಪತ್ರಿಕೆ ಮಾಡಲಾಗಿದೆ ಎಂದು ಹೇಳಿದರು. ಪಕ್ಕದ ಹೂವಿನ ಹಡಗಲಿಯಲ್ಲಿ ಜರುಗುವ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ಆಹ್ವಾನ ಪತ್ರಿಕೆಯಲ್ಲಿ ಹಡಗಲಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರ ಹೆಸರನ್ನು ಹಾಕಲಾಗಿದೆ. ಅಲ್ಲಿ ಇಲ್ಲದ ಶಿಷ್ಟಚಾರ ಇಲ್ಲಿ ಏಕೆ ಎಂದು ಕೇಳಿದಾಗ, ಉಡಾಫೆ ಉತ್ತರ ನೀಡಿದರು. ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಮಂಡಳಿ ತೀರ್ಮಾನದಂತೆ ನಾವು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಬಹಿಷ್ಕರಿಸುತ್ತೇವೆ ಎಂದು ಉಚ್ಚಂಗಪ್ಪ ಹೇಳಿದರು.

## ಜಿಲ್ಲಾ ಮಟ್ಟಕ್ಕೆ ಚಿಟ್ಟಕ್ಕಿ ಸ್ಕೂಲ್ ಶ್ರೇಯಸ್



ಮಲೇಬೆನ್ನೂರು, ಅ.31- ಹರಿಹರ ನಗರದಲ್ಲಿ ನಡೆದ 2024-25ನೇ ಸಾಲಿನ ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ತಾಲ್ಲೂಕು ಮಟ್ಟದ ಕ್ರೀಡಾ ಕೂಟದಲ್ಲಿ ಸ್ಪರ್ಧಿಸಿದ್ದ ಕುಂಬಳೂರು ಗ್ರಾಮದ ಚಿಟ್ಟಕ್ಕಿ ಇಂಟರ್ ನ್ಯಾಷನಲ್ ಸ್ಕೂಲ್‌ನ ಹಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿ ಎಸ್.ಹೆಚ್.ಎಸ್. ಶ್ರೇಯಸ್ ಚಕ್ರ ಎಸೆತದಲ್ಲಿ ಪ್ರಥಮ ಹಾಗೂ ಗುಂಡು ಎಸೆತದಲ್ಲಿ ದ್ವಿತೀಯ ಸ್ಥಾನ ಗಳಿಸುವ ಮೂಲಕ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

## 32 ಜನರ ಬಂಧನ

**(1ನೇ ಪುಟದಿಂದ)** ಬಿಗಡಾಯಿಸಿತ್ತು.

ಮನೆಗಳ ಖಾತಾ ದಾಖಲೆಗಳಲ್ಲಿ ವಕ್ಫ್ ಆಸ್ತಿ ಎಂದು ನಮೂದು ಮಾಡಲಾಗುತ್ತಿದೆ ಎಂಬ ಆತಂಕದಿಂದ ಉದ್ರಿಕ್ತರು ಗಲಾಟೆ ನಡೆಸಿದ್ದರು. ಉದ್ರಿಕ್ತ ಗುಂಪು ಇನ್ನೊಂದು ಗುಂಪಿನ ಮುಖಂಡರ ಮನೆಗಳ ಮೇಲೆ ಕಲ್ಲು ತೂರಾಟ, ಹಲ್ಲೆ ನಡೆಸಿತ್ತು. ಗಲಾಟೆಯಲ್ಲಿ ಒಟ್ಟು ಐವರು ಗಾಯಗೊಂಡಿದ್ದರು. ಗಾಯಾಳುಗಳನ್ನು ಸವಣೂರು ಮತ್ತು ಹುಬ್ಬಳ್ಳಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಕಡಕೋಳ ಗ್ರಾಮದಲ್ಲಾದ ಗಲಾಟೆ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. 32 ಜನರನ್ನು ಬಂಧಿಸಲಾಗಿದೆ. ಈ ಬಗ್ಗೆ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಎಸ್ಪಿ ಅಂಶುಕುಮಾರ್ ತಿಳಿಸಿದರು.

ಗ್ರಾಮದಲ್ಲಿದ್ದ ಗರಡಿ ಮನೆ ಹಾಗೂ ಹಲವು ಮನೆಗಳ ಖಾತೆ ಬದಲಾವಣೆ ಮಾಡಿ ವಕ್ಫ್ ಆಸ್ತಿ ಎಂಬುದಾಗಿ ನಮೂದಿಸಿರುವ ಬಗ್ಗೆ ಸುದ್ದಿ ಹರಿದಾಡಿತ್ತು. ಈ ಬಗ್ಗೆ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ.

## ಉದ್ಯಮಿಗೆ ಬೆದರಿಕೆ, ಛೋಟಾ ರಾಜನ್ ತಂಡದ ಐವರ ಬಂಧನ

ಮುಂಬೈ, ಅ. 31 - ರಿಯಲ್ ಎಸ್ಟೇಟ್ ಡೆವಲಪರ್ ಹಾಗೂ ಅವರ ಸಹಭಾಗಿಗೆ 10 ಕೋಟಿ ರೂ. ಬೆದರಿಕೆ ಒಡ್ಡಿದ ಛೋಟಾ ರಾಜನ್ ಗ್ಯಾಂಗ್‌ನ ಇವರನ್ನು ಪೊಲೀಸರು ಬಂಧಿಸಿದ್ದಾರೆ.

ರಿಯಲ್ ಎಸ್ಟೇಟ್ ಉದ್ಯಮಿ ಹಾಗೂ ಅವರ ಸಹಭಾಗಿ ಪೊಲೀಸರಲ್ಲಿ ದೂರು ನೀಡಿದ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಉದ್ಯಮಿ ರಕ್ಷಣೆಗಾಗಿ ಛೋಟಾ ರಾಜನ್ ಗ್ಯಾಂಗ್‌ಗೆ 55 ಲಕ್ಷ ರೂ. ನೀಡಿದ್ದರು. ಆದರೆ 10 ಕೋಟಿ ರೂ. ನೀಡುವಂತೆ ಬೆದರಿಕೆ ಕರೆಗಳನ್ನು ಮಾಡಲಾಗಿತ್ತು ಎಂದು ಪೊಲೀಸರು ಹೇಳಿದ್ದಾರೆ.

## ಸ್ನಾತಕೋತ್ತರ ಪದವಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಅ.31- ದಾವಣಗೆರೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಯ ವಿವಿಧ ಕೋರ್ಸ್‌ಗಳಲ್ಲಿ ಖಾಲಿ ಇರುವ ಸೀಟುಗಳ ಭರ್ತಿಗಾಗಿ ಪ್ರವೇಶಾವಕಾಶ ಅವಧಿಯನ್ನು ನವೆಂಬರ್ 11ರವರೆಗೆ ವಿಸ್ತರಿಸಲಾಗಿದೆ.

ಸ್ನಾತಕೋತ್ತರ ಪದವಿಯ ವಿಜ್ಞಾನ, ಶಿಕ್ಷಣ, ಸಮಾಜ ವಿಜ್ಞಾನ ಮತ್ತು ವಾಣಿಜ್ಯ ನಿಕಾಯಗಳ ಎಲ್ಲ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಅವಕಾಶವಿದ್ದು, ಆಸಕ್ತ ವಿದ್ಯಾರ್ಥಿಗಳು ನವೆಂಬರ್ 4 ರಿಂದ 11ರವರೆಗೆ ಅರ್ಜಿ ಸಲ್ಲಿಸಬಹುದು. ನವೆಂಬರ್ 14 ಮತ್ತು 15ರಂದು ಪ್ರವೇಶ ಪ್ರಕ್ರಿಯೆ ನಡೆಯಲಿದೆ ಎಂದು ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಯು. ಎಸ್.ಮಹಾಬಲೇಶ್ವರ್ ತಿಳಿಸಿದ್ದಾರೆ.

# ಮಲೇಬೆನ್ನೂರಿನಲ್ಲಿ ಸರ್ವರ್, ಯುಪಿಎಸ್ ಸಮಸ್ಯೆ : ಜನರ ಪರದಾಟ

ಮಲೇಬೆನ್ನೂರು, ಅ.31- ಪಟ್ಟಣದ ನಾಡಕಚೇರಿಯಲ್ಲಿ ಸರ್ವರ್ ಹಾಗೂ ಯುಪಿಎಸ್ ಸಮಸ್ಯೆಯಿಂದಾಗಿ ದಿನವಿಡೀ ಕಾದು ಕುಳಿತರೂ ಆಗುತ್ತಿಲ್ಲ ಎಂದು ಹೋಬಳಿ ವ್ಯಾಪ್ತಿಯ ಜನತೆ ಬುಧವಾರ ಬೇಸರ ವ್ಯಕ್ತಪಡಿಸಿ ಧರಣಿ ನಡೆಸಲು ಮುಂದಾದ ಘಟನೆ ನಡೆಯಿತು.

ರೈತರ ಸಮಸ್ಯೆ ಆಲಿಸಿದ ಉಪತಹಶೀಲ್ದಾರ್ ಆರ್.ರವಿ ಯುಪಿಎಸ್ ದುರಸ್ತಿ ಮಾಡಿದ್ದರೂ ಆಗಾಗ ಕೈ ಕೊಡುತ್ತಿದೆ.

ಸರ್ವರ್ ಸಮಸ್ಯೆ ಕುರಿತು ಮೇಲಾಧಿಕಾರಿಗಳ ಗಮನಕ್ಕೆ ತರಲಾಗಿದೆ. ಸರ್ಕಾರದ ಇಲಾಖೆಯೊಟ್ಟಿಗೆ ಸಹಕರಿಸಿ ಎಂದರು.

ಉಪಸ್ಥಿತರಲ್ಲಿ ಮನವಿ ಮಾಡಿ ಧರಣಿ ನಡೆಸದಂತೆ ತಡೆದು ಮನವೊಲಿಸುವಲ್ಲಿ ಯಶಸ್ವಿಯಾದರು.

ತಾಂತ್ರಿಕ ಸಮಸ್ಯೆಯಿಂದಾಗಿ ಸರ್ವೆ ಇನ್ನಿತರೆ ಕೆಲಸ ಆಗುತ್ತಿಲ್ಲ, ಇನ್ನೊಂದೆಡೆ ಕಚೇರಿ ಯುಪಿಎಸ್ ಕೆಟ್ಟಿದ್ದು, ಕೆಲಸಗಳು ನೆನೆಗುದಿಗೆ ಬಿದ್ದಿವೆ ಎಂದು ನಿಟ್ಟೂರಿನ ರೈತ ಬಿ.ಜಿ. ಧನಂಜಯ ಹಾಗೂ ಹಿರೇಹಾಲಿವಾಣದ ಗೊಂದಿ ರೇವಣಸಿದ್ದಪ್ಪ ಅವರು ಆಕ್ಷೇಪ ವ್ಯಕ್ತಪಡಿಸಿದರು.



ಕೆಲಸ ಬದುಕು ಬಿಟ್ಟು ಬಂದು ದಿನವಿಡೀ ಕಾದರೂ ಯಾವುದೇ ಪ್ರಯೋಜನವಿಲ್ಲ. ಜಿಲ್ಲಾಡಳಿತ ಸಮಸ್ಯೆ ಪರಿಹರಿಸಿ ಎಂದು ಪಟ್ಟು ಹಿಡಿದು ಕುಳಿತಿದ್ದರು.

ಸಮೀಪದ ಭಾನುವಳ್ಳಿಯಲ್ಲಿ ಇನ್ನೊಂದು ಅಟಲ್ ಸೇವಾ ಕೇಂದ್ರ ತೆರೆಯುವಂತೆ ಇಂಗಳಗೊಂದಿ ಮಹಾಂತೇಶ್ ಜಿಲ್ಲಾಡಳಿತಕ್ಕೆ ಕೋರಿದರು.

ರೈತರಾದ ವಾಸೀಮ್ ಸಾಬ್, ನಾಗರಾಜ್, ಬೂದಿಹಾಳ್ ಶಿವಮೂರ್ತಿ, ಶಿವಯ್ಯ ಎಳೆಹೊಳೆ, ಇಂಗಳಗೊಂದಿ ಹನುಮಂತು, ಮಹಾಂತೇಶ್, ಜಗದೀಶ್ ಇದ್ದರು.

ಸದರಿ ಸಮಸ್ಯೆ ಹಲವಾರು ದಿನಗಳಿಂದ ಹೆಚ್ಚಾಗಿದೆ. ದಿನವಿಡೀ ಕುಳಿತು ಕೆಲಸ ಮಾಡಿದರೂ 4-5 ಅರ್ಜಿ ಅಪ್ಲೋಡ್ ಆಗ್ತಾ ಇಲ್ಲ ಎಂದು ಗಣಕಯಂತ್ರ ನಿರ್ವಾಹಕ ಬಸವರಾಜ್, ಗಣಕಯಂತ್ರ ಯುಪಿಎಸ್ ಇಲ್ಲದೇ ಹಾಳಾಗುವ ಭಯ ಕಾಡ್ತಾ ಇದೆ ಎಂದರು.

# ಗಡಿಯಲ್ಲಿ ಒಂದಿಂಚೂ ಹೊಂದಾಣಿಕೆ ಇಲ್ಲ : ಪ್ರಧಾನಿ

ಭುಜ್, ಅ. 31 - ಭಾರತ ತನ್ನ ಗಡಿಯಲ್ಲಿ ಒಂದು ಇಂಚಿನಷ್ಟೂ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ತಿಳಿಸಿದ್ದಾರೆ.

ಗುಜರಾತ್‌ನ ಕಚ್ ಗಡಿಯಲ್ಲಿರುವ ಸರ್ ಕ್ರೀಕ್‌ನಲ್ಲಿ ಸೈನ್ಯದ



ನಡುವೆ ದೀಪಾವಳಿ ಹಬ್ಬ ಆಚರಿಸಿಕೊಂಡ ವೇಳೆ ಪ್ರಧಾನಿ ಈ ಹೇಳಿಕೆ ನೀಡಿದ್ದಾರೆ. ಈ ಪ್ರದೇಶವು ಭಾರತ ಮತ್ತು ಪಾಕಿಸ್ತಾನ ಗಡಿಯ ಸಮೀಪದಲ್ಲಿದೆ. ದೇಶವನ್ನು ರಕ್ಷಿಸುವ ಪಡೆಗಳ ಬಲದ ಮೇಲೆ ದೇಶದ ಜನರಿಗೆ ವಿಶ್ವಾಸ ಇದೆ. ಭಾರತೀಯ ಪಡೆಗಳ ಸಾಮರ್ಥ್ಯವನ್ನು ನೋಡಿ ದಾಗ ಶತ್ರು ಪಡೆಗಳ ದುಷ್ಟ ಯೋಜನೆಗಳು ಅಂತ್ಯವಾಗುತ್ತವೆ ಎಂದು ಮೋದಿ ಹೇಳಿದ್ದಾರೆ.

ಸೈನಿಕರಿಂದಾಗಿ ದೇಶದ ಜನತೆ ಸುರಕ್ಷತೆಯ ಭಾವ ಹೊಂದಿದ್ದಾರೆ. ಭಾರತದ ಸೈನಿಕರನ್ನು ನೋಡಿದಾಗ ವಿಶ್ವಕ್ಕೆ ಭಾರತದ ಶಕ್ತಿಯ ಅಂದಾಜು ಸಿಗುತ್ತದೆ. ಶತ್ರುಗಳು ಭಾರತೀಯ ಸೈನ್ಯವನ್ನು ನೋಡಿದಾಗ ಅವರ ದುಷ್ಟ ಯೋಜನೆಗಳು ಅಂತ್ಯವಾಗುತ್ತದೆ ಎಂದು ಮೋದಿ ತಿಳಿಸಿದರು.


ದೇಶದಲ್ಲಿ ಈಗಿರುವ ಸರ್ಕಾರ ಗಡಿಯ ಒಂದು ಇಂಚು ಪ್ರದೇಶದ ಬಗ್ಗೆಯೂ ಹೊಂದಾ ಣಿಕೆ ಮಾಡಿಕೊಳ್ಳುವುದಿಲ್ಲ. ಭಾರತದ ಪಡೆಗಳು ದೇಶವನ್ನು ರಕ್ಷಿಸುವ ಸಾಮರ್ಥ್ಯ ಹೊಂದಿ ರುವ ಬಗ್ಗೆ ನಮಗೆ ವಿಶ್ವಾಸ ಇದೆ ಎಂದು ಪ್ರಧಾನಿ ಹೇಳಿದರು.


# ನಗರದಲ್ಲಿ ಇಂದು ಬೈಕ್ ರ‍್ಯಾಲಿ

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯಿಂದ ಕಚೇರಿ ಮುಂಭಾಗ ಇಂದು ಬೆಳಗ್ಗೆ 8 ಗಂಟೆಗೆ 69ನೇ ಕನ್ನಡ ರಾಜ್ಯೋತ್ಸವ ಹಾಗೂ ಕಲಾಕುಂಚ ಮಹಿಳೆಯರಿಂದ ಬೈಕ್ ರ‍್ಯಾಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.













# ಉಕ್ರೇನ್ ಸಮರದಲ್ಲಿ ಉತ್ತರ ಕೊರಿಯಾ ಜೂಜು

## ಬಡತನದ ಒಣಭೂಮಿಗಿಂತ ರಣಭೂಮಿಗೆ ತೆರಳಲು ಕೊರಿಯಾ ಸೈನಿಕರ ಉತ್ಸಾಹ



ಸಿಯೋಲ್, ಅ. 31 - ಯುದ್ಧ ಎಂದರೆ ಸಾವು - ನೋವು - ಸಂಕಟಗಳ ಸರಮಾಲೆ. ಉಕ್ರೇನ್ ಹಾಗೂ ರಷ್ಯಾ ನಡುವಿನ ಸಮರ ಸಂಕಷ್ಟಗಳನ್ನು ಹೊತ್ತು ತಂದಿದೆ. ಈ ನಡುವೆ, ಉತ್ತರ ಕೊರಿಯಾದ ಸಾವಿರಾರು ಸೈನಿಕರನ್ನು ರಷ್ಯಾಗೆ ರವಾನಿಸಲಾಗಿದೆ.

ಆದರೆ, ಈ ಸೈನಿಕರು ತಮಗೆ ಗೊತ್ತಿರದ ಪ್ರದೇಶದಲ್ಲಿ ಎಷ್ಟರ ಮಟ್ಟಿಗೆ ಹೋರಾಟ ನಡೆಸಲು ಸಾಧ್ಯ? ಇವರು ಸೂಕ್ತ ತರಬೇತಿಯನ್ನಾದರೂ ಪಡೆದಿದ್ದಾರೆಯೇ? ಇವರು ಸುಲಭವಾಗಿ ಸಾವಿನ ದವಡೆಗೆ ದೂಡಲ್ಪಡುವರೇ? ಎಂಬ ಶಂಕೆಗಳು ಅನ್ಯ ದೇಶದವರ ಮನದಲ್ಲಿ ಮೂಡಿದೆ. ಆದರೆ, ಈ ರಣರಂಗ ಪ್ರವೇಶ ಉತ್ತರ ಕೊರಿಯಾದ ಸಾಕಷ್ಟು ಸೈನಿಕರಲ್ಲಿ ಕಳವಳಕ್ಕಿಂತಲೂ ಉತ್ಸಾಹವನ್ನೇ ತಂದಿದೆ. ವಿದೇಶಿ ನೆಲದಲ್ಲಿ ನಡೆಸುವ ಹೋರಾಟದಿಂದ ಹಣ ಗಳಿಸಬಹುದು ಹಾಗೂ ತವರು ನೆಲೆಯಲ್ಲಿ ತಮ್ಮ ಕುಟುಂಬಗಳಿಗೆ ಉತ್ತಮ ಸ್ಥಾನಮಾನ ಸಿಗಬಹುದು ಎಂಬ ಆಶಾಭಾವನೆ ಇವರಲ್ಲಿದೆ ಎಂದು ಉತ್ತರ ಕೊರಿಯಾದ ಮಾಜಿ ಸೈನಿಕರು ಹೇಳಿದ್ದಾರೆ.

ಸೈನಿಕರು ಯುವಕರಾಗಿದ್ದು, ಯುದ್ಧದ ನೈಜ ಸ್ವರೂಪ ಅರಿತಿಲ್ಲ. ಉತ್ತರ ಕೊರಿಯಾದಿಂದ ರಷ್ಯಾಗೆ ತೆರಳುವುದು ಗೌರವ ಎಂದೇ ಭಾವಿಸಿದ್ದಾರೆ ಎಂದು ಉತ್ತರ ಕೊರಿಯಾದ ವಿಶೇಷ ಪಡೆಯಾದ ಸ್ಟಾರ್ಮ್ ಕಾರ್ಪ್ಸ್ ಮಾಜಿ ಸದಸ್ಯ ಲೀ - ವೂಂಗ್ ಗಿಲ್ ಹೇಳಿದ್ದಾರೆ.

**ಸೈನ್ಯ ನಿಯೋಜನೆಯ ಜೂಜು :** ರಷ್ಯಾದ ಪರವಾಗಿ ಉಕ್ರೇನ್ ವಿರುದ್ಧ ಹೋರಾಟ ನಡೆಸಲು ಉತ್ತರ ಕೊರಿಯಾ ಸುಮಾರು 10 ಸಾವಿರ ಸೈನಿಕರನ್ನು ರವಾನಿಸಿದೆ ಎಂದು ದಕ್ಷಿಣ ಕೊರಿಯಾ ಹೇಳುತ್ತಿದೆ. ಮುಂದಿನ ಕೆಲ ವಾರಗಳಲ್ಲಿ ಇವರು ಹೋರಾಟದಲ್ಲಿ ಪಾಲ್ಗೊಳ್ಳಲಿದ್ದಾರೆ ಎನ್ನಲಾಗುತ್ತಿದೆ.

ಇತ್ತೀಚೆಗೆ ಉತ್ತರ ಕೊರಿಯಾದ 3 ಸಾವಿರ ಸೈನಿಕರನ್ನು ಪಶ್ಚಿಮ ರಷ್ಯಾದ ಸಮರ ಭೂಮಿಯ ಮುಂಚೂಣಿಗೆ ಕಳಿಸಲಾಗಿದೆ ಎಂದು ದಕ್ಷಿಣ ಕೊರಿಯಾ ಹೇಳಿದೆ.

ಉತ್ತರ ಕೊರಿಯಾ ಪ್ರವೇಶದಿಂದಾಗಿ ಮೂರು ವರ್ಷಗಳಿಂದ ನಡೆಯುತ್ತಿರುವ ಉಕ್ರೇನ್ ಸಮರಕ್ಕೆ ಮತ್ತಷ್ಟು ಬೆಂಕಿ ಹತ್ತಿದಂತಾಗಿದೆ. ಉತ್ತರ ಕೊರಿಯಾ ಈಗಾಗಲೇ ಅಮೆರಿಕ ಹಾಗೂ ದಕ್ಷಿಣ ಕೊರಿಯಾಗಳ ಜೊತೆ ಬಿಕ್ಕಟ್ಟು ಹೊಂದಿದೆ. ಈ ನಡುವೆಯೇ, ತನ್ನ ಸೈನ್ಯವನ್ನು ಬೇರೆಡೆ ರವಾನಿಸಿರುವುದು ಹಲವರಲ್ಲಿ ಅಚ್ಚರಿಯನ್ನೂ ತಂದಿದೆ.

ರಷ್ಯಾದಲ್ಲಿ ಉತ್ತರ ಕೊರಿಯಾದ ಹೆಚ್ಚು ಸೈನಿಕರು ಸಾವನ್ನಪ್ಪಿದರೆ ಅದು 40 ವರ್ಷಗಳಿಂದ ಆಳ್ವಿಕೆ ನಡೆಸುತ್ತಿರುವ ಕಿಮ್ ಜಾಂಗ್ ಉನ್ ಅವರಿಗೆ ಹಿನ್ನಡೆಯಾಗಲಿದೆ. ಆದರೆ, ಸೈನ್ಯ ರವಾನೆಯಿಂದ ವಿದೇಶಿ ವಿನಿಮಯ ಹಾಗೂ ರಷ್ಯಾದಿಂದ ಭದ್ರತಾ ಸಹಾಯ ಸಿಗಲಿದೆ. ಹೀಗಾಗಿ ಸೈನ್ಯ ರವಾನೆ ಒಂದು ರೀತಿ ದೊಡ್ಡ ಜೂಜಿನಂತಿದೆ.

ಹೆಚ್ಚು ಸಾವುಗಳು ಸಂಭವಿಸದೆ ಇದ್ದರೆ, ಕಿಮ್ ಜಾಂಗ್ ಉನ್ ಬಯಸಿದ್ದು ಸಿಗಲಿದೆ. ಆದರೆ, ಸೈನ್ಯದಲ್ಲಿ ಸಾವುಗಳು ಹೆಚ್ಚಾದರೆ ಪರಿಸ್ಥಿತಿ ಬದಲಾಗಲಿದೆ ಎಂದು ಉತ್ತರ ಕೊರಿಯಾದ ಮಾಜಿ ಸೈನಿಕ ಆಹ್ನ್ ಚಾನ್ - ಇಲ್ ಹೇಳಿದ್ದಾರೆ. ಚಾನ್ - ಇನ್ ಈಗ ಸಿಯೋಲ್‌ನ ವರ್ಲ್ಡ್ ಇನ್‌ಸ್ಟಿಟ್ಯೂಟ್ ಆಫ್ ನಾರ್ತ್ ಕೊರಿಯನ್ ಸ್ಟಡೀಸ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಕಡಿಮೆ ಆದಾಯ :** ಸ್ಟಾರ್ಮ್ ಕಾರ್ಪ್ಸ್ ತುಕಡಿಯು ಕಿಮ್ ಜಾಂಗ್ ಅವರ ಉನ್ನತ ದಳಗಳಲ್ಲಿ ಒಂದಾಗಿದೆ. ದಕ್ಷಿಣ ಕೊರಿಯಾದಲ್ಲಿ ನುಸುಳುವುದು, ಅಲ್ಲಿನ ಸೌಲಭ್ಯಗಳನ್ನು ಧ್ವಂಸಗೊಳಿಸುವುದು ಹಾಗೂ ಯುದ್ಧ ಸಂಭವಿಸಿದಲ್ಲಿ ಪ್ರಮುಖರ ಹತ್ಯೆಗೈಯ್ಯುವುದು ಈ ದಳದ ಉದ್ದೇಶಗಳಾಗಿವೆ.

ಲೀ ಅವರು 1998-2003ರಲ್ಲಿ ಸ್ಟಾರ್ಮ್ ಕಾರ್ಪ್ಸ್‌ನಲ್ಲಿ ಕಾರ್ಯನಿರ್ವಹಿಸಿದ್ದರು. ಬೇರೆ ತುಕಡಿಗಳಿಗೆ ಹೋಲಿಸಿದರೆ ಸ್ಟಾರ್ಮ್ ಕಾರ್ಪ್ಸ್ ಉತ್ತಮ ಆಹಾರ ಪೂರೈಕೆ ಹೊಂದಿತ್ತು. ಆದರೂ, ಈ ತಂಡದ ಹಲವರು ಅಪೌಷ್ಟಿಕತೆ ಹಾಗೂ ಟಿ.ಬಿ.ಗಳಿಂದ ಬಳಲುತ್ತಿದ್ದರು.

ಉತ್ತರ ಕೊರಿಯಾದ ಸಾಮಾನ್ಯ ಜನರು ಹಾಗೂ ಸೈನಿಕರ ದೈನಂದಿನ ಆದಾಯ ದಿನಕ್ಕೆ 1 ಡಾಲರ್‌ಗಿಂತ ಕಡಿಮೆ ಇದೆ. ಉತ್ತರ ಕೊರಿಯಾ ಪಡಿತರ ವ್ಯವಸ್ಥೆ ಹೊಂದಿದೆಯಾದರೂ, ಅದು ಅತೀ ಕಳಪೆಯಾಗಿದೆ.

ಉತ್ತರ ಕೊರಿಯಾ ಪಡೆಗಳ ನಿಯೋಜನೆಯ ಸಂಪೂರ್ಣ ವೆಚ್ಚವನ್ನು ರಷ್ಯಾ ಭರಿಸಲಿದೆ. ಹೀಗಾಗಿ ಸೈನಿಕರು ತಿಂಗಳಿಗೆ ಕನಿಷ್ಠ 2 ಸಾವಿರ ಡಾಲರ್ ಪಡೆಯಲಿದ್ದಾರೆ. ಇದರಲ್ಲಿ ಶೇ.90ರಿಂದ 95ರಷ್ಟು ಹಣ ಕಿಮ್ ಬೊಕ್ಕಸಕ್ಕೆ ಹಾಗೂ ಉಳಿದದ್ದು ಸೈನಿಕರಿಗೆ ಸಿಗಲಿದೆ. ರಷ್ಯಾದಲ್ಲಿ ಒಂದು ವರ್ಷ ಕಾರ್ಯನಿರ್ವಹಿಸುವ ಉತ್ತರ ಕೊರಿಯಾ ಸೈನಿಕರಿಗೆ 2,400 ಡಾಲರ್‌ಗಳವರೆಗೆ ಹಣ ದೊರೆಯಲಿದೆ. ಯುವ ಸೈನಿಕರು ಪ್ರಾಣ ಒತ್ತೆ ಇಟ್ಟು ರಷ್ಯಾಗೆ ತೆರಳಲು ಇಷ್ಟು ಸ್ಫೂರ್ತಿ ಸಾಕು ಎಂದು ಮಾಜಿ ಸೈನಿಕರೊಬ್ಬರು ಹೇಳಿದ್ದಾರೆ. ಅಲ್ಲದೇ, ರಷ್ಯಾಗೆ ತೆರಳಿದ ಸೈನಿಕರ ಕುಟುಂಬಗಳಿಗೆ ಆದ್ಯತೆಯ ಸೌಲಭ್ಯ ಹಾಗೂ ಮನೆಯವರ ಶಿಕ್ಷಣಕ್ಕೆ ವ್ಯವಸ್ಥೆ ಮಾಡಲಾಗುವುದು. ಇದರ ಜೊತೆಗೆ, ಹೊರ ದೇಶ ನೋಡುವ ಅವಕಾಶವೂ ಸೈನಿಕರಲ್ಲಿ ಉತ್ಸಾಹ ತಂದಿದೆ ಎಂದು ಉತ್ತರ ಕೊರಿಯಾ ಸೈನ್ಯದ ಮಾಜಿ ಫಸ್ಟ್ ಲೆಫ್ಟಿನೆಂಟ್ ಚೋಯ್ ಜಂಗ್ - ಹೂನ್ ಹೇಳಿದ್ದಾರೆ.

ಉತ್ತರ ಕೊರಿಯಾದವರು ವಿದೇಶಕ್ಕೆ ತೆರಳುವುದಿರಲಿ, ವಿದೇಶಿ ಸುದ್ದಿಯಿಂದಲೂ ವಂಚಿತರಾಗಿದ್ದಾರೆ. ದೇಶದಲ್ಲೇ ಒಂದು ಪ್ರಾಂತ್ಯದಿಂದ ಮತ್ತೊಂದು ಪ್ರಾಂತ್ಯಕ್ಕೆ ಹೋಗಬೇಕಾದರೆ ಅನುಮತಿ ಪಡೆಯಬೇಕಿದೆ. ವಿದೇಶಿ ವಿನಿಮಯಕ್ಕಾಗಿ ಉತ್ತರ ಕೊರಿಯಾದ ಹಲವರನ್ನು ಬೇರೆ ದೇಶಗಳಿಗೆ ಕೆಲಸಕ್ಕಾಗಿ ಕಳಿಸಲಾಗುತ್ತದೆ. ಇವರನ್ನು ಗುಲಾಮರಂತೆ ನಡೆಸಿಕೊಳ್ಳಲಾಗುತ್ತಿದೆ ಎಂದು ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಸಂಘಟನೆಗಳು ಹೇಳುತ್ತಿವೆ.

ಆದರೆ, ಉತ್ತರ ಕೊರಿಯಾದಲ್ಲಿ ಬದುಕುವುದಕ್ಕಿಂತ, ಇಂತಹ ವಿದೇಶಿ ಕೆಲಸಗಳೇ ಎಷ್ಟೋ ಉತ್ತಮ. ಹಲವರು ಈ ರೀತಿಯ ಕೆಲಸಕ್ಕೆ ತೆರಳಲು ಲಂಚ ನೀಡುತ್ತಿದ್ದಾರೆ ಎಂದು ಉತ್ತರ ಕೊರಿಯಾದಿಂದ ತಪ್ಪಿಸಿಕೊಂಡು ಬಂದವರು ಹೇಳುತ್ತಿದ್ದಾರೆ.

**ಗೊತ್ತಿರದ ಪ್ರದೇಶದ ಸಮಸ್ಯೆ :** ಉತ್ತರ ಕೊರಿಯಾದ ಸೈನಿಕರಿಗೆ ಕೊರಿಯಾ ಬೆಟ್ಟದ ಪ್ರದೇಶಗಳಲ್ಲಿ ಸಮರದ ತರಬೇತಿ ನೀಡಲಾಗಿದೆ. ಅವರಿಗೆ ರಷ್ಯಾ - ಉಕ್ರೇನ್ ಬಯಲು ಪ್ರದೇಶದ ಸಮರದ ಬಗ್ಗೆ ಹೆಚ್ಚಿನ ತಿಳುವಳಿಕೆ ಇಲ್ಲ. ಆಧುನಿಕ ಯುದ್ಧ, ಡ್ರೋನ್ ಬಳಕೆಯ ಬಗ್ಗೆಯೂ ತಿಳಿದಿಲ್ಲ. 1950-53ರ ಕೊರಿಯಾ ಸಮರದ ನಂತರ ಉತ್ತರ ಕೊರಿಯಾ ಯಾವುದೇ ದೊಡ್ಡ ಸಮರದಲ್ಲಿ ಭಾಗಿಯಾಗಿಲ್ಲ ಎಂದು ಪರಿಣಿತರು ಹೇಳಿದ್ದಾರೆ.

ರಷ್ಯಾಗೆ ರವಾನೆಯಾಗಿರುವ ಸೈನಿಕರು ಹದಿಹರೆಯದವರು ಇಲ್ಲವೇ 20ರ ಹರೆಯದವರಾಗಿದ್ದಾರೆ. ಅವರನ್ನು ಇಂತಹ ಅಪಾಯಕಾರಿ ಯುದ್ಧ ಸ್ಥಳಕ್ಕೆ ಕಳಿಸಿದರೆ ಸಾವಿನ ಅಪಾಯ ಅತ್ಯಂತ ಹೆಚ್ಚಾಗಿದೆ ಎಂದು ಸಿಯೋಲ್ ಹಕ್ಕುಗಳ ಸಂಘಟನೆಯ ನಾಯಕರಾಗಿರುವ ಚೋಯ್ ಜುಂಗ್ - ಹೂನ್ ಹೇಳಿದ್ದಾರೆ. ಇದುವರೆಗೂ ಉತ್ತರ ಕೊರಿಯಾ ಸೈನಿಕರನ್ನು ಕಳಿಸಿರುವ ಬಗ್ಗೆ ಅಧಿಕೃತ ಹೇಳಿಕೆ ನೀಡಿಲ್ಲ. ವಿದೇಶಿ ನೆಲದಲ್ಲಿ ನಮ್ಮ ಸೈನಿಕರು ಸಾವನ್ನಪ್ಪಿದ್ದಾರೆ ಎಂಬುದು ಸ್ಥಳೀಯರಲ್ಲಿ ಅಸಮಾಧಾನವಾಗಲಿದೆ. ಹೀಗಾಗಿ ಈ ಮಾಹಿತಿಯನ್ನು ತನ್ನ ಜನರಿಂದಲೂ ಮುಚ್ಚಿಡುವ ಸಾಧ್ಯತೆ ಇದೆ ಎಂದು ದಕ್ಷಿಣ ಕೊರಿಯಾದ ಕೊರಿಯಾ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವ ನಾಮ್ ಹೇಳಿದ್ದಾರೆ.

## ದೀಪವಾಗಲಿ ದೀಪಾವಳಿ



ಬಾಳೆಂಬ ಬಳ್ಳಿಯಲಿ
ಹೂವು ಅರಳಿ ಪರಿಮಳವ ಬೀರಲಿ
ಬೆಳಕಿನ ಕಿರಣ ಮೂಡಲಿ
ಜ್ಞಾನಜ್ಯೋತಿ ಪ್ರಜ್ವಲಿಸಲಿ
ಬದುಕು
ಬಂಗಾರವಾಗಲಿ
ಮತ್ತೆ ಬಂದಿದೆ
ದೀಪಾವಳಿ !

ದೀಪದಂತೆ ನಾವು ಕೂಡ
ಬಾಳಿಗೆ ಬೆಳಕು ಆಗೋಣ
ಆತ್ಮಜ್ಯೋತಿಯ ಅರಿಯೋಣ
ಸಾಧನೆಯ ಹಾದಿಯಲ್ಲಿ
ಸಾಗೋಣ
ಮತ್ತೆ ಬಂದಿದೆ ದೀಪಾವಳಿ !

ಮಕ್ಕಳು ನಲಿಯುತ
ಹಿರಿಯರ ವಂದಿಸುತ
ಸಿಹಿ ಊಟ ಸವಿಯುತ
ಪಟಾಕಿ ಹಾರಿಸುತ
ಮತ್ತೆ ಬಂದಿದೆ ದೀಪಾವಳಿ !

ಅಜ್ಜ-, ಅಜ್ಜಿ,; ಅಪ್ಪ-ಅಮ್ಮ
ಮಕ್ಕಳು ಸೇರಿ ನಲಿವ ಹಬ್ಬ
ಉಡುಗೆ ತೊಡುಗೆ ಸಿಂಗಾರ
ಬದುಕಲಿ ಇದುವೇ ಬಂಗಾರ
ಮತ್ತೆ ಬಂದಿದೆ ದೀಪಾವಳಿ !

ತಳಿರು ತೋರಣಗಳ
ಶೃಂಗಾರ
ಲಕ್ಷ್ಮಿ ಪೂಜೆಯ ಕೈಂಕರ್ಯ
ಮನೆ- ಮನೆಯಲಿ ಆಕಾಶಬುಟ್ಟಿ
ಮುಗಿಲೆತ್ತರ ಪಟಾಕಿ ಸದ್ದು
ಬೆಡಗು ಭಿನ್ನಾಣಗಳ ಚಿತ್ತಾರ
ಮತ್ತೆ ಬಂದಿದೆ ದೀಪಾವಳಿ !

ಸಂತೋಷದ ಸಡಗರ
ಸಂಭ್ರಮಿಸುವ ವೈಯ್ಯಾರ
ಬೆಳಕಿನ ಕಿರಣಗಳ ಮಂದಾರ
ಆಗಲಿ ಅರ್ಥಪೂರ್ಣ ದೀಪಾವಳಿ
ಮತ್ತೆ ಬಂದಿದೆ ದೀಪಾವಳಿ !

**- ಜೆಂಬಿಗಿ ಮೃತ್ಯುಂಜಯ,**
ಕನ್ನಡ ಉಪನ್ಯಾಸಕರು, ದಾವಣಗೆರೆ.

## ಸಿರಿ ದೇವಿ



ಲಕುಮಿ ಬರುವಳಮ್ಮ
ಮನೆಗೆ.....
ಮಹಾ ಲಕುಮಿ
ಬರುವಳಮ್ಮ......

ಕಾರ್ತಿಕ ಮಾಸದ
ಅಮಾವಾಸ್ಯೆಯಲ್ಲಿ
ಹೊಂಗಿರಣದ ಬೆಳಕನ್ನು ತಾ
ತರುವಳಮ್ಮ
ಸರ್ವಾಲಂಕಾರ ಶೋಭಿತೆ
ಬರುತಿಹಳಮ್ಮ
ಭಕ್ತರ ಮನೆಗೆ ಲಕುಮಿ
ಬರುವಳಮ್ಮ

ಕತ್ತಲನು ಸರಿಸುತ್ತಾ ಬೆಳಕನ್ನು
ಸುರಿಸುತ್ತಾ
ಸಿರಿದೇವಿ ನಗುನಗುತಲಿ
ಬರುತಿಹಳಮ್ಮ...
ಘಲು ಘಲು ನಾದದಲಿ
ಹೆಜ್ಜೆಯನ್ನಿಕ್ಕುತ್ತ
ಬೆಳಕಿನ ಸಾಲಿನಲಿ ತೇಲಿ
ಬರುತಿಹಳಮ್ಮ...

ಅಷ್ಟ ಲಕ್ಷ್ಮೀದೇವಿ...ಅಷ್ಟ
ವೈಭವದಲ್ಲಿ
ಭಾವುಕ ಭಕ್ತರ ಮನದಲ್ಲಿ
ತಾ ನೆಲೆಸುತ್ತ
ಸ್ಥಾಪಿತ ಕಳಶದಲಿ ತಾ
ನೆಲೆಯಾಗುವೆನೆಂದು
ಪೂಜೆಯ ವೇಳೆಗೆ
ಲಕುಮಿ ಬರುವಳಮ್ಮ

ದೀಪಾವಳಿಯ ದೀಪಗಳ
ಹೊಂಬೆಳಕಿನಲ್ಲಿ
ಬೆಳಕಿನ ಕಿರಣದ ಕಾಂತಿಯಲಿ
ನಾನಿರುವೆನೆಂದು
ಅಭಯ ಹಸ್ತದಲಿ ನಸುನಗುತ
ತಾ ನಿಂದು....
ಸಿರಿದೇವಿ ಮಹಾತಾಯಿ ಲಕುಮಿ
ಬರುವಳಮ್ಮ

**- ವೀಣಾ ಕೃಷ್ಣಮೂರ್ತಿ,**
ದಾವಣಗೆರೆ.



## ಹಳೆ ಊರಲ್ಲಿನ ಹಳೆಯ ಕಾಲದ ದೀಪಾವಳಿ ಸ್ವಾರಸ್ಯಗಳು...

### ಬಾಲ್ಯದಲ್ಲಿನ ದೀಪಾವಳಿಯ ಕೆಲವು ಸ್ವಾರಸ್ಯಗಳು, ನೆನಪುಗಳು

# 'ಸುಬ್ರಾಯ ಶೆಟ್ಟರ ಸೆಟಲೈಟ್? !!'



**ಹೆಚ್.ಬಿ. ಮಂಜುನಾಥ್**
ಹಿರಿಯ ಪತ್ರಕರ್ತ, ದಾವಣಗೆರೆ.

1969ನೇ ಇಸವಿಯ ದೀಪಾವಳಿ, ಚೌಕಿಪೇಟೆಯ ಮಕ್ಕಳು ಪಟಾಕಿಯ ಬಗ್ಗೆ ಮಾತನಾಡುತ್ತಿದ್ದರು. ರಾಕೆಟ್ ನ ವಿಷಯ ಬಂತು. 'ಅಮೆರಿಕದ ರಾಕೆಟ್ಟು ಚಂದ್ರನ ಮ್ಯಾಗೆ ಇಳೀತಂತೆ!' ಅಂತ ಒಬ್ಬ ಹುಡುಗ ಹೇಳಿದ. ಸುಬ್ರಾಯ ಶೆಟ್ಟರ ಹಾಸಿಗೆ ಅಂಗಡಿಯ ಕಟ್ಟೆ ಮೇಲೆ ಕುಳಿತಿದ್ದ ಗುರುಲಿಂಗಪ್ಪ (ಶಿಕ್ಷಕಿ ಶಿವಲೀಲಾರ ಸಹೋದರ) 'ಅದು ರಾಕೆಟ್ ಅಲ್ಲ ಸೆಟಲೈಟ್' ಅಂತ ತಿದ್ದಿ ಹೇಳಿದರು.

1969ರ ಜುಲೈ 20ನೇ ತಾರೀಕು ಅಮೆರಿಕದ ಅಪೋಲೋ 11 ಉಪಗ್ರಹ ಮೂಲಕ ಚಂದ್ರನ ಮೇಲೆ ಗಗನಯಾತ್ರಿಗಳಾದ ನೀಲ್ ಆರ್ಮ್ ಸ್ಟ್ರಾಂಗ್, ಎಡ್‌ವಿನ್‌ಆಲ್ ಡ್ರಿನ್ ಪಾದಾರ್ಪಣೆ ಮಾಡಿದ್ದರು. ಮೈಕೆಲ್ ಕಾಲಿನ್ಸ್ ಚಾಲಕರಾಗಿ ನೌಕೆಯನ್ನು ನಿಯಂತ್ರಿಸಿದ್ದರು. ರಾಕೆಟ್ ಮೂಲಕ ಆಕಾಶಕ್ಕೆ ಉಪಗ್ರಹದ ಉಡಾವಣೆ ಬಗ್ಗೆಯೂ ಗುರುಲಿಂಗಪ್ಪ ಮಕ್ಕಳಿಗೆ ವಿವರಿಸಿದರು. ಅಲ್ಲೇ ಇದ್ದ ಸುಬ್ರಾಯ ಶೆಟ್ಟರು 'ರಾಕೆಟ್ ಯಾಕ್ ಬೇಕು? ನಾವ್ ಹಂಗೇ ಆಕಾಶಕ್ಕೆ ಕಳಿಸ್ತೀವಿ' ಎಂದರು. ಅದು ಹೆಂಗೆ ಶೆಟ್ರೇ?' ಎಂದು ಮಕ್ಕಳು ಆಶ್ಚರ್ಯದಿಂದ ಕೇಳಿದಾಗ 'ನಾವು ಸಾಗರದಾಗಿದ್ದಾಗ ಅಂತದೆಲ್ಲ ಮಾಡೀವಿ' ಎಂದರು ಶೆಟ್ಟರು. ಅದೇ ವೇಳೆಗೆ ಅಲ್ಲಿಗೆ ಬಂದ ಎದುರು ಮನೆಯ ಜಯರಾಮ್ ರಾಯ್ಕರ್ (ಪ್ರಸಿದ್ಧ ನ್ಯಾಯವಾದಿ ಏಕನಾಥ ರಾಯ್ಕರ್ ರವರ ಹಿರಿ ಸಹೋದರರು) ರವರು 'ನಮ್ಮ ಅಂಕೋಲಾ-ಕಾರವಾರದ ಕಡೆಗೂ ದೀಪಾ ವಳಿಯಾಗೆ ಅಂತವು ಮಾಡಿ ಆಕಾಶಕ್ಕೆ ಬಿಟ್ಟೇವಿ' ಎಂದರು. 'ಇಲ್ಲೂ ಯಾಕೆ ಮಾಡಬಾರದು' ಎಂದರು ಗುರುಲಿಂಗಪ್ಪ. 'ಹೌದು ಶೆಟ್ರೇ ಮಾಡ್ರಿ ಮಾಡ್ರಿ' ಎಂದರು ಮಕ್ಕಳು.

ಇದನ್ನೆಲ್ಲಾ ಕೇಳಿಸಿಕೊಳ್ಳುತ್ತಿದ್ದ ಪಟ್ಟೇದ ಗಂಗಾಧರಪ್ಪ (ಜಯದೇವ ಪ್ರೆಸ್ ಕಣ್ಮಕುಪ್ಪೆ ಗುರುಪಾದಪ್ಪನವರ ಅಳಿಯಂದಿರು) 'ಅದುಕ್ ಬೇಕಾದ ಸಾಮಾನ್ ನಾನ್ ತರಿಸಿ ಕೊಡ್ತೀನಿ' ಅಂದರು. ವಸ್ತುಗಳು ಬಂದವು. ಶೆಟ್ಟರ ಅಂಗಡಿ ಮುಂದೆ 'ಆಕಾಶ ವಾಹನ'ದ ತಯಾರಿ ಪ್ರಾರಂಭವಾಗಿಯೇ ಬಿಟ್ಟಿತು!.

ಶೆಟ್ಟರು ಬಿದಿರನ್ನು ಸೀಳಿ ಗೂಡಾಗಿ ಮಾಡಿದರು. ಗಟ್ಟಿಯಾದ ಪಾರದರ್ಶಕ ಹಾಳೆಯನ್ನು ಸುತ್ತಲೂ ಅಂಟಿಸಿದರು. ಜಯರಾಮ್ ರಾಯ್ಕರ್ ಗೂಡಿನ ಮೇಲ್ಭಾಗದಲ್ಲಿ ದಪ್ಪ ಕಾಗದದಿಂದ ಪ್ರೊಫೆಲರ್ ತರದ 'ಗಿರಿಗಿಟ್ಲೆ'ಯನ್ನು ನಾಜೂಕಾಗಿ ಮಾಡಿ ಕೂರಿಸಿದರು!. ಮಧ್ಯದಿಂದ ಒಂದು ತಂತಿ ಇಳಿಬಿಟ್ಟು ಅದಕ್ಕೆ ಹಣತೆ ದೀಪವನ್ನು ನೇತು ಬಿಡುವ ವ್ಯವಸ್ಥೆಯೂ ಆಯಿತು. ಇದಕ್ಕೆಲ್ಲಾ ಶೆಟ್ಟರ ಎದುರು ಮನೆಯ ಅಣ್ಣಿಗೇರಿ ಶಿವಬಸಪ್ಪ ಮುಂತಾದವರು ಕೈ ಜೋಡಿಸಿದರು.

ಹಣತೆಗೆ ಎಣ್ಣೆ ಹಾಕಿ ದೀಪ ಹೊತ್ತಿಸುತ್ತಲೇ ಗೂಡೊಳಗಿನ ಗಾಳಿ ಬಿಸಿಯಾಗಿ ಮೇಲ್ಭಾಗದ ಗಿರಿಗಿಟ್ಲೆ ಪ್ರೊಫೆಲರಿನಂತೆ ನಿಧಾನವಾಗಿ ತಿರುಗಲಾರಂಭಿಸಿತು!!. ಇದರಿಂದಾಗಿ ಬಹುಷಃ ಗಾಳಿಯ ಕೆಳಮುಖ ಒತ್ತಡ ನಿವಾರಣೆಯಾಯಿತು. ಗಾಳಿಯ ಮೇಲ್ಮುಖ ಒತ್ತಡದಿಂದಾಗಿ ಇರಬಹುದು ಗೂಡು ದೀಪದ ಸಹಿತವಾಗಿ ನಿಧಾನವಾಗಿ ಮೇಲೇರುತ್ತಾ ಸ್ವಲ್ಪ ದೂರ ಹೋಯಿತು!!.

ಮಕ್ಕಳಿಗಷ್ಟೇ ಅಲ್ಲ, ಆ ಹೊತ್ತಿಗೆ ಅಲ್ಲಿ ಬಂದು ಸೇರಿದ್ದ ದೊಡ್ಡವರು ಸಹಾ ಆಶ್ಚರ್ಯ ಹಾಗೂ ಖುಷಿಯಿಂದ ಉದ್ಘಾರ ತೆಗೆದು ಚಪ್ಪಾಳೆ ತಟ್ಟಿದರು. 'ಚಂದ್ರನ್ ಮ್ಯಾಗೆ ಹೋಗಾದ್ ಬಿಟ್ಟು ಇಲ್ಲೇ ಇಳಿತಲ್ಲಾ ಶೆಟ್ರೇ??' ಎಂದು ಬಾಲಕ ಈರಣ್ಣ ಕೇಳಿದ. 'ಈಗ ಗಾಳಿ ಸರಿ ಇಲ್ಲ, ನಡರಾತ್ರಿ ಮತ್ತೆ ಬಿಡ್ತೀನಿ, ಬರಾ ಹುಣ್ಣಿಮಿ ರಾತ್ರಿ ದುರ್ಬಿನ್ ನಾಗೆ ನೋಡ್ರಲೇ ಚಂದ್ರನ್ ಮ್ಯಾಗ್ ಇಳಿದಿದ್ದು ಕಾಣಿಸ್ತೇತಿ' ಎಂದರು ತಮಾಷೆಯಾಗಿ ಶೆಟ್ಟರು.

ಇದಾಗಿ 15 ದಿನಗಳ ನಂತರ ಕಾರ್ತಿಕ ಶುದ್ಧ ಹುಣ್ಣಿಮೆ ರಾತ್ರಿ ಈರಣ್ಣ, ರುದ್ರೇಶಿ ಹಾಗೂ ಕೆಲ ಹುಡುಗರು ನನ್ನ ಬಳಿ ಬಂದು 'ಸ್ವಾಮಣ್ಣ (ನನ್ನನ್ನು ಸ್ವಾಮಿ ಎಂದೇ ಕರೆಯುತ್ತಿದ್ದರು) 'ನಿಮ್ಹತ್ರ ದುರ್ಬಿನ್ ಐತಾ?' ಎಂದು ಕೇಳಿದರು. 'ಯಾಕೆ?' ಎಂದೆ. 'ಅವತ್ತು ದೀಪಾವಳೀಲಿ ಶೆಟ್ರು ಬಿಟ್ಟ ಸ್ಯಾಟಿಲೈಟು ಚಂದ್ರನ ಮ್ಯಾಗೆ ಇಳದೇತಾ ನೋಡಕ್ಕೆ' ಎಂದರು. ನಾನು ನಗುತ್ತಾ ಹೇಳಿದೆ 'ನನ್ಹತ್ರ ದುರ್ಬೀನು ಇಲ್ಲ, ಇದ್ರೂ ಅದರಿಂದ ಕಾಣೆಸಲ್ಲ, ಅಮೆರಿಕದ ಉಪಗ್ರಹ ನಿಯಂತ್ರಣ ಕೇಂದ್ರದಲ್ಲಿ ಭಾರೀ ಟೆಲಿಸ್ಕೋಪ್ ಅಂತ ಇರುತ್ತೆ, ಅದರಲ್ಲಿ ನೋಡಿದ್ರೆ ಕಾಣಿಸುತ್ತೆ' ಎಂದೆ. ಮಕ್ಕಳು ನಿರಾಶರಾಗಬಾರದೆಂದು ಸುಳ್ಳು ಹೇಳಿದೆ. 'ಹೌದಾ!' ಎಂದು ಮಕ್ಕಳು ಹೋದರು.

# ಲಕ್ಷ್ಮಿ ರಂಗನಾಥ ಸ್ವಾಮಿ ತೆಪ್ಪೋತ್ಸವಕ್ಕೆ ಸಿದ್ಧತೆ



ಮಲೇಬೆನ್ನೂರು, ಅ.31- ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ ಕೊಮಾರನಹಳ್ಳಿ ಗ್ರಾಮದ ಹರಿಹರಾತ್ಮಕ ಹೆಳವನಕಟ್ಟೆ ಲಕ್ಷ್ಮಿ ರಂಗನಾಥ ಸ್ವಾಮಿ ತೆಪ್ಪೋತ್ಸವ ತಯಾರಿಗೆ ಬುಧವಾರ ವಿಧ್ಯುಕ್ತವಾಗಿ ಚಾಲನೆ ನೀಡಲಾಗಿದೆ.

ಸಾಂಪ್ರದಾಯಿಕ ರೀತಿ ಅರ್ಚಕ ಗುರುರಾಜಾಚಾರ್ ನೇತೃತ್ವದಲ್ಲಿ ವಿನಾಯಕ, ಕ್ಷೇತ್ರನಾಥ ಹಾಗೂ ಗಂಗಾ, ತೆಪ್ಪ ಕಟ್ಟುವ ಸಾಮಗ್ರಿಗಳಾದ ಬಿದರಿನ ಬೊಂಬು, ಡ್ರಂ, ಹಗ್ಗದ ಪೂಜೆ ನೆರವೇರಿಸಿದರು. ಗೋವಿಂದ ನಾಮ ಸ್ಮರಣೆ ಮಾಡುತ್ತಲೇ ತೆಪ್ಪ ಕಟ್ಟುವ ಕೆಲಸ ಸಾಗಿತ್ತು.

48 ಡ್ರಂ ಬಳಸಿ 2 ತೆಪ್ಪ ಕಟ್ಟಲಾಗುವುದು, ಕೊಮಾರನಹಳ್ಳಿ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಾದ ಮಲೇಬೆನ್ನೂರು, ದಿಬ್ಬದಹಳ್ಳಿ, ಹರಳಹಳ್ಳಿ, ಹಾಲಿವಾಣ, ಕೊಪ್ಪ ಮೊದಲಾದ ಕಡೆಯಿಂದ ಸ್ವಯಂ ಪ್ರೇರಣೆಯಿಂದ ಯಾವುದೇ ಫಲಾಪೇಕ್ಷೆ ಇಲ್ಲದೆ ಭಕ್ತರು ಸೇವೆ ಮಾಡುತ್ತಿದ್ದಾರೆ ಎಂದು ರಾಮಚಂದ್ರಾಚಾರ್ ಪ್ರಶಂಸೆ ವ್ಯಕ್ತಪಡಿಸಿದರು.

15 ವರ್ಷದ ನಂತರ ಉತ್ಸವ ಮಾಡುವ ಭಾಗ್ಯ ಸಿಕ್ಕಿದೆ ಎಂದು ಕೇಶವ, ಗದ್ದಿಗೇಶ್, ರಂಗನಾಥ, ಮಂಜುನಾಥ್, ಕಲ್ಲೇಶ್, ಧನಂಜಯ, ಆಂಜನೇಯ, ಹಾಲೇಶ್ ತಿಳಿಸಿದರು.

### ಹೆಳವನಕಟ್ಟೆ

ಈಗಾಗಲೇ ಮೊದಲ ಹಂತದ ಸ್ವಚ್ಛತೆ ಮಾಡಲಾಗಿದೆ, ಕೆರೆಯಲ್ಲಿ ಬೆಳದಿರುವ ಜಲ ಸಸ್ಯ, ಮುಳ್ಳುಕಂಟಿ, ಲಂಟನ್ ಗಿಡ ತೆರವು ಮಾಡಲಾಗುವುದು ಎಂದು ರೇವಣಸಿದ್ದಪ್ಪ ಐರಣಿ ಮೂರ್ತಿ, ಮಹೇಶ್ ಮಾಹಿತಿ ನೀಡಿದರು.

ಕೆರೆದಂಡೆ ಅಲ್ಪಸ್ವಲ್ಪ ದುರಸ್ತಿ, ಮುಖ್ಯ ಸ್ಥಳದ ಅಟ್ಟಣಿಗೆ ನಿರ್ಮಾಣ ಮುಂದಿನ ವಾರ ಮಾಡಲಾಗುವುದು ಎಂದರು.

ದಾನಿಗಳು ಕೆಲಸ ಮಾಡುವವರಿಗೆ ತಿಂಡಿ, ಕುಡಿಯುವ ನೀರು, ಚಹಾ, ಕಾಫಿ ಊಟೋಪಚಾರ ವ್ಯವಸ್ಥೆ ಮಾಡಿರುವುದು ವಿಶೇಷವಾಗಿತ್ತು.

ಒಟ್ಟಾರೆ ತೆಪ್ಪೋತ್ಸವ ದೀಪೋತ್ಸವದ ಸಂಭ್ರಮ ಎಲ್ಲೆಡೆ ಮನೆ ಮಾಡಿದೆ.

**ಕಂಕಣಧಾರಣೆ :** ತೆಪ್ಪೋತ್ಸವದ ಅಂಗವಾಗಿ ಸೋಮವಾರ ಬೆಳಗ್ಗೆ 11-30 ಕ್ಕೆ ಶ್ರೀ ರಂಗನಾಥ ಸ್ವಾಮಿಗೆ ಕಂಕಣಧಾರಣೆ ಮತ್ತು ಕೆರೆಯ ನಡುಗಡ್ಡೆಯಲ್ಲಿ ಧ್ವಜ ಕಂಬ ಸ್ಥಾಪನೆ ಮಾಡಲಾಗುವುದೆಂದು ಸುರೇಶ್ ಶಾಸ್ತ್ರಿ ತಿಳಿಸಿದ್ದಾರೆ.

## ಚಾಣಕ್ಯ ಕಾಲೇಜು ರಾಜ್ಯ ಮಟ್ಟಕ್ಕೆ ಆಯ್ಕೆ



ದಾವಣಗೆರೆ, ಅ.31- ನಗರದ ಚಾಣಕ್ಯ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿಯರು ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಮಟ್ಟದ ಬ್ಯಾಸ್ಕೆಟ್ ಬಾಲ್ ಹಾಗೂ ನೆಟ್ ಬಾಲ್ ಪಂದ್ಯಾವಳಿಯಲ್ಲಿ ಭಾಗವಹಿಸಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆಯುವ ಮೂಲಕ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ತರಬೇತುದಾರ ಮಂಜುನಾಥ್ ಅವರ ಮಾರ್ಗದರ್ಶನದಲ್ಲಿ ಮನ್ವಿತ ಮಸ್ತಿ, ವರ್ಧಿನಿ, ಪೂಜಾ, ಶಾಂತಿ ಬಾಯಿ, ಕಾವ್ಯ, ನವ್ಯ, ಚಂದನ ಮತ್ತು ಗೌರಿ ಉತ್ತಮ ಸಾಧನೆ ಮಾಡಿದ್ದಾರೆ.

## ಜಾಮೀನು ನೀಡಿದ ಆರು ತಿಂಗಳ ನಂತರ ಬಾಂಡ್ ಷರತ್ತು ವಿಧಿಸಲಾಗದು

ನವದೆಹಲಿ, ಅ. 30 - ಜಾಮೀನು ನೀಡಿದ ಆರು ತಿಂಗಳ ನಂತರ ಜಾಮೀನು ಬಾಂಡ್ ಸಲ್ಲಿಸುವ ಷರತ್ತು ವಿಧಿಸಲಾಗದು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ. ನ್ಯಾಯಮೂರ್ತಿಗಳಾದ ಬೇಲ ತ್ರಿವೇದಿ ಹಾಗೂ ಸತೀಶ್ ಚಂದ್ರ ಶರ್ಮ ಅವರನ್ನು ಒಳಗೊಂಡ ಪೀಠ ಈ ನಿಲುವು ತಳೆದಿದೆ. ಬಿಹಾರದ ವ್ಯಕ್ತಿಯೊಬ್ಬರಿಗೆ ನ್ಯಾಯಾಲಯ ಜಾಮೀನು ನೀಡಿತ್ತು. ಇದಾದ ಆರು ತಿಂಗಳ ನಂತರ ಬಿಹಾರ ಪಾನ ನಿಷೇಧ ಹಾಗೂ ಅಬಕಾರಿ ತಿದ್ದುಪಡಿ ಕಾಯ್ದೆಯ ಅನ್ವಯ ಜಾಮೀನು ಬಾಂಡ್‌ಗಳನ್ನು ಸಲ್ಲಿಸುವಂತೆ ಪಾಟ್ನಾ ಹೈಕೋರ್ಟ್ ತಿಳಿಸಿತ್ತು.

ವಿಚಾರಣಾ ನ್ಯಾಯಾಲಯದಿಂದ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ ವ್ಯಕ್ತಿ 10,000 ರೂ. ಬಾಂಡ್ ಹಾಗೂ ಇದೆ ಮೊತ್ತದ ಎರಡು ಶ್ಯೂರಿಟಿಗಳನ್ನು ಸಲ್ಲಿಸಬೇಕು ಎಂದು ಹೈಕೋರ್ಟ್ ಆದೇಶದಲ್ಲಿ ತಿಳಿಸಲಾಗಿತ್ತು. ನಂತರ ಈ ವಿಷಯ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು


**ವಾಣಿಜ್ಯ ಕಟ್ಟಡ ಬಾಡಿಗೆಗಿದೆ**
ದಾವಣಗೆರೆ ನರಸರಾಜ ರಸ್ತೆಯಲ್ಲಿ ಹೊಸದಾಗಿ ಕಟ್ಟಿರುವ 3 ಅಂತಸ್ತಿನ ಆರ್‌ಸಿಸಿ ರೂಫಿಂಗ್‌ವುಳ್ಳ, ಲಿಫ್ಟ್ ಸೌಕರ್ಯವುಳ್ಳ ಹಾಗೂ ಪ್ರತೀ ಫ್ಲೋರ್‌ಗೂ ಪ್ರತ್ಯೇಕ ವಾಷ್ ರೂಮ್, 24 ಗಂಟೆ ನೀರಿನ ಸೌಕರ್ಯವುಳ್ಳ ವಾಣಿಜ್ಯ ಉಪಯೋಗದ ವಿದ್ಯುತ್ ಸೌಲಭ್ಯವುಳ್ಳ ಆಧುನಿಕ 5080 ಚ.ಅಡಿ ಅಳತೆಯ ವಾಣಿಜ್ಯ ಕಟ್ಟಡ ಬಾಡಿಗೆಗೆ ದೊರೆಯುತ್ತದೆ. ಸಂಪರ್ಕಿಸಿ :
94812 62505

**ಸೈಟುಗಳು ಮಾರಾಟಕ್ಕಿವೆ**
ಬನಶ್ರೀ ಲೇಔಟ್ ಹತ್ತಿರ ಸಿರಿಮನೆ ಡಾಬಾ ಹಿಂಭಾಗ 30x57 North, 30x50 South, 30x40 West, 30x40 East, Rate - 3800/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**ಗ್ಯಾಸ್ ಗೀಜರ್ ರಿಪೇರಿ**
We repair your all types of Gas Geyser.
Ratna Marketing
99019 40727

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**Requirement**
Receptionist (only female)
Age: 20-25, Salary: 10,000 - 15,000
HAIRPOINT SALON
MCC `B' block, 7th main 3rd cross, Davanagere.
9148319342, 9738664400
08192220755

**HOUSES FOR RENT AND LEASE**
1BHK, 2BHK, Vidyangara, Siddaveerappa Badavane, SS Layout, A&B Block, Anjaneya Badavane, 4BHK Mahalakshmi Layout & Flat aslo available for rent.
Dakshith Iyanahalli
96061 26471

**CARS FOR SALE**
Vitara Brezza ZDI +
ALTO K10 Vxi
Innova Crysta [Z]
RENAULT DUSTER
Contact :
Daivik Iynahalli
99456 43223

**ಸೈಟುಗಳು ಮಾರಾಟಕ್ಕಿವೆ**
ದೂಡಾ ಅಪ್ರೂವ್ಡ್ ಸೈಟುಗಳು ವಿಶೇಷ ರಿಯಾಯಿತಿಯಲ್ಲಿ ಮಾರಾಟಕ್ಕಿವೆ.
30x40, 30x50, 40x60
93431 10009
98458 61220

**ಮನೆಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್ ನಿಟ್ಟುವಳ್ಳಿ ದಾವಣಗೆರೆ ಹತ್ತಿರ ಇರುವ 20X30 ಸೈಜಿನ ಮನೆಗಳು ಮಾರಾಟಕ್ಕೆ ಇವೆ. ಸಂಪರ್ಕಿಸಿ :
94484 39639

**SITES FOR SALE**
30x45 size at Karur village, DUDA approved
Contact : Bhuvi.com
91489 09259

**ವಿಲ್ಲಾ ಸೈಟ್/ಫಾರ್ಮ್ ಹೌಸ್ ಲ್ಯಾಂಡ್ ಮಾರಾಟಕ್ಕಿದೆ**
ದಾವಣಗೆರೆ ಸಿಟಿಗೆ ಸೇರ್ಪಡೆಯಾಗಿರುವ, ಶಿರಮಗೊಂಡನಹಳ್ಳಿಯಲ್ಲಿ 60x140 ಅಡಿ ಅಳತೆಯ 2 ಸೈಟುಗಳು
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
99002 56739, 88677 69919

**ಬೇಕಾಗಿದ್ದಾರೆ**
ಹೊಳಲ್ಕೆರೆ ತಾಲ್ಲೂಕಿನಲ್ಲಿ ತೋಟ ನೋಡಿಕೊಳ್ಳಲು ಒಂದು ಕುಟುಂಬ ಬೇಕಾಗಿದೆ. ಅನುಭವವಿದ್ದವರಿಗೆ ಆದ್ಯತೆ.
94484 39639

**WANTED**
Fresher's or Learner's For Auditor Office
(Gents Only)
86180 47131

**ಕೆಲಸಕ್ಕೆ ಬೇಕಾಗಿದ್ದಾರೆ**
ಶಿವಸಂಗಮ ಚಿಟ್ಸ್ ಪ್ರೈ.ಲಿ.
ಶಿವಸಂಗಮ ಫೈನಾನ್ಸ್ (ರಿ)
ದಾವಣಗೆರೆ ಶಾಖೆಯಲ್ಲಿ ಮಾರ್ಕೆಟಿಂಗ್ & ರಿಕವರಿ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಸ್ಥಳ : ಡಾ. ಬಿ.ಆರ್. ಶಿವಶಂಕರ ನಾಗರತ್ನಮ್ಮ ಸಂಕೀರ್ಣ, ಪಿ.ಜೆ. ಬಡಾವಣೆ, 4ನೇ ಮೇನ್, ರಾಮ್ ಅಂಡ್ ಕೋ ಹತ್ತಿರ, ದಾವಣಗೆರೆ.
73533 29440, 81972 20933

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ದೂಡಾ ಸೈಟುಗಳು ಮಾರಾಟಕ್ಕಿವೆ**
DHUDA Approved Sites for sale at Harihara.
Size 20x50, 20x40, 30x50, 40x40.
ಸಂಪರ್ಕಿಸಿ.
80886 73838

**ಮಾರಾಟಕ್ಕಿವೆ**
ದಾವಣಗೆರೆ ಸಿಟಿ, ಮಹಾಲಕ್ಷ್ಮಿ ಬಡಾವಣೆಯ 40x40 ಅಡಿ & 64x40 ಅಡಿ (5 ಗುಂಟೆ ಜಾಗದಲ್ಲಿ ಬರತಕ್ಕ) ಅಳತೆಯ 2 ಸೈಟುಗಳು ಮಾರಾಟಕ್ಕಿವೆ. ಮಾಹಿತಿಗಾಗಿ ಸಂಪರ್ಕಿಸಿ:
99002 56739, 88677 69919

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ ಫೈನಾನ್ಸ್,**
GST & Income Tax
ನೋಂದಣಿ ನವೀಕರಣ ಮಾಡಿಕೊಡುತ್ತೇವೆ.
Mob: 94838 62779

**ಹೋಟೆಲ್ ಮಾರಾಟಕ್ಕಿದೆ**
ಲಕ್ಷ್ಮಿ ಫ್ಲೋರ್ ಮಿಲ್ ಹತ್ತಿರ ದಾವಣಗೆರೆ - 4. ಸಂಪರ್ಕಿಸಿ :
84948 20288

**WANTED**
Receptionist Cum Telecaller for professional Gym
Good kannada & English knowledge willing to work on sunday also (female only)
Salary 15,000 to 20,000
Part time also available
93536-26664

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

## ಉಸಿರು ಕೊಸರಿದರೂ ಹಸಿರಾಗಿರಲಿ ಕನ್ನಡ



ಉಸಿರು ಕೊಸರಿದರು ಹಸಿರಾಗಿರಲಿ ಕನ್ನಡ
ಕರುನಾಡಿನ ಹಾಡ ಹಾಡಲೇಬೇಕು
ನಮ್ಮಲ್ಲಿರುವ ಸರ್ವಧರ್ಮ ಸಾರಲೇಬೇಕು
ಕರ್ನಾಟಕದಲ್ಲಿ ನೂರಾರು
ಜಾತಿಗಳು
ಕಾಣುತ್ತಿವೆ ವಿವಿಧತೆಯಲ್ಲಿ
ಏಕತೆಯ ಬೇರುಗಳು
ಪ್ರತಿಯೊಬ್ಬರಲ್ಲೂ ತರುತ್ತಿದೆ
ಬದುಕಿನ ಮಾರ್ಪಾಡು
ಅಲ್ಲವೇ ಯಾಕೆಂದರೆ ನಮ್ಮದು
ಕಮ್ಮಿತ್ತು ನಾಡು!!

ವಿವಿಧ ರೀತಿಯ ಪ್ರಾಚೀನತೆ
ಹೊಂದಿರುವ ನಾಡು
ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳ ಬೀಡು
ಸಾಹಿತ್ಯ ಸಂಗೀತ ಜನಮನ ಭಾವಗಳು ಶ್ರೀಮಂತ
ಪ್ರಪಂಚದ ಭಾಷೆಗಳಲ್ಲಿಯೇ ಕನ್ನಡ ಧೀಮಂತ!!

ಕನ್ನಡಿಗರಾದ ನಾವುಗಳು ಪುಣ್ಯವಂತರು
ಶತ್ರುಗಳನ್ನು ಮಿತ್ರರನ್ನಾಗಿಸುವ ವ್ಯಕ್ತಿತ್ವದ
ಭಾವದೀರರು
ಈಚೆಗೆ ಕಾಣುತ್ತಿದೆ
ದುರಭಿಮಾನಗಳು ಮತ್ತು ದುರಭಿಮಾನಿಗಳು
ಅಗತ್ಯವಾಗಿ ಸಿಡಿದೇಳಬೇಕಿದೆ ಕನ್ನಡ ಅಭಿಮಾನಿಗಳು!!

ಕನ್ನಡವೇ ಉಸಿರಾಗಿ, ಆ ಉಸಿರು ಹಸಿರಾಗಿ,
ಹಸಿರಾದ ಉಸಿರು, ಕನ್ನಡ ಬೆಳೆಯಲಿ
ಕನ್ನಡಕ್ಕಾಗಿ ಕೈಯೆತ್ತೋಣವೇ,
ನಾಡಿನ ಹಾಡ ಹಾಡೋಣವೇ,
ಏನಂತೀರಾ ನೀವೂ ನಾವೂ ಎಲ್ಲರೂ
ಒಂದಾಗೋಣವೇ
ಸದಾ ಹಸಿರಾಗಿರುವ ಕಣ್ಣದವಾಗಲಿ
ಕರುನಾಡು ಎಲ್ಲರಿಗೂ ಉಸಿರಾಗಿರಲಿ!!

**- ಮಾರುತಿ ಹೆಚ್.ಎಂ.,** ಕಾರಿಗನೂರು.

## ಕನ್ನಡದವ್ವ

ಅವಳೆಂದರೆ ಹಾಗೆಯೇ ಒಮ್ಮೊಮ್ಮೆ 'ಸ್ವರ'ವಾಗಿ ಬಿಡುತ್ತಾಳೆ. ಮತ್ತೊಮ್ಮೆ ತನ್ನೊಡಲ ನೋವಿಗೆ 'ದೀರ್ಘ' ನಿಟ್ಟುಸಿರು ಬಿಡುತ್ತಾ ಕೆಲವೊಮ್ಮೆ ಸಣ್ಣ 'ಪದ'ವಾಗಿ ಗುನುಗುತ್ತಾಳೆ. ಇನ್ನೊಮ್ಮೆ ಕರುಣೆ ತುಂಬಿದ 'ಸಾಲಾಗಿ' ಎಲ್ಲರನ್ನು ಸಂತೈಸುತ್ತಾಳೆ.

ಅವಳಿಗೂ 'ಬಿಟ್ಟಸ್ಥಳ'ವನ್ನು ತುಂಬುವಷ್ಟು ಬೆಟ್ಟದಂತ ಸಹ್ಯಾದ್ರಿಯ ಮಡಿಲಿದೆ.

ಹರಿದ ಮನಸುಗಳನ್ನು, ಭಾವಗಳನ್ನು 'ಹೊಂದಿಸಿ ಬರೆಯುವ' ಹೃದಯ ವೈಶಾಲ್ಯತೆ ಅವಳದು.

'ಸರಿ, ತಪ್ಪು'ಗಳನ್ನು ನೇರವಾಗಿ ಗುರುತಿಸಿ 'ಕ್ರಮವಾಗಿ'ತೊದಲು ನುಡಿಯ ತಿದ್ದುವ ಮನೆ,ಮನದ ಗುರು ಅವಳು

'ವಿಭಕ್ತಿಯ' ಸಹನುಭೂತಿಯಲ್ಲಿ 'ವರ್ತನಮಾನ', ಭೂತ, ಭವಿಷ್ಯತ್ತಿನಲ್ಲೂ ಜೊತೆಯಿರುವ ವಚನಗಳ ಕೊಟ್ಟವಳು.

ಅವಳನ್ನು ವರ್ಣಿಸಲು ಕವಿತೆಗಳೇ ಬೇಕಿಲ್ಲ ಅವಳೇ 'ರೂಪಕ' ಅಕ್ಷರವೆಂಬ ಹಣತೆಗೆ ಬೆಳಕಿನ 'ವಿಶೇಷಣ' ಎಲ್ಲರ ಬಾಯಲ್ಲೂ ಅವಳದೇ ಮಾತು 'ಜನಪದ'ವಾಗಿ, 'ಜೋಗುಳ'ವಾಗಿ ಝುಳ ಝುಳನೆ ಗಂಗೆ ತುಂಗೆ ಕಾವೇರಿಯಾಗಿ ನಲಿದಾಡುವಳು.

ಅವಳೊಂತರ 'ಚುಟುಕು' ಒಮ್ಮೊಮ್ಮೆ ಯಾರಿಗೂ ಅರ್ಥವಾಗದೆ 'ಕಗ್ಗ'ವಾಗಿ ಉಳಿದು ಬಿಡುತ್ತಾಳೆ. ಅವಳ ಕಥೆಯೂ ಬರಿ ಪ್ರಬಂಧ, ಲೇಖನ, ವಿಮರ್ಶೆ, ನಾಟಕವಲ್ಲ. ಅವಳೊಂತರ ಮುಗಿಯದ ಕಾದಂಬರಿ.!

ಅವಳು ಯಾರೆಂಬ 'ಭಾವ'ಕ್ಕೆ ಜಾರಿದಾಗ ಅವಳು 'ಪ್ರಶ್ನಾರ್ಥಕ' ವಾಕ್ಯವಾಗಿ ಉಳಿದು ಬಿಡುತ್ತಾಳೆ.

ಒಮ್ಮೊಮ್ಮೆ ಅವಳು ಅದೆಷ್ಟೋ ಅದ್ಭುತಗಳನ್ನು ಅವಿತುಕೊಂಡಿರುವ 'ಆಶ್ಚರ್ಯಕ' ಚಿಹ್ನೆಯಾಗಿ ಕಾಡುತ್ತಾಳೆ.!

ಅವಳು ಅವಳೇ ಅವಳಲ್ಲದೆ ಮತ್ತಾರು.? ಅವಳು ಗಿರಿ ಕಂದರಗಳಷ್ಟು ಸಹನೆ, ಪ್ರೀತಿ ತುಂಬಿಕೊಡಿರುವ ಅರಬ್ಬೀ ಸಮುದ್ರದಷ್ಟೇ ವಿಶಾಲವಾದ ಮಮತೆಯ ಮಡಿಲಿರುವ ಎಲ್ಲಿಂದಲೋ ಬಂದು ನಿಂತವರಿಗೂ ನೆಲೆ ಕೊಟ್ಟು ಸಲಹುತಿರುವ ನಲುಮೆಯ ದೇವತೆ.!

ಕಣ, ಕಣದಲ್ಲೂ ಕ್ಷಣ, ಕ್ಷಣದಲ್ಲೂ ಒಲುಮೆಯ ತುಂಬಿಕೊಂಡು ತನ್ನೊಡಲ ಮಕ್ಕಳನ್ನ ಸದಾ ಆರೈಕೆ ಮಾಡುತ್ತಿರುವ ಕಪ್ಪು ನೆಲದ ತಾಯಿಯಪ್ಪುಗೆಯ ತ್ಯಾಗ,ಮಮತೆಗಳ ಸಾಕಾರಮೂರ್ತಿ ಶಾಂತಿದಾತೆ ಕನ್ನಡಮಾತೆ.!

**- ಬಸವರಾಜ ಕರುವಿನ**

# ಕನ್ನಡಿಗರೇ ಏಳಿ ! ಎದ್ದೇಳಿ ! ಜಾಗೃತರಾಗೋಣ

ಸಾವಿರಾರು ವರ್ಷಗಳ ಇತಿಹಾಸದಲ್ಲಿ ಸಾಹಿತ್ಯಿಕ, ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆ ಯನ್ನು ಸಮರ್ಥವಾಗಿ ಎದುರಿಸಿ, ಬೆಳೆದು ಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ, ಆಘಾತಗಳು, ಮೈಯುಂಡ ಬಾಳು, ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣಿತ ಮತಿಗಳಿಂದ ಮೊದಲ್ಗೊಂಡು ಹಿತಮಿತ ಮೃದು ವಚನ, ನುಡಿ ಟಠಡಢಣ, ಮಾತು ಜ್ಯೋತಿರ್ಲಿಂಗ, ಹಲಗೆ ಬಳಪವ ಪಿಡಿಯದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿ ಸಾಧಕರ ಮಾರ್ಗದೇಸಿಗಳ ಸಮಾಹಿತದಲ್ಲಿ ತಮಗೆದುರಾದ ಆತಂಕ, ಆಘಾತಗಳನ್ನು ಅರಗಿಸಿಕೊಂಡು ಕನ್ನಡದ ದೀಪ ಬೆಳಗಿದೆ, ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ ಸೃಜನಶೀಲವಾಗಿದೆ, ಆದರೆ ಇಂದಿನ ಆತಂಕ ಹಿಂದೆಂದಿನ ಆಕ್ರಮಣಗಳಿಗಿಂತ ಭಯಾನಕವಾದುದು, ಈ ಭಯಾನಕತೆಯನ್ನು ಎದುರಿಸುವ ಹಾಗೂ ಆರೋಗ್ಯಕರವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ, ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುವ ಸಂಗತಿ.

ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ; ಬದುಕನ್ನು ರೂಪಿಸುವ ಪ್ರಭುತ್ವ ಹಾಗೂ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನ ಸಮುದಾಯಗಳಿಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾ ವಿಶೇಷ.

ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಗೆ ಪ್ರತಿ ಸ್ಪಂದಿಸುತ್ತಾ, ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ, ವೈಜ್ಞಾನಿಕ ವಿಚಾರ ಸೃಜನಶೀಲ ಭಾವದಲ್ಲಿ ಅಭಿವ್ಯಕ್ತಗೊಂಡಾಗ, ಅದಕ್ಕೊಂದು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ, ಹೊಸ ಕಾಲದ ಸಂವೇದನೆಗಳಿಗೆ, ವೈಜ್ಞಾನಿಕ ವಿಚಾರಗಳಿಗೆ, ತಾತ್ವಿಕ ತರ್ಕ-ದೀಪ್ತಿಗಳಿಗೆ ತೆರೆದುಕೊಳ್ಳುವ ನಮ್ಮ ಗುಣ ಜೀವಂತ ಭಾಷೆಯೊಂದರ ದೊಡ್ಡ ಶಕ್ತಿ, ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ, ನಮ್ಮ ಗುಣ ಕನ್ನಡ ಭಾಷೆಯ ದೊಡ್ಡ ಶಕ್ತಿ, ಜಾಗತಿಕ ಮಟ್ಟದಲ್ಲಿ ವಿಸ್ತಾರಗೊಳ್ಳುತ್ತಿರುವ ಎಲ್ಲಾ ಜ್ಞಾನ ಶಾಖೆಗಳ ಪಾರಿವಾಸಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ ತನ್ಮುಖೇನ ವಿಷಯ ಜ್ಞಾನವನ್ನು ಅರಗಿಸಿಕೊಂಡು ಕನ್ನಡ ಭಾಷೆ ಬೆಳೆಯಬೇಕಿದೆ, ಕನ್ನಡ ಜ್ಞಾನ ಚೇತನಗಳ ಇಚ್ಛಾಶಕ್ತಿ ಈ ದಿಶೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯವಿದೆ,



ಅಲ್ಲಮಪ್ರಭುವಿನ ವಚನ ಹೀಗಿದೆ -

**ಹಿಂದಣ ಅನಂತವನು ಮುಂದಣ ಅನಂತವನು**
**ಒಂದು ದಿನ ಒಳಕೊಂಡಿತ್ತು ನೋಡಾ**
**ಒಂದು ದಿನವನೊಳಕೊಂಡು**
**ಮಾತಾಡುವ ಮಹಾಂತನ**
**ಕಂಡ ಬಲ್ಲವರಾರಯ್ಯ**
**ಆದ್ಯರು**
**ವೇದ್ಯರು ಆನಂತರ ಹಿರಿಯರು ಕಾಲದಂತುವನರಿಯದೆ**
**ಅಂತೆ ಹೋದರು ಕಾಣಾ ಗುಹೇಶ್ವರ !**

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ, ಮುಂದಣ ಭವಿಷ್ಯದ ಅನಂತತೆ ಇದೆ, ವರ್ತಮಾನದಲ್ಲಿ ಈ ಎರಡು ಸಂಲಗ್ನಗೊಂಡ ಭಾವದಲ್ಲಿ ಸೃಜನಶೀಲವಾದಾಗ ಅದು ಅಳಿಯದ ಮಾತಾಗುತ್ತದೆ. ಆ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ.

ಕರ್ನಾಟಕ ಏಕೀಕರಣಗೊಂಡು 69 ವರ್ಷಗಳು ತುಂಬುತ್ತಿವೆ, ನಾಡು ಸಂಭ್ರಮವನ್ನು ಆಚರಿಸುತ್ತಿದೆ, ಈ 69 ವರ್ಷಗಳಲ್ಲಿ ಕನ್ನಡ ನಾಡು ಸಾಧಿಸಿರುವ ಪ್ರಗತಿ, ಎದುರಿಸಿರುವ ಸವಾಲು, ಅನುಭವಿಸಿರುವ ಸಂಕಷ್ಟಗಳ ಬಗೆಗೆ ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ, ವ್ಯಕ್ತಿಯ ಸಂದರ್ಭದಲ್ಲಿ ಆತ್ಮಾವಲೋಕನ ಹೇಗೆ ವ್ಯಕ್ತಿತ್ವದ ಬೆಳವಣಿಗೆಗೆ ಪ್ರೇರಕವೋ ಹಾಗೆಯೇ ನಾಡಿನ ಸಂದರ್ಭ ದಲ್ಲಿಯೂ ಆತ್ಮಾವಲೋಕನ ವೆಂಬುದು ಹಿಂದಣ ಹೆಜ್ಜೆಯ ನರಿತು ಮುಂದಣ ಹೆಜ್ಜೆಯನಿಡುವ ವಿವೇಕದ ಕ್ರಮ.

ಕನ್ನಡಿಗರೇ ಏಳಿ ! ಎದ್ದೇಳಿ ! ಬೌದ್ಧಿಕರೆಂದು ಕರೆದುಕೊಳ್ಳುವ ಜನರೂ, ರಾಜಕಾರಣಿಗಳೂ ವಿಶ್ವಭ್ರಾತೃತ್ವ, ಭಾರತದ ಅಖಂಡತೆ, ಭಾಷಾಂಧತೆ ಇತ್ಯಾದಿ ಮಾತುಗಳಿಂದ ನಮ್ಮನ್ನು ವಂಚಿಸಲು ಯತ್ನಿಸುತ್ತಿರುವವರ ಬಗ್ಗೆ ಜಾಗೃತ ರಾಗೋಣ, ಕನ್ನಡಿಗರು ಎಂದು ಭಾಷಾಂಧರಲ್ಲ, ದೇಶದ್ರೋಹಿಗಳಲ್ಲ, ನಮ್ಮ ಪರಂಪರೆಯ ಬಗ್ಗೆ ಹೆಮ್ಮೆ ಪಡೋಣ. ತನ್ನತನವನ್ನು ಉಳಿಸಿಕೊಳ್ಳದ ಪ್ರಾಂತ್ಯಕ್ಕೆ ಉಳಿಗಾಲವಿಲ್ಲ.

ಅನ್ಯಭಾಷೀಯ ಸೋದರರನ್ನು ಗೌರವಿಸೋಣ, ಆದರೆ ಅನ್ಯಭಾಷೀಯ ಸೋದರರು ಕರ್ನಾಟಕಕ್ಕೆ ಬಂದು ಕರ್ನಾಟಕವನ್ನು ತಮ್ಮ ವಸಾಹತುವಾಗುವಂತೆ ಮಾಡುತ್ತಿ ದ್ದಾರೆ, ಇದನ್ನು ತಡೆಯಲಿದ್ದರೆ ನಮಗೆ ಉಳಿಗಾಲವಿಲ್ಲ, ಧೀರರಾದ ಅಸ್ಸಾಂ ಯುವಕರು ಹೋರಾಡಿ ತಮ್ಮ ಪ್ರಾಂತ್ಯವನ್ನು ವಿನಾಶದಿಂದ ತಪ್ಪಿಸಿದರು, ಅಂತಹ ಹೋರಾಟಕ್ಕೆ ಕನ್ನಡಿಗರಾದ ನಾವು ಸಿದ್ದರಾಗಬೇಕಿದೆ.

ಗಡಿಯಲ್ಲಿ ಮರಾಠಿಗರು, ತಮಿಳರು, ಮಲಯಾಳಿಗಳು ಕನ್ನಡವನ್ನು ಲೆಕ್ಕಿಸುತ್ತಿಲ್ಲ, ಭವಿಷ್ಯದ ಬೆಂಗಳೂರು ಗಾಬರಿಯನ್ನು ಹುಟ್ಟಿಸುತ್ತದೆ, ಕರ್ನಾಟಕದಲ್ಲಿ ಕನ್ನಡ ಮಕ್ಕಳು ನಿರುದ್ಯೋಗಿಗಳಾಗಿ ಅಲೆಯುತ್ತಿದ್ದಾರೆ, ಕೇಂದ್ರದಲ್ಲಿ ಕನ್ನಡಿಗರ ಧ್ವನಿ ದುರ್ಬಲದ ಮಾತಿರಲಿ ಅದು ಇಲ್ಲವೇ ಇಲ್ಲ, ಇಂತಹ ಸಂದರ್ಭದಲ್ಲಿ ಕನ್ನಡ ಜನ ಒಗ್ಗಟ್ಟಿನಿಂದ ನಿಂತು ತಮ್ಮೆಲ್ಲ ಶಕ್ತಿಯನ್ನು ಬಳಸಿ ತಮ್ಮ ಆತ್ಮರಕ್ಷಣೆ ಮಾಡಿಕೊಳ್ಳಬೇಕಾಗಿದೆ.

1956 ರಲ್ಲಿ ಭಾಷಾವಾರು ಪ್ರಾಂತ್ಯಗಳ ವಿಂಗಡಣೆ ಯಾಗಿ 19 ಜಿಲ್ಲೆಗಳ ಮೈಸೂರು ರಾಜ್ಯ ಉದಯವಾಯಿತು, ಅದು ಮುಂದೆ ಕನ್ನಡಿಗರ ಹೋರಾಟದಿಂದ 1973 ರಲ್ಲಿ ಕರ್ನಾಟಕವಾಯಿತು, ಆ ಹೋರಾಟ ಇನ್ನೂ ಕುಗ್ಗದಂತೆ ಮಾಡೋಣ. ಕರ್ನಾಟಕದಲ್ಲಿ ಕನ್ನಡವೂ ರಾಜರಾಜೇಶ್ವರಿಯಾಗಿ ಮೆರೆದು, ಭಾರತೀಯ ಸಂಸ್ಕೃತಿಯ ವಜ್ರಮುಕಟ ದಂತೆ ಬೆಳಗಲಿ, ಅದಕ್ಕಾಗಿ ಶ್ರಮಿಸೋಣ, ಭವಿಷ್ಯ ದತ್ತ ಕಣ್ಣು ನೆಟ್ಟು ನಮ್ಮ ಹಿಂದಿನ ಸಂಸ್ಕೃತಿಯಿಂದ ಸ್ಫೂರ್ತಿಯನ್ನು ಪಡೆದು ಮುನ್ನಡೆಯೋಣ.

**- ಜೆಂಬಿಗಿ ಮೃತ್ಯುಂಜಯ,**
ಕನ್ನಡ ಉಪನ್ಯಾಸಕರು, ದಾವಣಗೆರೆ.

## ಕನ್ನಡ ಕನ್ನಡ ನಮ್ಮ ತಾಯಿ ಕನ್ನಡ ಕನ್ನಡ ಕನ್ನಡ ನಮ್ಮ ಉಸಿರು ಕನ್ನಡ

ಕೈ ಜೋಡಿಸಿ ನಮಿಸುವ ಕರ್ನಾಟಕ ಮಾತೆಗೆ
ಕನ್ನಡದಿ ಮಾತಾಡುವ ಎಲ್ಲರ ಜೊತೆಗೆ

ಮಕ್ಕಳಿಗೆ ಕಲಿಸುವ, ಓದಿಸಿ ಬರೆಸುವ
ಮಕ್ಕಳಲ್ಲಿ ಕನ್ನಡ ಪ್ರೇಮದ ಬೀಜ ಬಿತ್ತುವ
ಸಕ್ಕರೆಯಂಥ ಸವಿನುಡಿ ರುಚಿ ತೋರಿಸುವ

ಅಕ್ಕರೆಯಿಂದ ಒಗಟು ಗಾದೆ ಹೇಳುವ
ಕಥೆಗಳ ಹೇಳುವ ನಾವು ಕಥೆಗಳ ಕಟ್ಟಿಸುವ
ಕಥೆಯೊಳಗಿನ ಗೂಡಾರ್ಥವ ಬಿಡಿಸಿ ತಿಳಿಸುವ
ಕಥೆಗಾರರ ಕವಿಗಳ ಬಗ್ಗೆ ತಿಳಿಸಿ ಕಲಿಸುವ

ಕಥೆ ಕವನ ಕಟ್ಟುವ ಕಲೆ ಕಲಿಸಿ ನಲಿಸುವ
ಶರಣರ ದಾಸರ ಪದಗಳ ಹೇಳಿಸಿ ಕುಣಿಸುವ
ಕರುನಾಡಿನ ಶಿಲ್ಪಕಲೆ ವೈಭವ ತಿಳಿಸುವ
ಪರಮಾತ್ಮ ಸಿರಿಹರಿ ಕೃಪೆಯಲಿ ಕನ್ನಡ ಬೆಳೆಸುವ
ಪರಮ ಶ್ರೇಷ್ಠ ಕನ್ನಡಾಂಬೆಯ ಸೇವೆ ಮಾಡುವ.

**- ಡಾ. ರೂಪಶ್ರೀ ಶಶಿಕಾಂತ್,**
ದಾವಣಗೆರೆ.

## ಕಸ್ತೂರಿ ಕನ್ನಡ

ಅದೆಷ್ಟೋ ದೈವಗಳ ಆಶೀರ್ವಾದ ಬಲ
ಸಾಧಕ ಹಿರಿಯರ ಶ್ರಮದ ಫಲ
ಕನ್ನಡ ಕಸ್ತೂರಿ ಕಂಪಿನ ಹಂಬಲ
ಉಳಿದಿದೆ ಎಲ್ಲೆಡೆಯೂ ಆಗಿ ಸತ್ಫಲ

ಕರ್ನಾಟಕ ಆಗಿತ್ತು ಗಂಧದ ಬೀಡು
ಮುತ್ತು ರತ್ನಗಳ ಅಳೆವ ನೆಲೆವೀಡು
ಅರಮನೆಯ ಗರ್ದಿಗಮ್ಮತ್ತು ನಿಂತು ನೋಡು
ಕಪ್ಪು ಮಣ್ಣಲ್ಲೋ ಕಸುವಿರುವ ಕರುನಾಡು

ಸಾಹಿತ್ಯ ಸಂಸ್ಕೃತಿಯ ವೈಭವವೇ ವಿಸ್ಮಯ
ಮಣ್ಣಕಣಕಣವೂ ಚೈತನ್ಯಮಯ
ನೀರ ನಿನಾದಕೆ ಸರ್ವರೂ ತನ್ಮಯ
ಇದು ಕನ್ನಡಿಗರ ದೇವಾಲಯ

ಹುಟ್ಟಿದಾಗ ಜೊತೆಯಾದ ಉಸಿರಿನಂತೆ
ಈ ನಾಡನ್ನು ನಾವು ಕಾಪಿಡೋಣವಂತೆ
ಭಾಷೆಯುಳಿಸಲು ಮಾಡಬೇಡ ಚಿಂತೆ
ಅರಿ ನೀ ಈ ಬಾಳು ಮೂರು ದಿನದ ಸಂತೆ

**- ಉಷಾ ಈ.,** ಉಪನ್ಯಾಸಕರು, ದಾವಣಗೆರೆ.

## ನಗರದಲ್ಲಿ ಇಂದು ಜಿಲ್ಲಾಡಳಿತದಿಂದ 69ನೇ ಕರ್ನಾಟಕ ರಾಜ್ಯೋತ್ಸವ



ದಾವಣಗೆರೆ ಜಿಲ್ಲಾಡಳಿತದ ವತಿಯಿಂದ ಇಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ 69 ನೇ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ರಾಷ್ಟ್ರ ಧ್ವಜಾರೋಹಣ ನೆರವೇರಿಸಿ, ರಾಜ್ಯೋತ್ಸವದ ಸಂದೇಶ ನೀಡುವರು.

ಕಾರ್ಯಕ್ರಮಕ್ಕೂ ಮುನ್ನ ಬೆಳಿಗ್ಗೆ 8ಕ್ಕೆ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಮೆರವಣಿಗೆಗೆ ಚಾಲನೆ ನೀಡಲಾಗುವುದು.

ಕಲಾ ತಂಡಗಳೊಂದಿಗೆ ಮೆರವಣಿಗೆಯು ಮಹಾನಗರಪಾಲಿಕೆ ಮುಂಭಾಗದಿಂದ ಗಾಂಧಿ ವೃತ್ತ, ಅಶೋಕ ರಸ್ತೆ, ಜಯದೇವ ವೃತ್ತ, ವಿದ್ಯಾರ್ಥಿ ಭವನದ ಮಾರ್ಗವಾಗಿ ಜಿಲ್ಲಾ ಕ್ರೀಡಾಂಗಣದ ತಲುಪಲಿದೆ.

ರಾಜ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ದಕ್ಷಿಣ ವಿಧಾನಸಭಾ ಕ್ಷೇತ್ರ ಶಾಸಕರಾದ ಡಾ.ಶಾಮನೂರು ಶಿವಶಂಕರಪ್ಪ ವಹಿಸುವರು. ಜಿಲ್ಲೆಯ ಶಾಸಕರು, ವಿಧಾನ ಪರಿಷತ್ ಸದಸ್ಯರು, ಅಧಿಕಾರಿಗಳು ಉಪಸ್ಥಿತರಿರಲಿದ್ದಾರೆ.

ಸಂಜೆ 6 ಗಂಟೆಗೆ ಗಾಜಿನ ಮನೆಯಲ್ಲಿ ವಿವಿಧ ಶಾಲಾ, ಕಾಲೇಜಿನ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

## ಜಿಲ್ಲಾ ಕಸಾಪ ವತಿಯಿಂದ ಇಂದು 69 ನೇ ಕರ್ನಾಟಕ ರಾಜ್ಯೋತ್ಸವ

ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ಲಯನ್ಸ್ ಕ್ಲಬ್ ದಾವಣಗೆರೆ-ವಿದ್ಯಾನಗರ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಹಾಗೂ ಶರಧಿ ಕಲಾ ಸಾಂಸ್ಕೃತಿಕ ಸಂಸ್ಥೆ ದಾವಣಗೆರೆ ಇವರುಗಳ ಜಂಟಿ ಸಹಯೋಗದಲ್ಲಿ 69ನೇ ಕರ್ನಾಟಕ ರಾಜ್ಯೋತ್ಸವ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಬಿ.ದಿಳ್ಯಪ್ಪ ತಿಳಿಸಿದ್ದಾರೆ.

ಇಂದು ಮುಂಜಾನೆ 8.30 ಘಂಟೆಗೆ ಕುವೆಂಪು ಕನ್ನಡ ಭವನದಲ್ಲಿ ನಡೆಯುವ ಧ್ವಜಾರೋಹಣ ಕಾರ್ಯಕ್ರಮದಲ್ಲಿ ರಾಷ್ಟ್ರಧ್ವಜವನ್ನು ಲಯನ್ಸ್ ಕ್ಲಬ್ ವಿದ್ಯಾನಗರ ಅಧ್ಯಕ್ಷ ಎಲ್. ಎಸ್. ಪ್ರಭುದೇವ್ ಹಾಗೂ ನಾಡ ಧ್ವಜವನ್ನು ಜಿಲ್ಲಾ ಕಸಾಪ ಅಧ್ಯಕ್ಷ ಬಿ.ವಾಮದೇವಪ್ಪ ಅವರು ಆರೋಹಣ ಮಾಡಲಿದ್ದಾರೆ.

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷೆ ಸುಮತಿ ಜಯಪ್ಪ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ಬಿ.ಪರಮೇಶ್ವರಪ್ಪ, ಶರಧಿ ಕಲಾ ಸಾಂಸ್ಕೃತಿಕ ಸಂಸ್ಥೆಯ ವಿದುಷಿ ಶೋಭ ರಂಗನಾಥ್ ಅವರು ಕನ್ನಡಾಂಬೆ ಶ್ರೀ ಭುವನೇಶ್ವರಿಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವರು.

## ಪರಿಸರ ಬದಲಾವಣೆಯಿಂದ ದೇಶಕ್ಕೆ ಶೇ.24.7ರ ಜಿ.ಡಿ.ಪಿ. ನಷ್ಟ

ನವದೆಹಲಿ, ಅ. 10 - ಪರಿಸರ ಬದಲಾವಣೆಯ ಕಾರಣದಿಂದಾಗಿ 2070ರ ವೇಳೆ ಭಾರತ ಶೇ. 24.7 ರಷ್ಟು ಜಿಡಿಪಿ ನಷ್ಟ ಅನುಭವಿಸಲಿದೆ ಎಂದು ಇತ್ತೀಚಿನ ವರದಿಯೊಂದು ತಿಳಿಸಿದೆ.

ಏರುತ್ತಿರುವ ಸಮುದ್ರ ಮಟ್ಟ ಹಾಗೂ ಕುಸಿಯುತ್ತಿರುವ ಕಾರ್ಮಿಕ ಉತ್ಪಾದಕತೆ ಕಾರಣದಿಂದಾಗಿ ಆದಾಯ ಕಡಿಮೆಯಾಗಲಿದೆ. ಇದರಿಂದಾಗಿ ದುರ್ಬಲ ಆರ್ಥಿಕ ವ್ಯವಸ್ಥೆಗಳ ಮೇಲೆ ಹೆಚ್ಚು ಪರಿಣಾಮವಾಗಲಿದೆ ಎಂದು ಏಷಿಯಾ ಡೆವಲಪ್ ಮೆಂಟ್ ಬ್ಯಾಂಕ್ ರೂಪಿಸಿರುವ ಏಷಿಯಾ - ಪೆಸಿಫಿಕ್ ಕ್ಲೈಮೇಟ್ ರಿಪೋರ್ಟ್ ವರದಿಯಲ್ಲಿ ತಿಳಿಸಲಾಗಿದೆ.

ಪರಿಸರ ಬದಲಾವಣೆಯ ಬಿಕ್ಕಟ್ಟು ದಿನೇ ದಿನೇ ಹೆಚ್ಚಾಗುತ್ತಿದೆ. ಏಷ್ಯಾ ಪೆಸಿಫಿಕ್ ವಲಯದ ಕರಾವಳಿ ಭಾಗದಲ್ಲಿರುವ 30 ಕೋಟಿ ಜನರು ಹೆಚ್ಚು ಅಪಾಯ ಎದುರಿಸುತ್ತಿದ್ದಾರೆ. 2070ರ ವೇಳೆ ಕರಾವಳಿ ಭಾಗದ ಜನರು ಟ್ರಿಲಿಯನ್ ಡಾಲರ್ ಮೌಲ್ಯದ ನಷ್ಟ ಅನುಭವಿಸಲಿದ್ದಾರೆ ಎಂದು ವರದಿ ತಿಳಿಸಿದೆ.

ಪರಿಸರ ಬದಲಾವಣೆ ಕಾರಣದಿಂದ ಚಂಡಮಾರುತ, ಬಿಸಿ ಗಾಳಿ ಹಾಗೂ ಪ್ರವಾಹ ಹೆಚ್ಚಾಗಲಿವೆ. ಇದು ಅಭೂತಪೂರ್ವ ಆರ್ಥಿಕ ಸವಾಲು ಹಾಗೂ ಮಾನವ ಸಂಕಷ್ಟಕ್ಕೆ ಕಾರಣವಾಗಲಿದೆ ಎಂದು ಎಡಿಬಿ ಅಧ್ಯಕ್ಷ ಮಸತ್ಸುಗು ಅಸಕಾವಾ ಹೇಳಿದ್ದಾರೆ.

## ನಗರದ ವೀರೇಶ್ವರ ಪುಣ್ಯಾಶ್ರಮದ ಅಂಧ ಮಕ್ಕಳೊಂದಿಗೆ ದೀಪಾವಳಿ ಆಚರಣೆ



ದಾವಣಗೆರೆ, ಅ. 31- ಉದ್ಯಮಿ ಶ್ರೀನಿವಾಸ್ ಶಿವಗಂಗಾ ಅವರ ನೇತೃತ್ವದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ದಾವಣಗೆರೆ ತಾಲ್ಲೂಕು ಘಟಕ ಹಾಗೂ ಶಿವಗಂಗಾ ಗ್ರೂಪ್ಸ್ ವತಿಯಿಂದ ಬಾಡಾ ಕ್ರಾಸ್‌ನಲ್ಲಿರುವ ಶ್ರೀ ವೀರೇಶ್ವರ ಪುಣ್ಯಾಶ್ರಮದ ಅಂಧ - ಅನಾಥ ಮಕ್ಕಳಿಗೆ ಸಿಹಿ ಊಟ, ಹೊಸ ಬಟ್ಟೆಗಳನ್ನು ನೀಡಿ ಆ ಮಕ್ಕಳೊಂದಿಗೆ ಪಟಾಕಿ ಸಿಡಿಸುವುದರ ಮೂಲಕ ದೀಪಾವಳಿ ಹಬ್ಬವನ್ನು ಆಚರಿಸಲಾಯಿತು.

ಸಂಗೀತ ವಿದ್ಯಾರ್ಥಿಗಳು ಮತ್ತು ಯುವ ಪ್ರತಿಭೆ ನಿರಂಜನ್ ಸಂಗೀತ ಕಾರ್ಯಕ್ರಮ ನೀಡಿದರು.

ಈ ಸಂದರ್ಭದಲ್ಲಿ ಮಹಾಸಭಾ ತಾಲ್ಲೂಕು ಘಟಕ ಅಧ್ಯಕ್ಷ ಶಂಭು ಉರೇಕೊಂಡಿ, ಶಿವಗಂಗಾ ಗ್ರೂಪ್ಸ್‌ನ ಚಂದ್ರು ಕುಂದುವಾಡಮಠ, ಪವನ್, ಶಿವಕುಮಾರ್ ಚಾಮುಂಡಿ, ಬಸವರಾಜ್, ಮಂಜುನಾಥ್, ಕುಮಾರ್ ಶಾಮನೂರು, ಶಿವರತನ್, ಅನಿಲ್, ಶಿವರಾಜ್, ಮಂಜುನಾಥ್ ದೊಡ್ಡಮನಿ, ಆದರ್ಶ್, ನವೀನ್ ಆರ್ ಡಿ, ವಜ್ರಸ್ವಾಮಿ, ಗಾಯಕ ನಿರಂಜನ್, ಆಶ್ರಮದ ಕಾರ್ಯದರ್ಶಿ ಸಿದ್ದಲಿಂಗಸ್ವಾಮಿ ಇನ್ನಿತರರು ಹಾಜರಿದ್ದರು

## ಉ. ಕೊರಿಯಾದಿಂದ ಖಂಡಾಂತರ ಕ್ಷಿಪಣಿ ಪರೀಕ್ಷೆ

ಸಿಯೋಲ್, ಅ. 31 - ದೂರಗಾಮಿ ಖಂಡಾಂತರ ಕ್ಷಿಪಣಿಯ ಪರೀಕ್ಷೆ ನಡೆಸಿರುವುದಾಗಿ ಉತ್ತರ ಕೊರಿಯಾ ತಿಳಿಸಿದೆ. ಸುಮಾರು ಒಂದು ವರ್ಷದ ನಂತರ ಈ ಪರೀಕ್ಷೆ ನಡೆಸಲಾಗಿದೆ.

ದೂರಗಾಮಿ ಕ್ಷಿಪಣಿಯು ಅಮೆರಿಕಾಗೆ ತಲುಪುವ ಸಾಮರ್ಥ್ಯ ಹೊಂದಿದೆ. ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯುವ ವೇಳೆಯೇ ಅದರ ಗಮನ ಸೆಳೆಯಲು ಈ ಪರೀಕ್ಷೆ ನಡೆಸಲಾಗಿದೆ ಎನ್ನಲಾಗುತ್ತಿದೆ.

ಈ ಕ್ಷಿಪಣಿಯು 86 ನಿಮಿಷಗಳ ಕಾಲ ಹಾಗೂ 7,000 ಕಿ.ಮೀ. ಎತ್ತರದಲ್ಲಿ ಸಾಗಿದೆ ಎಂದು ಜಪಾನ್ ರಕ್ಷಣಾ ಸಚಿವ ಜನರಲ್ ನಕಟಾನಿ ತಿಳಿಸಿದ್ದಾರೆ.

ಉತ್ತರ ಕೊರಿಯಾ ಇತ್ತೀಚಿನ ವರ್ಷಗಳಲ್ಲಿ ಕ್ಷಿಪಣಿ ತಂತ್ರಜ್ಞಾನದಲ್ಲಿ ಮುನ್ನಡೆ ಸಾಧಿಸಿದೆ. ಆದರೆ ಅಮೇರಿಕಾದ ಮುಖ್ಯ ಭೂಮಿಗೆ ತಲುಪುವ ಸಾಮರ್ಥ್ಯ ಹೊಂದಿರುವ ಅಣು ಕ್ಷಿಪಣಿ ರೂಪಿಸುವ ತಂತ್ರಜ್ಞಾನ ಇನ್ನೂ ಬಂದಿಲ್ಲ ಎಂದು ಹಲವು ವಿದೇಶಿ ಪರಿಣಿತರು ಭಾವಿಸಿದ್ದಾರೆ. ಆದರೆ ಅದರ ಅಲ್ಪ ದೂರದ ಕ್ಷಿಪಣಿಗಳು ಇಡೀ ದಕ್ಷಿಣ ಕೊರಿಯಾದಲ್ಲಿ ಅಣು ದಾಳಿ ನಡೆಸುವ ಸಾಮರ್ಥ್ಯ ಹೊಂದಿವೆ.

## ಬಾಂಗ್ಲಾ ರಾಜಕೀಯ ಪಕ್ಷದ ಕೇಂದ್ರ ಕಚೇರಿಗೆ ಬೆಂಕಿ

ಢಾಕಾ, ಅ. 31 - ಬಾಂಗ್ಲಾದೇಶದ ಪದಚ್ಯುತ ಪ್ರಧಾನಮಂತ್ರಿ ಶೇಕ್ ಹಸೀನಾ ಅವರನ್ನು ಬೆಂಬಲಿಸುತ್ತಿದ್ದ ಪಕ್ಷದ ಕೇಂದ್ರ ಕಚೇರಿಗೆ ವಿಧ್ವಂಸಕರು ಬೆಂಕಿ ಹಚ್ಚಿದ್ದಾರೆ.

ಬಾಂಗ್ಲಾದ ರಾಜಧಾನಿ ಢಾಕಾದಲ್ಲಿರುವ ಜಾಟಿಯಾ ಪಾರ್ಟಿ ಕಚೇರಿಗೆ ಬೆಂಕಿ ಹಚ್ಚಲಾಗಿದೆ. ಮೊದಲು ಪಕ್ಷದ ಕಾರ್ಯಕರ್ತರ ಜೊತೆ ಘರ್ಷಣೆ ನಡೆಸಿದ ವಿಧ್ವಂಸಕರು, ನಂತರ ಕಚೇರಿಗೆ ಬೆಂಕಿ ಹಚ್ಚಿದ್ದಾರೆ. ಜಾಟಿಯಾ ಪಾರ್ಟಿಯು ಬಾಂಗ್ಲಾದ ಮೂರನೇ ಅತಿ ದೊಡ್ಡ ಪಕ್ಷವಾಗಿದೆ.

# 81ಕ್ಕೆ ಪಾದಾರ್ಪಣೆ - ವಿಧಾನಸಭೆ ಮಾಜಿ ಅಧ್ಯಕ್ಷರಾದ ಕೋಳಿವಾಡ

80 ಸಂವತ್ಸರಗಳನ್ನು ಪೂರ್ಣ ಗೊಳಿಸಿ, 81 ಕ್ಕೆ ಪಾದಾರ್ಪಣೆ ಮಾಡುತ್ತಿರುವ ವಿಧಾನಸಭೆಯ ಮಾಜಿ ಅಧ್ಯಕ್ಷ ಕೆ.ಬಿ. ಕೋಳಿವಾಡ ಅವರ ಜನ್ಮದಿನವನ್ನು ನವೆಂಬರ್ 1 ರಂದು ಅವರ ಅಭಿಮಾನಿಗಳು ಹಾಗೂ ಅವರ ಮಗ ಶಾಸಕ ಪ್ರಕಾಶ್ ನೇತೃತ್ವದ ಪಿಕೆಕೆ ಸಂಸ್ಥೆ ಜೊತೆಯಾಗಿ ವಿವಿಧ ಜನಪರ ಕಾರ್ಯಕ್ರಮಗಳೊಂದಿಗೆ ಎಪಿ ಎಂಸಿ ಸಮುದಾಯ ಭವನದಲ್ಲಿ ಆಚರಿಸಲಿದ್ದಾರೆ.

ಬಾನೆತ್ತರದಲ್ಲಿ ಸ್ವಚ್ಛಂದವಾಗಿ ಹಾರುತ್ತಿದ್ದ ಪಾರಿವಾಳ ಗಳನ್ನು ಸಾಕಿ, ಸಲುಹುತ್ತಾ ಅವುಗಳ ಒಡನಾಡಿಯಾಗಿದ್ದ ಪುಟ್ಟ ಗ್ರಾಮ ಗುಡಗೂರಿನ ಪುಟ್ಟ ಹುಡುಗ ಕೃಷ್ಣಪ್ಪನೇ, ಸಂವಿಧಾನದ ಉನ್ನತ ಸ್ಥಾನ ಕರ್ನಾಟಕ ವಿಧಾನಸಭಾ ಅಧ್ಯಕ್ಷ ಪೀಠವನ್ನಲಂಕರಿಸಿದ ಕೆ.ಬಿ. ಕೋಳಿವಾಡರು.

ಹೇಮರಡ್ಡಿ ಮಲ್ಲಮ್ಮನ ಕೃಪಾ ಕಟಾಕ್ಷದ ಶ್ರೀಮಂತ ರಡ್ಡಿ ಸಮಾಜದ ಅವಿಭಕ್ತ ಕುಟುಂಬದ ವೆಂಕಪ್ಪನವರ ಮಗನಾಗಿ ದಿ.1.11.1944 ರಂದು ಬಾಯಲ್ಲಿ ಬಂಗಾರದ ಚಮಚವನ್ನೇ ಇಟ್ಟುಕೊಂಡು ಹುಟ್ಟಿದ ಕೃಷ್ಣಪ್ಪ ಕೋಳಿವಾಡರು, ಅದೇ ಕುಟುಂಬದ ಇನ್ನೊಬ್ಬ ಸಿರಿವಂತ, ನೂರಾರು ಎಕರೆ ಜಮೀನಿನ ಒಡೆಯ ಭೀಮಪ್ಪನವರಿಗೆ ದತ್ತು ಪುತ್ರರಾಗುತ್ತಾರೆ.

ಇದ್ದೊಬ್ಬ ಮಗ ಮನೆಯಲ್ಲಿಯೇ ಇದ್ದು ಇರುವ ಸಿರಿತನವನ್ನು ಉಳಿಸಿ, ಬೆಳೆಸಿಕೊಳ್ಳುವಷ್ಟು ಅಕ್ಷರ ಜ್ಞಾನ ಸಾಕು ಎನ್ನುವ ಹಿರಿಯರ ಆಸೆಯನ್ನು ಬದಿಗಿರಿಸಿ, ಸೋದರ ಮಾವ ಒಡೆಯರಹಳ್ಳಿ ವಕೀಲರ ಪ್ರೋತ್ಸಾಹದೊಂದಿಗೆ ಕಾಲೇಜು ಮೆಟ್ಟಿಲೇರಿ, ಧಾರವಾಡ ಕರ್ನಾಟಕ ವಿಶ್ವ ವಿದ್ಯಾಲಯದಲ್ಲಿ ಬಂಗಾರ ಪದಕದ ಜೊತೆ ಪದವಿ ಪಡೆಯುತ್ತಾರೆ. ಕಾನೂನು ಪದವಿ ಪಡೆದರೂ ಸಹ ವಕೀಲಿ ವೃತ್ತಿ ಮಾಡಲು ಒಪ್ಪದ ಹಿರಿಯರ ಮಾತುಗಳನ್ನು ನಿರಾಕರಿಸಿ, ರಾಣೇಬೆನ್ನೂರಿನ ನ್ಯಾಯಾಲಯದಲ್ಲಿ ಖ್ಯಾತನಾಮರಾಗಿದ್ದ ನೇಕಾರ ಸಮಾಜದ ಎಂ. ಎಂ. ಬೆನ್ನೂರ ವಕೀಲರ ಬಳಿ ಕಿರಿಯ ವಕೀಲರಾಗಿ ಸೇರಿ ಅವರ ಮಾರ್ಗ ದರ್ಶನದಲ್ಲಿ ಸಾಕಷ್ಟು ಪರಿಣಿತಿ ಪಡೆಯುತ್ತಾರೆ.

ತಂದೆ ವೆಂಕಟಪ್ಪ ಮಾಡುತ್ತಿದ್ದ ನ್ಯಾಯ ಪಂಚಾಯಿತಿ ಹಾಗೂ ಹುಲುಕೋಟಿಯ ಹುಲಿ ಎಂದು ಪ್ರಚಲಿತರಾಗಿದ್ದ ಬಂಧುಗಳಾದ ಗದಗಿನ ಕೆ.ಹೆಚ್. ಪಾಟೀಲರ ಪ್ರೋತ್ಸಾಹದೊಂದಿಗೆ ಎಪಿ ಎಂಸಿ ನಿರ್ದೇಶಕರಾಗಿ



ರಾಜಕೀಯ ಪ್ರವೇಶಿಸಿ, 1972 ರಲ್ಲಿ ನಡೆದ ತಮ್ಮ ಮೊದಲ ಅಸೆಂಬ್ಲಿ ಚುನಾವಣೆಯಲ್ಲಿಯೇ ಜಯ ಗಳಿಸಿ, ವಿಧಾನಸಭೆ ಪ್ರವೇಶಿಸಿದ ಕೋಳಿವಾಡರು, ಅಂದಿನ ಆ ಮನೆಯ ಅತ್ಯಂತ ಕಿರಿಯ ಸದಸ್ಯರಾಗುತ್ತಾರೆ.

ಕಾಂಗ್ರೆಸ್ ಪಕ್ಷದ ನಿಷ್ಠಾವಂತರಾದ ಕೋಳಿವಾಡರು 11 ಚುನಾವಣೆ ಗಳನ್ನು ಎದುರಿಸಿ ಸೋಲು-ಗೆಲುವು ಗಳನ್ನು ಸಮನಾಗಿ ಸ್ವೀಕರಿಸಿದರು. ಕ್ಷೇತ್ರದಲ್ಲಿ ತಮ್ಮ ಸಮಾಜದ ಅತ್ಯಂತ ಕಡಿಮೆ ಮತದಾರರನ್ನು ಪ್ರತಿನಿಧಿಸಿದರೂ, ಸಹ, ಅಂದಿನ ಜಾತಿ ಹಾಗೂ ಹಣ ರಹಿತ ಆರೋಗ್ಯ ಕರ ವಾತಾವರಣವನ್ನು ಸದುಪಯೋಗಪಡಿಸಿ ಕೊಂಡು, ಪಕ್ಷದ ಸಂಘಟನೆ ಜೊತೆಗೆ ತಮ್ಮದೇ ಆದ ಬೆಂಗಾವಲು ಪಡೆಯನ್ನು ಬಲವಾಗಿಸಿಕೊಂಡ ನುರಿತ, ಚಾಣಾಕ್ಷ ರಾಜಕಾರಣಿಯಾಗಿ ಬೆಳೆದರು. ಬಣ್ಣದ ಗೀಳು... ತಂದೆ ವೆಂಕಪ್ಪನವರಿಂದ ರಕ್ತಗತವಾಗಿ ಬಂದ ನಾಟಕದ ಗೀಳು ಇವರಿಗೂ ಬಣ್ಣ ಹಚ್ಚಿಸಿತ್ತು. ರಕ್ತರಾತ್ರಿ, ಕುರುಕ್ಷೇತ್ರ ಮತ್ತು ಸಂಸಾರ ನಾಟಕಗಳಲ್ಲಿ ಅಭಿನಯಿಸಿದ ಕೋಳಿವಾಡರು, ಹೆಣ್ಣಿನ ಪಾತ್ರ ದಿಂದ ಮಾವ ಒಡೇರಹಳ್ಳಿ ವಕೀಲರ ಶಹಬ್ಬಾಸ್‌ಗಿರಿ ಪಡೆದವರು.

**ಒಂದು ರಾಜಕೀಯ ಘಟನೆ:** ಪ್ರಥಮ ಅಂದರೆ 1972 ರ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ದೆಹಲಿಗೆ ತೆರಳಿ ಇಂದಿರಾಗಾಂಧಿ ಅವರಿಂದ ಕಾಂಗ್ರೆಸ್ ಟಿಕೆಟ್ ತಂದು ತಮಗೆ ಆತ್ಮೀಯರಾಗಿದ್ದ ಹಲಗೇರಿಯ ಡಾ: ಬಿ.ಜಿ.ಪಾಟೀಲ (83 ರಲ್ಲಿ ಶಾಸಕರು, 85 ರಲ್ಲಿ ಧಾರವಾಡ ಜಿಲ್ಲಾ ಪರಿಷತ್ ಅಧ್ಯಕ್ಷರು)ರೊಡನೆ ಚರ್ಚಿಸಿ ಬೆಳಿಗ್ಗೆ ನಾಮಪತ್ರ ಸಲ್ಲಿಸಲು ತಹಶೀಲ್ದಾರ್ ಕಛೇರಿಗೆ ತೆರಳಿದ ಕೋಳಿವಾಡರ ವಿರುದ್ದ ಕೆಲ ಮುಖಂಡರು ಸೇರಿ, ಅದೇ ಬಿ.ಜಿ.ಪಾಟೀಲರನ್ನು ಪ್ರತಿಸ್ಪರ್ಧಿಯನ್ನಾಗಿಸಿದ್ದರು. ಧೃತಿಗೆಡದ ಕೋಳಿ ವಾಡರು ಏಕಾಂಗಿಯಾಗಿ ಚುನಾವಣೆ ಎದುರಿಸಿ ಮೊದಲ ಇನ್ನಿಂಗ್ಸ್ ನಲ್ಲಿಯೇ ಜಯ ಗಳಿಸುತ್ತಾರೆ. 5 ದಶಕಗಳ ಕಾಲ ತಮ್ಮ ರಾಜಕೀಯ ಪಯಣದಲ್ಲಿ ಈ ಬಾರಿ ಚುನಾವಣೆಯಿಂದ ದೂರ ಉಳಿದಿದ್ದು ಬೆಂಗಾವಲು ಪಡೆಯ ಸನಿಹದಲ್ಲಿದ್ದಾರೆ.

**- ಮನೋಹರ ಮಲ್ಲಾಡದ,** ರಾಣೇಬೆನ್ನೂರು.

## ಶ್ರಮಿಕರಿಗೆ ಉಡುಪು ವಿತರಿಸಿದ ಲಯನ್ಸ್



ದಾವಣಗೆರೆ, ಅ.31- ನಗರದ ಲಯನ್ಸ್ ಕ್ಲಬ್ ವತಿಯಿಂದ ಶ್ರೀ ಚನ್ನಬಸವೇಶ್ವರ ರೈಸ್ ಟೆಕ್ ಮಿಲ್‌ನಲ್ಲಿ ಶ್ರಮಿಕ ವರ್ಗದವರಿಗೆ ವಸ್ತ್ರ (ಉಡುಪು)ಗಳನ್ನು ವಿತರಿಸಲಾಯಿತು.

ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್. ಜಿ. ಉಳುವಯ್ಯ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ದಾವಣಗೆರೆ ಕ್ಲಬ್ ಅಧ್ಯಕ್ಷ ಎ. ಬಿ. ಚಂದ್ರಶೇಖರ್, ಎನ್. ವಿ. ಬಂಡಿವಾಡ ಆಗಮಿಸಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಚಂದ್ರಶೇಖರ್ ಅವರು, ಶ್ರಮಿಕ ವರ್ಗ ಈ ದೇಶದ ಆರ್ಥಿಕ ಅಭಿವೃದ್ಧಿಗೆ ಬೆನ್ನೆಲುಬು, ದುಡಿಯುವ ವರ್ಗ ಸದಾ ಸಂತೋಷ ಭರಿತರಾಗಿ ಇರಬೇಕು ಎಂದರು.

ಲಯನ್ ಕಾರ್ಯದರ್ಶಿ ಸಿ.ಅಜಯ್ ನಾರಾಯಣ್ ಕಾರ್ಯಕ್ರಮ ನಿರೂಪಿಸಿದರು. ಖಜಾಂಚಿ ಎಸ್. ನಾಗರಾಜ್, ಸಹ ಕಾರ್ಯದರ್ಶಿ ಹೆಚ್.ಎಂ. ನಾಗರಾಜ್ ಸಮಾರಂಭದಲ್ಲಿ ಭಾಗವಹಿಸಿದ್ದರು.

# ದೀಪಾವಳಿ ಖರೀದಿ ಭರಾಟೆ ಜೋರು




ದಾವಣಗೆರೆ, ಅ.31- ಬೆಳಕಿನ ಹಬ್ಬ ದೀಪಾವಳಿ ಆಚರಣೆ ಸಿದ್ಧತೆ ಜಿಲ್ಲೆಯಾದ್ಯಂತ ಭರದಿಂದ ನಡೆಯುತ್ತಿತ್ತು, ಲಕ್ಷ್ಮಿ ಪೂಜೆಗೆ ಬೇಕಾದ ಅಗತ್ಯ ವಸ್ತುಗಳ ಖರೀದಿ ಭರಾಟೆ ಗುರುವಾರ ಬೆಳಗ್ಗೆಯಿಂದಲೇ ಶುರುವಾಯಿತು.

ನಗರದ ಪ್ರವಾಸಿ ಮಂದಿರ ರಸ್ತೆ, ರಾಜನಹಳ್ಳಿ ಛತ್ರದ ಮುಂಭಾಗ, ಮಂಡಿಪೇಟೆ ಮತ್ತು ಹದಡಿ ರಸ್ತೆ ಸೇರಿದಂತೆ ಕೆಲವಡೆ ಹಬ್ಬದ ಮಾರುಕಟ್ಟೆ ಗ್ರಾಹಕರಿಂದ ತುಂಬಿತ್ತು.

ದೀಪಾವಳಿ ಹಬ್ಬಕ್ಕೆ ಬೆಳಕು ನೀಡುವ ತರಹೇವಾರಿ ಹಣತೆಗಳು, ಚಿತ್ತಾಕರ್ಷಕ ಆಕಾಶ ಪುಟ್ಟಿ, ರಂಗು-ರಂಗಿನ ಹೂವುಗಳು, ಕಂಗೊಳಿಸುವ ವಿದ್ಯುತ್ ದೀಪಗಳು, ಅಲಂಕಾರಿಕ ವಸ್ತುಗಳು, ಬಗೆ-ಬಗೆಯ ಹಣ್ಣುಗಳು ಹಾಗೂ ಪೂಜಾ ಸಾಮಗ್ರಿಗಳು ಹಬ್ಬದ ಮಾರುಕಟ್ಟೆಯ ಸೊಬಗನ್ನು ಇಮ್ಮಡಿಗೊಳಿಸುವುದು.

ಹಬ್ಬಕ್ಕೆ ಮುಖ್ಯವಾಗಿ ಬೇಕಾದ ಮತ್ತು ನಗರ ಪ್ರದೇಶದಲ್ಲಿ ವಿರಳವಾಗಿರುವ ತಾವರೆ ಹೂವು, ಹೊನ್ನಾರಿಕೆ ಹೂವು, ಕಾಚಿ ಕಡ್ಡಿ, ಅಣ್ಣೆ ಸೊಪ್ಪು, ಉತ್ತರಾಣಿ ಕಡ್ಡಿ, ಬಾಳೆ ಕಂಬ ಮತ್ತು ಗೋವಿನ ಸಗಣೆಯನ್ನು ರೈತರು ಮಾರಾಟ ಮಾಡಿ ಸಂಭ್ರಮಿಸಿದರು.

ಬಟ್ಟೆ ಅಂಗಡಿಗಳಲ್ಲಿ ಬಟ್ಟೆ ಕೊಳ್ಳಲು ಜನ ಕಿಕ್ಕಿರಿದು ತುಂಬಿರುವುದು ಒಂದೆಡೆಯಾದರೆ ಬೆಳ್ಳಿ, ಬಂಗಾರ, ಕಾರು ಮತ್ತು ಬೈಕ್ ಸೇರಿದಂತೆ ವಿವಿಧ ವಾಹನ ಹಾಗೂ ಗೃಹೋಪಯೋಗಿ ವಸ್ತುಗಳು ಮಾರಾಟ ಮಾಡಲ್ಪಟ್ಟವು.

ತುಸು ಬೆಲೆ ಏರಿಕೆಯಿಂದಾಗಿ ಗ್ರಾಹಕರು ಒಂದಂಗಡಿಯಿಂದ ಮತ್ತೊಂದಂಗಡಿಗೆ ಅಲೆದಾಡಿ ಉತ್ತಮ ಬೆಲೆಗೆ ವಸ್ತು ಖರೀದಿಸಲು ಮುಂದಾದ ದೃಶ್ಯ ಮಾರುಕಟ್ಟೆಯಲ್ಲಿ ಕಂಡಿತು.

'ಹಬ್ಬ-ಹರಿದಿನಗಳಲ್ಲಿ ಹಣ್ಣುಗಳ ಬೆಲೆ ಏರಿಕೆ ಸರ್ವೇ ಸಾಮಾನ್ಯ. ಬಿಡುವಿನ ದಿನಕ್ಕಿಂತ ಹಬ್ಬದಲ್ಲಿ 20ರಿಂದ 30 ರೂ.ಗಳ ದರ ಹೆಚ್ಚಾಗಿರುತ್ತದೆ' ಎಂದು ಹಣ್ಣಿನ ವ್ಯಾಪಾರಿ ನಾರಾಯಣಪ್ಪ ತಿಳಿಸಿದರು.

**ಪಟಾಕಿ ಖರೀದಿ :** ರಾಜ್ಯ ಸರ್ಕಾರವು ಪಟಾಕಿ ಮಾರಾಟಕ್ಕೆ ಕೆಲವು ಕಠಿಣ ನಿಬಂಧನೆಗಳನ್ನು ಹಾಕಿದೆ. ಈ ನಡುವೆ ಪಟಾಕಿ ವರ್ತಕರು ಸರ್ಕಾರಿ ನಿಯಮಗಳಿಗೆ ಬದ್ಧರಾಗಿ ಪಟಾಕಿ ಮಾರಾಟ ಮಾಡಿದರು.

ನಗರದ ಹೈಸ್ಕೂಲ್ ಮೈದಾನದಲ್ಲಿದ್ದ 70ಕ್ಕೂ ಅಧಿಕ ಪಟಾಕಿ ಮಳಿಗೆಗಳಲ್ಲಿ ಮಾರಾಟ ಪ್ರಕ್ರಿಯೆ ನಡೆಯಿತು. ಮೈದಾನದತ್ತ ಧಾವಿಸುತ್ತಿದ್ದ ಯುವಕರ ದಂಡು ಕ್ಯೂಆರ್ ಕೋಡ್‌ವುಳ್ಳ ಹಸಿರು ಪಟಾಕಿ ಖರೀದಿಸಿದರು.

# ಕದಳಿ ಮಹಿಳಾ ವೇದಿಕೆಯ ತಾಲ್ಲೂಕು ಘಟಕದಿಂದ ಕಮ್ಮಟ



ದಾವಣಗೆರೆ, ಅ.31- ಕದಳಿ ಮಹಿಳಾ ವೇದಿಕೆಯ ತಾಲ್ಲೂಕು ಘಟಕದಿಂದ ನಡೆದ 157ನೇ ಕಮ್ಮಟದಲ್ಲಿ ದತ್ತಿ ಉಪನ್ಯಾಸ, ವಚನ ದಾಸೋಹ, ಕಲ್ಯಾಣ ಕ್ರಾಂತಿ ವಿಜಯ ಹಾಗೂ ಗಂಗಾಂಬಿಕೆಯ ಶರಣೋತ್ಸವವು ರಾಘವೇಂದ್ರ ಹೈಟೆಕ್ ಪಿಯು ಕಾಲೇಜಿನಲ್ಲಿ ನಡೆಯಿತು.

ಕದಳಿ ಮಹಿಳಾ ವೇದಿಕೆಯ ತಾಲ್ಲೂಕು ಘಟಕದ ಅಧ್ಯಕ್ಷೆ ಮಮತಾ ನಾಗರಾಜ್, ಡಾ|| ಅನಿಲ್ ಕುಮಾರ್ ಶ್ಯಾಗಲೆ, ಡಾ|| ಮಲ್ಲಿಕಾರ್ಜುನ್ ಜವಳಿ, ವಿನೋದ ಅಜಗಣ್ಣನವರ್, ಗಾಯತ್ರಿ ವಸ್ತ್ರದ್, ಡಾ. ಎ.ಜೆ ನೀತಾ ಇತರರು ಉಪಸ್ಥಿತರಿದ್ದರು.

# ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ಅಮಾವಾಸ್ಯೆ ಪೂಜೆ



ದಾವಣಗೆರೆ ನಗರದ ಡಿ. ದೇವರಾಜ ಅರಸು ಬಡಾವಣೆಯಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ದೀಪಾವಳಿ ಅಮಾವಾಸ್ಯೆ ಪೂಜಾ ಕಾರ್ಯಕ್ರಮಗಳು ನಡೆಯಲಿವೆ.

ಬೆಳಿಗ್ಗೆ ಶ್ರೀ ನಾಗಲಿಂಗೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಮೃತ್ಯುಂಜಯ ಹೋಮ, ಪ್ರಧಾನ ದೇವತೆ, ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಂಗಳಾರತಿ, ಪ್ರಸಾದ ವಿನಿಯೋಗ ನಡೆಯುವುದು ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

ಶ್ರೀಮತಿ ಭಾಗ್ಯಲಕ್ಷ್ಮಿ ಮತ್ತು ಮಂಜುನಾಥ್ ಗುಂಡಾಲ್ ಹಾಗೂ ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ. ಬರುವ ಡಿಸೆಂಬರ್ 15 ರ ಭಾನುವಾರ ಹೊಸ್ತಿಲ ಹುಣ್ಣಿಮೆ ಹಾಗೂ ಶ್ರೀ ಮಾತಾ ಅನ್ನಪೂರ್ಣೇಶ್ವರಿ ಜಯಂತ್ಯೋತ್ಸವ ಪ್ರಯುಕ್ತ ವಿಶೇಷ ಪೂಜೆಯನ್ನು ಹಮ್ಮಿಕೊಳ್ಳಲಾಗಿದ್ದು, ಶ್ರೀಮತಿ ಲಕ್ಷ್ಮಮ್ಮ ಮತ್ತು ಸಹ ಕುಟುಂಬದವರು ಬಿ.ಹೆಚ್. ಗ್ರೂಪ್‌ನವರು ಪ್ರಧಾನ ಸೇವಾಕರ್ತರಾಗಿದ್ದಾರೆ. ಬರುವ 2025, ಫೆಬ್ರವರಿ 4 ರಂದು ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದ 27ನೇ ವಾರ್ಷಿಕೋ ತ್ಸವ ನಡೆಸಲು ಸಂಕಲ್ಪ ಹೊಂದಿದ್ದು, ತತ್ಸಂಬಂಧ ಸುಹಾಸಿನಿಯರ ಹಸ್ತದಿಂದ ಇದೇ ದಿನಾಂಕ 16 ರಿಂದ ಪ್ರತಿ ಶನಿವಾರ ಸಂಜೆ 5ಕ್ಕೆ ದೇವಸ್ಥಾನದಲ್ಲಿ ಶ್ರೀ ವಿಷ್ಣುವಿಗೆ ಕ್ಷೀರಾಭಿಷೇಕ ನಂತರ ತುಳಸಿ ಅರ್ಚನೆ, ಹನುಮಾನ್ ಚಾಲೀಸ ಪಠಣ ಹಾಗೂ ಉಯ್ಯಾಲೋತ್ಸವವನ್ನು ನೆರವೇರಿಸಲಾಗುವುದು.

# ಷೇರುಪೇಟೆಯಲ್ಲಿ ಎರಡನೇ ದಿನ ಕುಸಿತ

ಮುಂಬೈ, ಅ. 31 - ಐಟಿ ಷೇರುಗಳಲ್ಲಿ ಕುಸಿತ ಹಾಗೂ ವಿದೇಶಿ ಹೂಡಿಕೆ ವಾಪಸ್ ಪಡೆಯುವಿಕೆ ಕಾರಣದಿಂದಾಗಿ ಷೇರುಪೇಟೆಯಲ್ಲಿ ಸತತ ಎರಡನೇ ದಿನ ಕುಸಿತ ಉಂಟಾಗಿದೆ. ಬಿ.ಎಸ್.ಇ. ಸೂಚ್ಯಂಕ 553.12 ಅಂಕಗಳ ಕುಸಿತ ಕಂಡಿದೆ. ಎನ್.ಎಸ್.ಇ. 135.50 ಅಂಕಗಳ ಕುಸಿತ ಕಂಡಿದೆ. ಸಿಯೋಲ್, ಟೋಕಿಯೋ ಹಾಗೂ ಹಾಂಕಾಂಗ್ ಮಾರುಕಟ್ಟೆಗಳೂ ಇಳಿಮುಖವಾಗಿವೆ.


ಉಚಿತ ಕಣ್ಣಿನ ಪರೀಕ್ಷೆ

ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ

ದಿನಾಂಕ : 01.11.2024 ರಿಂದ 15.11.2024 ರವರೆಗೆ

ಸಮಯ : ಬೆಳಗ್ಗೆ 10.30 ರಿಂದ ಮಧ್ಯಾಹ್ನ 1.30 ರವರೆಗೆ

ಮಧ್ಯಾಹ್ನ 3.00 ರಿಂದ ಸಂಜೆ 7.00 ಗಂಟೆವರೆಗೆ

ದೃಷ್ಟಿ ದೋಷವುಳ್ಳವರಿಗೆ ಜಪಾನ್ ನಿರ್ಮಿತ ಕಂಪ್ಯೂಟರಿನಿಂದ ಕಣ್ಣಿನ ಪರೀಕ್ಷೆ ಮಾಡಲಾಗುವುದು.

ಕಣ್ಣಿನ ಪೊರೆ ಬಂದಿರುವ ರೋಗಿಗಳಿಗೆ ಲೆನ್ಸ್ ಅಳವಡಿಸಿ, ಉಚಿತ ಶಸ್ತ್ರಚಿಕಿತ್ಸೆಗೆ ಹೆಸರು, ವಿಳಾಸ, ದೂರವಾಣಿ ಸಂಖ್ಯೆ, ನೋಂದಾಯಿಸಿಕೊಳ್ಳಲಾಗುವುದು.

ಸ್ಥಳ : ದೀಪ್ತಿ ಆಪ್ಟಿಕಲ್ಸ್

(ಕಂಪ್ಯೂಟರಿಕೃತ ಕಣ್ಣಿನ ಪರೀಕ್ಷಾ ಕೇಂದ್ರ)
ಚಿರಂಜೀವಿ ಮೆಡಿಕಲ್ಸ್‌ಪಕ್ಕ, ಸರ್ಕಾರಿ ಆಸ್ಪತ್ರೆ ಹತ್ತಿರ, ಇಂದಿರಾ ನಗರ, ಹರಿಹರ.

ಸಂಪರ್ಕಿಸಿ : 91647 58836


# ಟೆಕ್ವಾಂಡೊ ಸ್ಪರ್ಧೆಯಲ್ಲಿ ಗಣೇಶ್‌ಗೆ ಚಿನ್ನದ ಪದಕ



ದಾವಣಗೆರೆ, ಅ.31- ಥೈಲ್ಯಾಂಡ್‌ನ ಬ್ಯಾಂಕಾಕ್‌ನಲ್ಲಿ ಕಳೆದ ವಾರ ನಡೆದ 10ನೇ ಟೆಕ್ವಾಂಡೊ ಅಂತರರಾಷ್ಟ್ರೀಯ ಟೂರ್ನಿಯ 12 ರಿಂದ 14 ವರ್ಷದೊಳಗಿನ ಪೂಮ್ ವಿಭಾಗದಲ್ಲಿ ನಗರದ ಬಾಲಕ ಕೆ.ಎಂ. ಗಣೇಶ ಚಿನ್ನದ ಪದಕ ಗಳಿಸಿದ್ದಾನೆ.

ಫೈಟಿಂಗ್ ವಿಭಾಗದಲ್ಲಿ ಕಂಚಿನ ಪದಕವನ್ನು ಗಳಿಸುವ ಮೂಲಕ ಗಮನಾರ್ಹ ಸಾಧನೆ ಮಾಡಿದ್ದಾನೆ. ಗಣೇಶ್, ಸ್ಥಳೀಯ ಆಯುರ್ವೇದ ವೈದ್ಯರಾದ ಪ್ರೊ. ಡಾ. ಎಚ್.ಬಿ. ಮೋಹನ್ ಮತ್ತು ಚೈತ್ರಾ ಮೋಹನ್ ದಂಪತಿಯ ಪುತ್ರ. ಕ್ರೀಡಾಪಟುವಿಗೆ ಡಾ. ಗುರುರಾಜ ಇಟಗಿ ತರಬೇತುದಾರರಾಗಿದ್ದಾರೆ.

ಗಣೇಶ್ ಸಾಧನೆಗೆ ಗಣಿ, ಭೂವಿಜ್ಞಾನ ಮತ್ತು ತೋಟಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.


ಪುಣ್ಯಸ್ಮರಣೆ




ಶ್ರೀ ಮುದೇಗೌಡ್ರು ರೇವಣಸಿದ್ದಪ್ಪ
(ಜನನ : 01.04.1933 - ನಿಧನ : 01.11.2018)
ನಗರಸಭೆ ಮಾಜಿ ಸದಸ್ಯರು, ಗಣ್ಯ ವರ್ತಕರೂ ಮತ್ತು ಬಾಪೂಜಿ ವಿದ್ಯಾಸಂಸ್ಥೆಯ ಉಪಾಧ್ಯಕ್ಷರು
ಇವರ ಆರನೇ ಪುಣ್ಯಸ್ಮರಣೆ

ಶ್ರೀಮತಿ ದೇವೀರಮ್ಮ ಮುದೇಗೌಡ್ರು ರೇವಣಸಿದ್ದಪ್ಪ
(ಜನನ : 25.11.1936 - ನಿಧನ : 27.12.2021)
ಇವರ ತೃತೀಯ ಪುಣ್ಯಸ್ಮರಣೆ

ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ...

ಮಕ್ಕಳು, ಸೊಸೆಯಂದಿರು : ಶ್ರೀ ಶಿವಕುಮಾರ್ ಮುದೇಗೌಡ್ರು, ಶ್ರೀಮತಿ ಸುನಂದ, ಡಾ|| ಬಸವರಾಜ್ ಮುದೇಗೌಡ್ರು, ಶ್ರೀಮತಿ ಗೀತಾ, (Qatar) ಶ್ರೀ ಸಿದ್ದರಾಮೇಶ್ವರ ಮುದೇಗೌಡ್ರು, ಶ್ರೀಮತಿ ಜಯಶ್ರೀ ಶ್ರೀ ಸುರೇಶ್‌ಬಾಬು ಮುದೇಗೌಡ್ರು, ಶ್ರೀಮತಿ ರೇಖಾ, ಶ್ರೀಮತಿ ಅಕ್ಷತಾ, ಶ್ರೀ ನಿರೂಪ್

ಮೊಮ್ಮಕ್ಕಳು : ಶ್ರೀಮತಿ ಸುಷ್ಮಾ ಶ್ರೀ ಸಂತೋಷ್, ಶ್ರೀಮತಿ ಸೌಮ್ಯ, ಡಾ|| ರಜನಿಕಾಂತ್ , ಶ್ರೀಮತಿ ಕೈಲಿ (Kylie) ಶ್ರೀ ವರುಣ್ ಎಂ.ಬಿ. North Corolina (USA) ಆಶೀಶ್ ಎಂ.ಬಿ. Washington DC (USA), ನಿಶಾ, ನಿಖಿಲ್ ಮುದೇಗೌಡ್ರು ಕು|| ಪೂಜಾ ಮುದೇಗೌಡ್ರು, Little Rock, (USA), ಎಂ. ಪ್ರೀತಲ್, ಆಕಾಂಕ್ಷಾ ಎಂ.

ಮರಿಮೊಮ್ಮಕ್ಕಳು : ಸ್ತುತಿ, ದ್ವಿಜ, ದ್ವಿತಿ, ನಿಯಮ್, ನಿಯಾಮ್ ವರುಣ್ ಮತ್ತು ನೀಲ್ ವರುಣ್.

ದಿ|| ಮುದೇಗೌಡ್ರ ಸಿದ್ದಲಿಂಗಪ್ಪ ಮತ್ತು ಕುಟುಂಬ ವರ್ಗ, ಮುದೇಗೌಡ್ರ ಮನೆತನದವರು

ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ಸಿಬ್ಬಂದಿ ವರ್ಗ

Mudegowdra Revanasiddappa Memorial Trust(R)

ಶ್ರೀ ಮುದೇಗೌಡ್ರ ರೇವಣಸಿದ್ದಪ್ಪ ಸ್ಕೂಲ್ ಆಫ್ ಇನ್‌ಫಾರ್ಮೇಷನ್ ಸೈನ್ಸ್ & ಮ್ಯಾನೇಜ್‌ಮೆಂಟ್

BCA., B.com.,

ಉದಯ ಮಾರ್ಟ್ ಎದುರು, ಟಿವಿಎಸ್ ಶೋ ರೂಂ ಪಕ್ಕ, ಹದಡಿ ರಸ್ತೆ, ದಾವಣಗೆರೆ - 05
ಫೋ : 9686450470, e-mail: principal@smr-sism.in

BCA., B.com.,






"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ" CMofKarnataka https://dipr.karnataka.gov.in/ ಕರ್ನಾಟಕ ವಾರ್ತೆ

## ಸಂಕ್ಷಿಪ್ತ ಸುದ್ದಿ

**ವಂಚನೆಯ ಮೂಲಕ ಚುನಾವಣೆಯಲ್ಲಿ ಮೋದಿಗೆ ಗೆಲುವು : ಖರ್ಗೆ**
ಬೆಂಗಳೂರು : ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ವಂಚನೆಯ ಮೂಲಕ ಚುನಾವಣೆಗಳಲ್ಲಿ ಗೆಲುವು ಸಾಧಿಸುತ್ತಿದ್ದಾರೆ ಎಂದು ಹೇಳಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮತಯಂತ್ರಗಳ ನಿಖರತೆ ಬಗ್ಗೆಯೂ ಪ್ರಶ್ನಿಸಿದ್ದಾರೆ.

**ಎಲ್.ಎ.ಸಿ. ಸೈನ್ಯ ತೆರವು ಬಹುತೇಕ ಪೂರ್ಣ**
ಇಟಾನಗರ : ಚೀನಾದ ಜೊತೆಗಿನ ವಾಸ್ತವಿಕ ನಿಯಂತ್ರಣ ರೇಖೆಯಿಂದ ಸೈನ್ಯವನ್ನು ತೆರವುಗೊಳಿಸುವ ಕಾರ್ಯ ಬಹುತೇಕ ಪೂರ್ಣಗೊಂಡಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಿಳಿಸಿದ್ದಾರೆ.

**ನಗರ ನಕ್ಸಲರ ಬಣ್ಣ ಬಯಲು ಮಾಡಬೇಕಿದೆ :ಪ್ರಧಾನಿ**
ಏಕತಾನಗರ : ದೇಶದ ಒಳಗಿನ ಹಾಗೂ ಹೊರಗಿನ ಕೆಲ ಶಕ್ತಿಗಳು ಭಾರತವನ್ನು ಅಸ್ಥಿರಗೊಳಿಸುವ ಪ್ರಯತ್ನ ನಡೆಸಿವೆ. ಇವರು ವಿಶ್ವದ ಎದುರಲ್ಲಿ ಭಾರತವನ್ನು ಕೀಳಾಗಿ ಬಿಂಬಿಸುತ್ತಿದ್ದಾರೆ. ಇಂತಹ ನಗರ ನಕ್ಸಲರ ಬಣ್ಣ ಬಯಲು ಮಾಡಬೇಕಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

**11 ವರ್ಷದ ಬಾಲಕಿ ಗರ್ಭಪಾತಕ್ಕೆ ಹೈಕೋರ್ಟ್ ಅನುಮತಿ**
ಮುಂಬೈ : ಲೈಂಗಿಕ ಹಲ್ಲೆಗೆ ಗುರಿಯಾಗಿ ಗರ್ಭಿಣಿಯಾಗಿದ್ದ 11 ವರ್ಷದ ಬಾಲಕಿಯ 30 ವಾರಗಳ ಗರ್ಭಪಾತಕ್ಕೆ ಬಾಂಬೆ ಹೈಕೋರ್ಟ್ ಅನುಮತಿ ನೀಡಿದೆ.

**ಮೊದಲ ಬಾರಿಗೆ ನ್ಯೂಯಾರ್ಕ್ ನಗರ ಶಾಲೆಗಳಲ್ಲಿ ದೀಪಾವಳಿ**
ನ್ಯೂಯಾರ್ಕ್ : ಅಮೆರಿಕದ ನ್ಯೂಯಾರ್ಕ್ ನಗರದಲ್ಲಿ ಇದೇ ಮೊದಲ ಬಾರಿಗೆ ಶಾಲೆಗಳಿಗೆ ದೀಪಾವಳಿ ಸಂದರ್ಭದಲ್ಲಿ ರಜೆ ಘೋಷಿಸಲಾಗಿದೆ. ಇದರಿಂದಾಗಿ 11 ಲಕ್ಷ ಮಕ್ಕಳು ಬೆಳಕಿನ ಹಬ್ಬವಾದ ದೀಪಾವಳಿಯಲ್ಲಿ ಪಾಲ್ಗೊಂಡಿದ್ದಾರೆ.

**ನಾಲ್ವರು ಬಾಲಕಿಯರ ಮೇಲೆ ಅತ್ಯಾಚಾರ ಎಸಗಿದವನ ಬಂಧನ**
ಅಹಮದಾಬಾದ್ : 8ರಿಂದ 11 ವರ್ಷದ ನಾಲ್ವರು ಬಾಲಕಿಯರ ಮೇಲೆ ಅತ್ಯಾಚಾರ ಎಸಗಿ, ಆ ದೃಶ್ಯಗಳನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದ 54 ವರ್ಷದ ಓರ್ವನನ್ನು ಗುಜರಾತ್‌ನ ಅಹಮದಾಬಾದ್ ಪೊಲೀಸರು ಬಂಧಿಸಿದ್ದಾರೆ. ಆತನ ಮೊಬೈಲ್‌ನಿಂದ ನೂರಾರು ಅಶ್ಲೀಲ ವಿಡಿಯೋಗಳು ಪತ್ತೆಯಾಗಿವೆ ಎಂದು ಪೊಲೀಸರು ಹೇಳಿದ್ದಾರೆ.

**ಈರುಳ್ಳಿ ಬಾಂಬ್ ಪಟಾಕಿ ಸಿಡಿದು ಓರ್ವನ ಸಾವು**
ಏಲೂರು : ಆಂಧ್ರ ಪ್ರದೇಶದ ಏಲೂರು ಪಟ್ಟಣದಲ್ಲಿ ದ್ವಿಚಕ್ರ ವಾಹನದಲ್ಲಿ ಸಾಗಿಸುತ್ತಿದ್ದ ಈರುಳ್ಳಿ ಬಾಂಬ್ ಪಟಾಕಿ ಸ್ಫೋಟಗೊಂಡು ಒಬ್ಬರು ಸಾವನ್ನಪ್ಪಿದ್ದಾರೆ ಹಾಗೂ ಆರು ಜನ ಗಾಯಗೊಂಡಿದ್ದಾರೆ. ಈರುಳ್ಳಿ ಬಾಂಬ್ ಇದ್ದ ಚೀಲ ರಸ್ತೆ ಮೇಲೆ ಬಿದ್ದು ತಕ್ಷಣ ಸ್ಫೋಟ ಸಂಭವಿಸಿದೆ.

**ಸ್ಪೇನ್ ಭೀಕರ ಪ್ರವಾಹದಲ್ಲಿ 158 ಸಾವು**
ವಾಲೆನ್ಸಿಯಾ : ಸ್ಪೇನ್‌ನಲ್ಲಿ ಸಂಭವಿಸಿದ ಭೀಕರ ಪ್ರವಾಹದಲ್ಲಿ ಮೃತರ ಸಂಖ್ಯೆ 158ಕ್ಕೆ ಏರಿಕೆಯಾಗಿದೆ. ಸಾವಿನ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಪೂರ್ವ ಸ್ಪೇನ್‌ನ ವಾಲೆನ್ಸಿಯಾ ಪ್ರಾಂತ್ಯದಲ್ಲಿ ತೀವ್ರ ಹಾನಿಯಾಗಿದೆ.

# ವಕ್ಫ್ ಆಸ್ತಿ ಕಬಳಿಕೆ ವಿರುದ್ಧ ನ. 4ರಿಂದ ತೀವ್ರ ಹೋರಾಟ



ಬೆಂಗಳೂರು, ಅ.31 - ರೈತರ ಜಮೀನು, ದೇವಸ್ಥಾನಗಳ ಆಸ್ತಿಗಳನ್ನು ಕಬಳಿಸುತ್ತಿರುವ ವಕ್ಫ್ ಮಂಡಳಿ ಹಾಗೂ ಕಾಂಗ್ರೆಸ್ ಸರ್ಕಾರದ ವಿರುದ್ಧ ನವೆಂಬರ್ 4 ರಿಂದ ತೀವ್ರ ಹೋರಾಟ ಆರಂಭಿಸಲಾಗುವುದು ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಜಯಪುರದ ಬಳಿಕ ಕೋಲಾರದಲ್ಲಿ ದೇವಸ್ಥಾನದ ಆಸ್ತಿಗಳನ್ನು ವಕ್ಫ್ ಬೋರ್ಡ್ ಆಸ್ತಿ ಎಂದು ನಮೂದಿಸಲಾಗಿದೆ. ನಾಗಮಂಗಲ, ಚನ್ನಪಟ್ಟಣ, ಬೆಳಗಾವಿ ಮೊದಲಾದ ಕಡೆಗಳಲ್ಲಿ ರೈತರ ಜಮೀನುಗಳನ್ನು ಕೊಳ್ಳೆ ಹೊಡೆಯಲು ಪಹಣಿಯಲ್ಲಿ ವಕ್ಫ್ ಆಸ್ತಿ ಎಂದು ನಮೂದಿಸಲಾಗಿದೆ. ಇದರ ವಿರುದ್ಧ ಬಿಜೆಪಿ ಹೋರಾಟ ಆರಂಭಿಸಿದೆ ಎಂದು ತಿಳಿಸಿದರು.

ಭೂಗಳ್ಳರು ಮಾತ್ರವಲ್ಲದೆ, ಸರ್ಕಾರವೇ ಅಧಿಕೃತವಾಗಿ ಒತ್ತುವರಿ ಆರಂಭ ಮಾಡಿದೆ. ಇದರ ವಿರುದ್ಧ ರೈತ ಸಂಘಟನೆಗಳು ತೀವ್ರವಾಗಿ ಪ್ರತಿಭಟಿಸಬೇಕು. ಹಿಂದೆ ಮುಸ್ಲಿಂ ರಾಜರು ದಾಳಿ ಮಾಡಿ, ಮತಾಂಧತೆ ಮೆರೆದಿದ್ದರು. ಟಿಪ್ಪು ಸುಲ್ತಾನ ಕೊಡಗಿನಲ್ಲಿ ಮತಾಂತರ ಮಾಡಿರುವುದು ಇದಕ್ಕೆ ಸಾಕ್ಷಿ. ಇದೇ ರೀತಿ ಈಗ ಜಮೀನಿನ ಕಬಳಿಕೆ ನಡೆಯುತ್ತಿದೆ. ಇಂತಹವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಓಲೈಸುತ್ತಿದ್ದಾರೆ ಎಂದು ದೂರಿದರು.

ಬಿಜೆಪಿ ಯಾವುದೇ ಸಮಸ್ಯೆಯನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವುದಿಲ್ಲ ವೆಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ. ಆದರೆ ನಾವು ಹೋರಾಟ ಮಾಡಿದ್ದಕ್ಕೆ ಸಿಎಂ ವಿರುದ್ಧ ಪ್ರಕರಣ ದಾಖಲಾಗಿದೆ. ಲೋಕಾಯುಕ್ತ ಹಾಗೂ ಇಡಿ ತನಿಖೆ ಮಾಡುತ್ತಿದೆ. ಬೆಂಬಲಿಗರ ವಿರುದ್ಧವೂ ತನಿಖೆ ನಡೆದಿದೆ. ಈ ಹೋರಾಟ ತಾರ್ಕಿಕ ಅಂತ್ಯಕ್ಕೆ ಬಂದಿದ್ದು, ಇನ್ನು ನ್ಯಾಯಾಲಯದ ಮೂಲಕ ಹೋರಾಟ ಮಾಡುತ್ತೇವೆ ಎಂದರು.

ವಕ್ಫ್ ವಿರುದ್ಧ ರೈತರು ಹೋರಾಟ ಮಾಡುತ್ತಿದ್ದು, ಬಿಜೆಪಿ ಅವರಿಗೆ ಬೆಂಬಲ ನೀಡುತ್ತಿದೆ. ರೈತರಿಗೆ ನೋಟಿಸ್ ಕೊಟ್ಟ ಅಧಿಕಾರಿಯನ್ನು ಜೈಲಿಗೆ ಹಾಕಲು ಸಿಎಂಗೆ ಧಮ್ ಇಲ್ಲ. ಇಲ್ಲಿ ರಾಜಕಾರಣಕ್ಕಿಂತ ರೈತರಿಗೆ ಉತ್ತರ ನೀಡುವುದು ಮುಖ್ಯ ಎಂದು ಆಗ್ರಹಿಸಿದರು.

ಬಿಜೆಪಿ ರಾಷ್ಟ್ರೀಯ ಪಕ್ಷವಾಗಿದ್ದು, ನಾವು ಹಿಟ್ ಮಾಡಿದ ಕೂಡಲೇ ಕಾಂಗ್ರೆಸ್ ಓಡಿಹೋಗುತ್ತದೆ. ಈ ಸರ್ಕಾರ ತುಘಲಕ್ ಆಡಳಿತ ನೀಡಿ ನಗೆಪಾಟಲಿಗೀಡಾಗಿದೆ. ಗ್ಯಾರಂಟಿ ಯೋಜನೆಗಳ ಪೈಕಿ ಎರಡು ಯೋಜನೆಗಳು ಟುಸ್ ಪಟಾಕಿಯಾಗಲಿದೆ. ಡಿ.ಕೆ. ಶಿವಕುಮಾರ್ ಅವರಿಗೆ ಮಹಿಳೆಯರು ಫೋನ್ ಕರೆ ಮಾಡಿ ಯೋಜನೆ ಬೇಡವೆಂದು ತಿಳಿಸಿದ್ದಾರಂತೆ ಎಂದು ಅಶೋಕ್ ಹೇಳಿದರು.

ಕಳ್ಳನಿಗೆ ಪಿಳ್ಳೆ ನೆವ ಎಂಬಂತೆ, ಯೋಜನೆ ರದ್ದುಪಡಿಸಲು ಈ ರೀತಿ ಕಾರಣ ಹೇಳುತ್ತಿದ್ದಾರೆ. ಇದರ ಜೊತೆಗೆ ಪಡಿತರ ಚೀಟಿ ರದ್ದು ಮಾಡಲು ಎಲ್ಲ ಬಗೆಯ ಷರತ್ತುಗಳನ್ನು ವಿಧಿಸುತ್ತಿದ್ದಾರೆ. ಅಧಿಕಾರಕ್ಕೆ ಬಂದ ನಂತರ ಏನು ಬೇಕಾದರೂ ಮಾಡಬಹುದು ಎಂಬಂತೆ ವರ್ತಿಸುತ್ತಿದ್ದಾರೆ. ಲೋಕಸಭಾ ಚುನಾವಣೆ ಬಳಿಕ ಗ್ಯಾರಂಟಿ ಇರಲ್ಲ ಎಂದು ನಾವು ಹೇಳಿದ್ದೆವು. ಈಗ ಅದರ ಮೊದಲ ಹೆಜ್ಜೆಯನ್ನು ಸರ್ಕಾರ ಇರಿಸಿದೆ ಎಂದರು.

ಸಾರಿಗೆ ಇಲಾಖೆ ನಷ್ಟದಲ್ಲಿದೆ. ಸರ್ಕಾರವೇ ಸಾರಿಗೆ ಇಲಾಖೆಗೆ ಕೋಟ್ಯಂತರ ರೂಪಾಯಿ ಹಣ ನೀಡಬೇಕಿದೆ. ಸರ್ಕಾರದ ಖಜಾನೆ ಪೂರ್ಣ ಖಾಲಿಯಾಗಿದೆ. ಇಷ್ಟಾದರೂ ಯಾವ ಮುಖ ಇಟ್ಟುಕೊಂಡು ಉಪಚುನಾವಣೆ ಎದುರಿಸಲು ಮುಂದಾಗಿದ್ದಾರೆಂದು ಗೊತ್ತಿಲ್ಲ. ಸಿಎಂ ಸಿದ್ದರಾಮಯ್ಯ ಒಮ್ಮೆಯೂ ಚನ್ನಪಟ್ಟಣಕ್ಕೆ ಭೇಟಿ ನೀಡಿಲ್ಲ. ಡಿ.ಕೆ.ಶಿವಕುಮಾರ್ ಬೆಂಗಳೂರು ಉಸ್ತುವಾರಿ ವಹಿಸಿಕೊಂಡು ಕಮಿಶನ್ ಪಡೆಯುತ್ತಿದ್ದಾರೆ. ರಾಮಲಿಂಗಾರೆಡ್ಡಿ ಬೆಂಗಳೂರು ಉಸ್ತುವಾರಿ ಸಿಗಲು ಕಾಯುತ್ತಿದ್ದಾರೆ. ಜನರು ಈ ಸರ್ಕಾರವನ್ನು ತಿರಸ್ಕರಿಸಲಿದ್ದಾರೆ ಎಂದರು.

ನಮ್ಮ ಕುಟುಂಬದಿಂದ 65 ಎಕರೆ ಜಾಗವನ್ನು ಹೆಚ್‌ಎಂಟಿಗೆ ನೀಡಿದ್ದೆವು. ಈಗ ಆ ಜಾಗದಲ್ಲಿ ಅರಣ್ಯ ನಾಶವಾಗಿದೆ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಹೇಳಿದ್ದಾರೆ. ಇದು ಅರಣ್ಯ ಭೂಮಿ ಎನ್ನುವುದಾದರೆ, ಇದನ್ನು ನೀಡಿದ್ದೇ ಕಾಂಗ್ರೆಸ್ ಸರ್ಕಾರ ಎಂಬುದನ್ನು ನೆನಪಿಸಿಕೊಳ್ಳಬೇಕು. ಹೆಚ್‌ಎಂಟಿ ಕಾರ್ಖಾನೆಯನ್ನು ಅಂದಿನ ಪ್ರಧಾನಿ ಜವಹರಲಾಲ್ ನೆಹರು ಉದ್ಘಾಟಿಸಿದ್ದರು. ಅವರೇ ಜಾಗ ನೀಡಿ, ಈಗ ಅದು ಅರಣ್ಯ ಭೂಮಿ ಎಂದು ಹೇಳುತ್ತಿದ್ದಾರೆ. ನಾನು ಒಂದನೇ ತರಗತಿಯಲ್ಲಿ ಇದ್ದಾಗಲೂ ಅದು ಎಚ್‌ಎಂಟಿಗೆ ಸೇರಿತ್ತು. ಈಗ ಇವರು ಮಾಜಿ ಪ್ರಧಾನಿ ನೆಹರು ವಿರುದ್ಧ ಪ್ರಕರಣ ದಾಖಲಿಸುತ್ತಾರಾ? ಅಂದಿನ ಕಾಂಗ್ರೆಸ್ ಮುಖ್ಯಮಂತ್ರಿ ವಿರುದ್ಧ ಕೇಸು ದಾಖಲಿಸುತ್ತಾರಾ? ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಗುರಿ ಮಾಡಲು ಈ ರೀತಿ ಮಾಡಬಾರದು. ಅರಣ್ಯ ಭೂಮಿಯನ್ನು ಪ್ರಧಾನಿ ನರೇಂದ್ರ ಮೋದಿ ಅಥವಾ ಬಿಜೆಪಿ ನೀಡಿಲ್ಲ. ಕಾಂಗ್ರೆಸ್ ಸರ್ಕಾರದ ವಿರುದ್ಧವೇ ಭೂ ಕಬಳಿಕೆ ಆರೋಪ ಮಾಡಬೇಕಾಗುತ್ತದೆ ಎಂದರು.

# ಜಿಲ್ಲೆಯ ಇಬ್ಬರು ಸಾಧಕರಿಗೆ ಕರ್ನಾಟಕ ರಾಜ್ಯೋತ್ಸವದ ಗೌರವ

ದಾವಣಗೆರೆ,ಅ.31- ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿ ನಾಡು -ನುಡಿಗಾಗಿ ಸಲ್ಲಿಸುತ್ತಿರುವ ರಾಜ್ಯದ ವಿವಿಧ ಕ್ಷೇತ್ರಗಳ ಸಾಧಕರಿಗೆ ಕೊಡಮಾಡುವ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಮೂಲತಃ ದಾವಣಗೆರೆ ಜಿಲ್ಲೆಯವರಾದ ಹಿರಿಯ ಪತ್ರಕರ್ತ, ಚಲನಚಿತ್ರ ನಿರ್ದೇಶಕ ಎನ್.ಎಸ್. ಶಂಕರ್ ಅವರೂ ಸೇರಿದಂತೆ, 69 ಮಹನೀಯರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಿದೆ.

ಇದೇ ಸಂದರ್ಭದಲ್ಲಿ, ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣಗೊಂಡು 50 ವರ್ಷ ತುಂಬಿದ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ವಿವಿಧ ಕ್ಷೇತ್ರಗಳ 50 ಮಹಿಳೆಯರು ಮತ್ತು 50 ಪುರುಷರು ಒಟ್ಟು 100 ಸಾಧಕರಿಗೆ ಸುವರ್ಣ ಮಹೋತ್ಸವ ಪ್ರಶಸ್ತಿ ನೀಡಿದ್ದು, ಈ ಪ್ರಶಸ್ತಿಗೆ ದಾವಣಗೆರೆ ಜಿಲ್ಲೆಯವರಾದ ಹಿರಿಯ ಸಾಹಿತಿ ಆರ್.ಜಿ. ಹಳ್ಳಿ ನಾಗರಾಜ್ ಭಾಜನರಾಗಿದ್ದಾರೆ.

ನಾಳೆ ದಿನಾಂಕ 1ರ ಶುಕ್ರವಾರ ಬೆಂಗಳೂರಿನ ವಿಧಾನಸೌಧದ ಮುಂಭಾಗದಲ್ಲಿ ರಾಜ್ಯ ಸರ್ಕಾರ





ಏರ್ಪಾಡಿಸಿರುವ ಸಮಾರಂಭದಲ್ಲಿ ಎನ್. ಎಸ್. ಶಂಕರ್ ಹಾಗೂ ಆರ್. ಜಿ. ಹಳ್ಳಿ ನಾಗರಾಜ ಅವರುಗಳೂ ಸೇರಿದಂತೆ, ಕರ್ನಾಟಕ ರಾಜ್ಯೋತ್ಸವ ಮತ್ತು ಸುವರ್ಣ ಮಹೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಎನ್.ಎಸ್. ಶಂಕರ್ ಅವರ ತಂದೆ ತಾಯಿ ನ್ಯಾಮತಿಯಲ್ಲಿ ನೆಲೆಸಿದ್ದರು. ಇಬ್ಬರೂ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಶಂಕರ್, ತಮ್ಮ ಶಿಕ್ಷಣದ ನಂತರ ಪತ್ರಕರ್ತರಾಗಿ ಹಲವು ಪತ್ರಿಕೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಮುಖ್ಯವಾಗಿ ಪ್ರಜಾವಾಣಿ,

### ಎನ್.ಎಸ್. ಶಂಕರ್, ಆರ್.ಜಿ. ಹಳ್ಳಿಗೆ ಇಂದು ಪ್ರಶಸ್ತಿ ಪ್ರದಾನ

ಮುಂಗಾರು, ಸುದ್ದಿ ಸಂಗಾತಿ, ಲಂಕೇಶ ಪತ್ರಿಕೆಯಲ್ಲಿ ಕೆಲಸ ಮಾಡಿ, ಕಿರುಚಿತ್ರ, ಚಲನಚಿತ್ರ ನಿರ್ದೇಶಕರಾಗಿ ಚಿತ್ರಗಳಿಗೆ ರಾಜ್ಯ ಪ್ರಶಸ್ತಿ ಪಡೆದಿದ್ದಾರೆ.

ನಟ ರಮೇಶ್ ಅಭಿನಯದ 'ಉಲ್ಟಾಪಲ್ಟಾ', 'ರಾಂಗ್ ನಂಬರ್' ಮೊದಲಾದ ಚಿತ್ರ ನಿರ್ಮಿಸಿದ್ದಲ್ಲದೆ, ಈಗ ಮೂರು ಕಥೆಗಳ ಆಧಾರಿತ ಸಿನಿಮಾ ನಿರ್ಮಿಸುತ್ತಿದ್ದಾರೆ. ಇವರ ಹಲವಾರು ಸ್ವತಂತ್ರ ಕೃತಿಗಳು ಹಾಗೂ ಅನುವಾದ ಕೃತಿಗಳು ಹೊರ ಬಂದಿವೆ. ಇವರ ಸಾಧನೆ ಗುರುತಿಸಿ 2024ರ ರಾಜ್ಯೋತ್ಸವ ಪ್ರಶಸ್ತಿಯನ್ನು ಸರ್ಕಾರ ನೀಡಿದೆ. ಪ್ರಶಸ್ತಿ ಐದು ಲಕ್ಷ ನಗದು, 25 ಗ್ರಾಂ ಚಿನ್ನದ ಪ್ರಶಸ್ತಿ ಫಲಕ ಒಳಗೊಂಡಿದೆ.

ಆರ್.ಜಿ. ಹಳ್ಳಿ ನಾಗರಾಜ ಅವರು ಮೂಲತಃ ಪತ್ರಕರ್ತರು, ಸಾಹಿತಿ. ದಾವಣಗೆರೆ ತಾಲ್ಲೂಕು ರಾಮಗೊಂಡನಹಳ್ಳಿ ರೈತ ಕುಟುಂಬದಲ್ಲಿ ಜನಿಸಿ, ಮೈಸೂರು, ಬೆಂಗಳೂರಿನಲ್ಲಿ ಶಿಕ್ಷಣ ಪಡೆದು ವಿಜಯ ಕರ್ನಾಟಕ, ಉಷಾಕಿರಣ, ವಿಜಯವಾಣಿ ಪತ್ರಿಕೆಗಳಲ್ಲಿ ವರದಿಗಾರರಾಗಿ, ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇದುವರೆಗೆ 12 ಕೃತಿ ಪ್ರಕಟಿಸಿರುವ ನಾಗರಾಜ, ಕಥೆ, ಕವಿತೆ, ವಿಮರ್ಶೆ, ವ್ಯಕ್ತಿ ಚಿತ್ರ ಬರೆದಿದ್ದಾರೆ.

ಈಗ 'ಅನ್ವೇಷಣೆ' ಎಂಬ ಸಾಹಿತ್ಯ ಪತ್ರಿಕೆಯ ಸಂಪಾದಕರಾಗಿದ್ದಾರೆ. ಇವರು ಬಂಡಾಯ ಸಾಹಿತ್ಯ ಸಂಘಟನೆಯಲ್ಲಿ ಪುಸ್ತಕ ಜಾಥಾ ಏರ್ಪಡಿಸಿದ್ದಾರೆ. ಭಾಷಾ ಚಳವಳಿಯಲ್ಲಿ ಭಾಗಿಯಾಗಿ ಜೈಲುವಾಸ ಅನುಭವಿಸಿದ್ದಾರೆ.

ಇವರ ಸಾಧನೆ ಗಮನಿಸಿ ರಾಜ್ಯ ಸರ್ಕಾರ ಇವರಿಗೆ 2024ರ ಸುವರ್ಣ ಕರ್ನಾಟಕ ರಾಜ್ಯೋತ್ಸವದ ವಿಶೇಷ ಪ್ರಶಸ್ತಿ ನೀಡಿ ಗೌರವಿಸುತ್ತಿದೆ. ಪ್ರಶಸ್ತಿ ಒಂದು ಲಕ್ಷ ಮೊತ್ತ, ಪ್ರಶಸ್ತಿ ಫಲಕ ಒಳಗೊಂಡಿದೆ.

## ಭಾರತ – ಚೀನಾ ಪಡೆಗಳ ಸಿಹಿ ವಿನಿಮಯ



ನವದೆಹಲಿ, ಅ. 31 - ಪೂರ್ವ ಲಡಾಖ್‌ನ ವಾಸ್ತವಿಕ ಗಡಿ ರೇಖೆಯ ಬಳಿ ಭಾರತ ಹಾಗೂ ಚೀನಾ ಪಡೆಗಳು ದೀಪಾವಳಿ ಸಿಹಿ ವಿನಿಮಯ ಮಾಡಿಕೊಂಡಿವೆ.

ಪೂರ್ವ ಲಡಾಖ್ ಭಾಗದ ಎರಡು ಸಂಘರ್ಷ ಪ್ರದೇಶಗಳಿಂದ ಸೈನ್ಯವನ್ನು ನೆನ್ನೆಯಷ್ಟೇ ಸಂಪೂರ್ಣವಾಗಿ ವಾಪಸ್ ಪಡೆಯಲಾಗಿತ್ತು. ಇದಾದ ನಂತರ ದೀಪಾವಳಿ ಸಂದರ್ಭದಲ್ಲಿ ಸಿಹಿ ವಿನಿಮಯ ಮಾಡಿಕೊಳ್ಳುವ ಹಳೆಯ ಸಂಪ್ರದಾಯವನ್ನು ಮತ್ತೆ ಆರಂಭಿಸಲಾಗಿದೆ.

ವಾಸ್ತವಿಕ ಗಡಿ ರೇಖೆಯ ಐದು ಗಡಿ ಸಿಬ್ಬಂದಿ ಭೇಟಿ ತಾಣ ಸೇರಿದಂತೆ ಹಲವು ಕಡೆ ಸಿಹಿ ವಿನಿಮಯ ಮಾಡಿಕೊಳ್ಳಲಾಗಿದೆ. ಹಬ್ಬ ಹಾಗೂ ಪ್ರಮುಖ ದಿನಗಳಂದು ಭಾರತ ಹಾಗೂ ಚೀನಾ ಪಡೆಗಳು ಸಿಹಿ ವಿನಿಮಯ ಮಾಡಿಕೊಳ್ಳುವುದು ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಪದ್ಧತಿಯಾಗಿದೆ.

## ಎತ್ತರ ಜಿಗಿತ : ಕಕ್ಕರಗೊಳ್ಳದ ಪಟೇಲ್ ವೀರಪ್ಪ ಶಾಲೆಯ ಕೆ.ಎಂ. ಶಶಾಂಕ್ ರಾಜ್ಯ ಮಟ್ಟಕ್ಕೆ ಆಯ್ಕೆ



ದಾವಣಗೆರೆ, ಅ. 30- ಇಲ್ಲಿಗೆ ಸಮೀಪದ ಕಕ್ಕರಗೊಳ್ಳ ಗ್ರಾಮದ ಪಟೇಲ್ ವೀರಪ್ಪ ಆಂಗ್ಲ ಮಾಧ್ಯಮ ಶಾಲೆಯ ಏಳನೇ ತರಗತಿ ವಿದ್ಯಾರ್ಥಿ ಕೆ.ಎಂ. ಶಶಾಂಕ್ ಜಿಲ್ಲಾ ಮಟ್ಟದ ಎತ್ತರ ಜಿಗಿತ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಗಳಿಸಿ ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ಅವರಿಗೆ ಶಾಲಾ ಆಡಳಿತ ಮಂಡಳಿಯ ನಿರ್ದೇಶಕರಾದ ಶ್ರೀಮತಿ ಪ್ರಣಿತಾ ಗಿರಿರಾಜ್, ಸಂಯೋಜಕರಾದ ಸೋಮಶೇಖರ್ ಹಾಗೂ ಕಲಿವೀರಪ್ಪ, ದೈಹಿಕ ಶಿಕ್ಷಕರಾದ ಎನ್. ಸೋಮ್ಲಾನಾಯಕ್ ಹಾಗೂ ಶಾಲಾ ಸಿಬ್ಬಂದಿ ವರ್ಗದವರು ಅಭಿನಂದಿಸಿದರು.

## ತಾಯಿ ಹೆಸರಲ್ಲೊಂದು ಗಿಡ ನೆಡುವ ಕಾರ್ಯಕ್ರಮ

ದಾವಣಗೆರೆ, ಅ. 31 - ನಗರದ ಎ. ಆರ್. ಎಂ. ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರ, ಐ.ಕ್ಯೂ.ಎ.ಸಿ. ಘಟಕ ಹಾಗೂ ನೆಹರು ಯುವ ಕೇಂದ್ರ, ಕಾಲೇಜು ಎನ್.ಎಸ್.ಎಸ್ ಘಟಕದ ಸಹಯೋಗದಲ್ಲಿ 'ತಾಯಿ ಹೆಸರಲ್ಲೊಂದು ಗಿಡ ನೆಡುವ ಕಾರ್ಯಕ್ರಮ' (ಏಕ್ ಪೇಡ್ ಮಾ ಕೆ ನಾಮ್) ವನ್ನು ಆಚರಿಸಲಾಯಿತು. ತಾಯಿ ಹೆಸರಲ್ಲಿ ಸುಮಾರು 50 ಕ್ಕೂ ಹೆಚ್ಚು ಸಸಿಯನ್ನು ವಿದ್ಯಾರ್ಥಿಗಳಿಂದ ನೆಡಸಲಾಯಿತು.

ಕಾರ್ಯಕ್ರಮದಲ್ಲಿ ನೆಹರು ಯುವ ಕೇಂದ್ರದ ಎನ್.ಜಿ.ಓ ಘಟಕದ ಚಂದ್ರಶೇಖರ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಅಧ್ಯಕ್ಷತೆಯನ್ನು ಕಾಲೇಜು ಪ್ರಿನ್ಸಿಪಾಲ್ ಎಂ.ಡಿ. ಅಣ್ಣಯ್ಯ ವಹಿಸಿದ್ದರು. ಎನ್.ಎಸ್.ಎಸ್ ಅಧಿಕಾರಿಗಳಾದ ಮೊಹಮ್ಮದ್ ರಿಯಾಜ್, ಟಿ.ಎನ್. ಮೌನೇಶ್ವರ, ಡಾ. ಟಿ.ಎನ್. ಮಧು ಮಾಲತಿಷ ಬೋಧಕ ಕಾಡಜ್ಜಿ ಶಿವಪ್ಪ, ಎಸ್.ಬಿ. ಮನೋಹರ ಡಾ. ಬಿ.ಸಿ. ರಾಕೇಶ್, ಬಸವರಾಜ ವಿ. ದಮ್ಮಳ್ಳಿ. ಹೆಚ್. ಶಾಂತನಾಯ್ಕ, ಜಿ. ಸುಮ ಭಾಗವಹಿಸಿದ್ದರು.

## ಕೃಷಿ ಹೊಂಡ ನಿರ್ಮಾಣಕ್ಕೆ ಅರ್ಜಿ

ದಾವಣಗೆರೆ, ಅ.31-ಹೊನ್ನಾಳಿ ಮತ್ತು ನ್ಯಾಮತಿ ತಾಲ್ಲೂಕುಗಳಲ್ಲಿ ಕೃಷಿ ಭಾಗ್ಯ ಯೋಜನೆಯಡಿ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಈ ಯೋಜನೆಯು ಪ್ಯಾಕೇಜ್ ಮಾದರಿಯಲ್ಲಿದ್ದು, ಕ್ಷೇತ್ರ ಬದು, ಕೃಷಿ ಹೊಂಡ, ಪಾಲಿಥಿನ್ ಹೊದಿಕೆ, ಡೀಸೆಲ್ ಪಂಪ್ ಸೆಟ್, ಲಘು ನೀರಾವರಿ ಘಟಕ ಹಾಗೂ ತಂತಿಬೇಲಿ ಒಳಗೊಂಡಿರುತ್ತದೆ.

ಅರ್ಜಿ ಸಲ್ಲಿಸಲು ನ.11 ಕೊನೆ ದಿನವಾಗಿದ್ದು, ಆಸಕ್ತ ಹೊನ್ನಾಳಿ ಮತ್ತು ನ್ಯಾಮತಿ ತಾಲ್ಲೂಕಿನ ರೈತರು ; ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು.

ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಸಂಪರ್ಕಿಸುವಂತೆ ಸಹಾಯಕ ಕೃಷಿ ನಿರ್ದೇಶಕಿ ಎ.ಎಸ್. ಪ್ರತಿಮಾ ತಿಳಿಸಿದ್ದಾರೆ.

## ಭಗವದ್ಗೀತಾ ಕಂಠಪಾಠ ಸ್ಪರ್ಧೆ

ದಾವಣಗೆರೆ,ಅ.31- ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಅಂಗ ಸಂಸ್ಥೆ ಕಲಾಕುಂಚ ಕೇರಳ ಗಡಿನಾಡ ಶಾಖೆಯಿಂದ ನವೆಂಬರ್ 11 ರಂದು ಶಾಲಾ ಮಕ್ಕಳಿಗೆ ಭಗವದ್ಗೀತಾ ಕಂಠಪಾಠ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ.

ಆಸಕ್ತ ಮಕ್ಕಳು ಇದೇ ದಿನಾಂಕ 5-11-2024 ರೊಳಗೆ (8281283091, 9446063502, 8289800677) ಹೆಸರು ನೋಂದಾಯಿಸಬೇಕಾಗಿ ಕಲಾಕುಂಚ ಕೇರಳದ ಗಡಿನಾಡಿನ ಶಾಖೆಯ ಅಧ್ಯಕ್ಷೆ ಶ್ರೀಮತಿ ಜಯಲಕ್ಷ್ಮಿ ಕಾರಂತ್ ವಿನಂತಿಸಿದ್ದಾರೆ.

## ಚಾಂಪಿಯನ್‌ಶಿಪ್‌ಗೆ ದಾವಣಗೆರೆ ವಿ.ವಿ. ಕಬಡ್ಡಿ ತಂಡ ಆಯ್ಕೆ



ದಾವಣಗೆರೆ, ಅ. 30- ಚೆನ್ನೈನ ಎಸ್. ಆರ್.ಎಂ. ವಿವಿಯಲ್ಲಿ ನಡೆಯುವ ಸೌತ್ ಜೋನ್ ಇಂಟರ್ ಯೂನಿವರ್ಸಿಟಿ ಕಬಡ್ಡಿ ಚಾಂಪಿಯನ್ ಶಿಪ್ ಪಂದ್ಯಾವಳಿಗೆ ದಾವಣಗೆರೆ ವಿಶ್ವವಿದ್ಯಾನಿಲಯದ ಕಬ್ಬಡಿ ತಂಡ ಆಯ್ಕೆಯಾಗಿದೆ.

## ವಸತಿ ಯೋಜನೆ : ಅರ್ಜಿ ಆಹ್ವಾನ

ದಾವಣಗೆರೆ, ಅ. 31 - ದಾವಣಗೆರೆ ಪಾಲಿಕೆ ವ್ಯಾಪ್ತಿಯಲ್ಲಿ ವಾಜಪೇಯಿ ನಗರ ವಸತಿ ಯೋಜನೆ ಹಾಗೂ ಡಾ. ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ ಯಡಿ ಮನೆ ನಿರ್ಮಿಸಿಕೊಳ್ಳುವ ಆಸಕ್ತರಿಂದ ಅರ್ಜಿ ಆಹ್ವಾನಿಸ ಲಾಗಿದೆ. ದಾವಣಗೆರೆ ಉತ್ತರ ಮತ್ತು ದಕ್ಷಿಣ ಕ್ಷೇತ್ರ ವ್ಯಾಪ್ತಿಯಲ್ಲಿರುವ ಶಿಥಿಲವಾಗಿರುವ ಮನೆಗಳು ಹಾಗೂ ಖಾಲಿ ನಿವೇಶನ ಹೊಂದಿ ರುವವರು ಅರ್ಜಿ ಸಲ್ಲಿಸಬಹುದು.

## ಎನ್.ಪರಶುರಾಮಪ್ಪ ಅವರಿಗೆ ಪ್ರಶಸ್ತಿ



ದಾವಣಗೆರೆ, ಅ.31- ನಗರದ ಯೋಗ ಗುರು ಎನ್. ಪರಶುರಾಮಪ್ಪ ಅವರಿಗೆ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯಿಂದ ಕೊಡಮಾಡುವ 'ಕರ್ನಾಟಕ ಮುಕುಟಮಣಿ' ರಾಜ್ಯ ಮಟ್ಟದ ಪ್ರಶಸ್ತಿ ಲಭಿಸಿದೆ. ನಾಳೆ ದಿನಾಂಕ 1 ರಂದು ನಗರದ ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಕಲ್ಯಾಣ ಮಂಟಪದಲ್ಲಿ ಆಯೋಜಿಸಿರುವ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯು 77ನೇ ರಾಜ್ಯೋತ್ಸವದ ಸಂದರ್ಭದಲ್ಲಿ ಪರಶುರಾಮಪ್ಪ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

## ತರಳಬಾಳು ಶಾಲೆ ವಿದ್ಯಾರ್ಥಿ ಚಂದ್ರಕಾಂತ್‌ಗೆ ದ್ವಿತೀಯ ಸ್ಥಾನ




ದಾವಣಗೆರೆ, ಅ. 31- ರಾಜ್ಯಮಟ್ಟದ ಪ್ರೌಢಶಾಲಾ ಬಾಲಕ ಮತ್ತು ಬಾಲಕಿಯರ ವೇಯ್ಟ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ನಗರದ ತರಳಬಾಳು ಶಾಲೆಯ ವಿದ್ಯಾರ್ಥಿ ಬಿ. ಚಂದ್ರಕಾಂತ್ ದ್ವಿತೀಯ ಸ್ಥಾನ ಪಡೆದಿರುತ್ತಾರೆ. ಇವರಿಗೆ ಜಿಲ್ಲಾ ವೇಯ್ಟ್ ಲಿಫ್ಟಿಂಗ್ ಅಧ್ಯಕ್ಷ ಹೆಚ್. ಮಹೇಶ್, ಪಾಂಡುರಾಜ್, ಕರಿಬಸಪ್ಪ, ಹನುಮಂತಪ್ಪ, ಕೆ.ಎಂ. ವೀರೇಶ್, ಬಸವರಾಜ್, ಹೆಚ್. ಸಂತೋಷ್ ಕಾಟೆ, ರಾಘವೇಂದ್ರ, ರಘು, ತರಬೇತುದಾರ ಹನುಮಂತಪ್ಪ ಅಭಿನಂದಿಸಿದ್ದಾರೆ.















# ಜಿಲ್ಲಾಡಳಿತದ ರಾಜ್ಯೋತ್ಸವ ಪುರಸ್ಕಾರಕ್ಕೆ 33 ಸಾಧಕರ ಆಯ್ಕೆ

ದಾವಣಗೆರೆ,ಅ.31- ದಾವಣಗೆರೆ ಜಿಲ್ಲಾಡಳಿತದ ವತಿಯಿಂದ ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿ ನಾಡು - ನುಡಿಗಾಗಿ ಸೇವೆ ಸಲ್ಲಿಸುತ್ತಿರುವ ಜಿಲ್ಲೆಯ ಸಾಧಕರಿಗೆ ಪ್ರತೀ ವರ್ಷ ಕೊಡ ಮಾಡುವ ಪುರಸ್ಕಾರಕ್ಕೆ ಈ ಬಾರಿ 33 ಮಹನೀಯರನ್ನು ಆಯ್ಕೆ ಮಾಡಲಾಗಿದೆ ಎಂದು ಡಿಸಿ ಡಾ. ಜಿ.ಎಂ. ಗಂಗಾಧರ ಸ್ವಾಮಿ ತಿಳಿಸಿದ್ದಾರೆ.

ಈ ಸಂಬಂಧ ಹೊರಡಿಸಿರುವ ಆದೇಶದಲ್ಲಿ, ನಾಳೆ ದಿನಾಂಕ 1ರ ಶುಕ್ರವಾರ ಬೆಳಿಗ್ಗೆ 9.30ಕ್ಕೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತದಿಂದ ಏರ್ಪಾಡಾಗಿರುವ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರು ಎಲ್ಲಾ 33 ಸಾಧಕರನ್ನು ಸನ್ಮಾನಿಸಿ, ಗೌರವಿಸಲಿದ್ದಾರೆ ಎಂದು ಅವರು ಹೇಳಿದ್ದಾರೆ.

ಹಿರಿಯ ಸಾಹಿತಿ ಸಂತೇಬೆನ್ನೂರಿನ ಕೆ.ಸಿದ್ದಲಿಂಗಪ್ಪ, ಹಿರಿಯ ಜಾನಪದ ಕಲಾವಿದರಾದ ಚಿನ್ನಸಮುದ್ರದ ಶ್ರೀಮತಿ ಪೀರಿಬಾಯಿ ಉಮ್ಮಾನಾಯ್ಕ, ಹಿರಿಯ ಸಂಗೀತ ಕಲಾವಿದ ಎಂ. ಬಸಣ್ಣ, ಹಿರಿಯ ಪತ್ರಕರ್ತರುಗಳಾದ ಜನತಾವಾಣಿಯ ಓ.ಎನ್. ಸಿದ್ದಯ್ಯ, ಎಂ.ಬಿ. ನವೀನ್, ಹಿರಿಯ ಮುದ್ರಣಕಾರರಾದ ಬಸವೇಶ್ವರ ಮುದ್ರಣದ ಎ.ಎಂ. ಪ್ರಕಾಶ್, ಹಿರಿಯ ನ್ಯಾಯವಾದಿ ಎಲ್.ಹೆಚ್. ಅರುಣ್ ಕುಮಾರ್, ಹಿರಿಯ ರಂಗಭೂಮಿ ಕಲಾವಿದ ತೋರಣಘಟ್ಟದ ಬಡಪ್ಪ ಅವರುಗಳೂ ಸೇರಿದಂತೆ, 33 ಸಾಧಕರು ಜಿಲ್ಲಾಡಳಿತದ ರಾಜ್ಯೋತ್ಸವದ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

**ಶಿಲ್ಪಕಲೆ :** ಟಿ. ಶ್ರೀನಿವಾಸ್, ವಿ.ಎನ್. ಮೇಘಾಚಾರಿ, ಕೆ.ಆರ್. ಮೌನೇಶ್ವರ ಶಿಲ್ಪಿ (ಎಲ್ಲರೂ ದಾವಣಗೆರೆ).

**ಸಂಗೀತ :** ಟಿ. ಬಸವರಾಜು (ಜಗಳೂರು), ಎ.ಎಂ. ಶಶಿಕಿರಣ್ (ಚನ್ನಗಿರಿ), ಎಂ. ಬಸಣ್ಣ (ದಾವಣಗೆರೆ).

**ಜಾನಪದ :** ಶ್ರೀಮತಿ ಪೀರಿಬಾಯಿ ಉಮ್ಮಾನಾಯ್ಕ್ (ಚಿನ್ನಸಮುದ್ರ), ಹೆಚ್.ಪಿ. ನಾಗೇಂದ್ರಪ್ಪ (ಹರಿಹರ), ಎಸ್.ಕೆ. ವೀರೇಶ್ ಕುಮಾರ್ (ಹರಿಹರ), ಶ್ರೀಮತಿ ಪಿ. ಮೀನಾಕ್ಷಿ (ದಾವಣಗೆರೆ).

**ಸಮಾಜ ಸೇವೆ :** ಎ.ಜೆ. ರವಿಕುಮಾರ್, ಎಲ್. ಹೆಚ್. ಅರುಣ್ ಕುಮಾರ್.

**ಪತ್ರಿಕೋದ್ಯಮ :** ಓ.ಎನ್. ಸಿದ್ದಯ್ಯ (ಜನತಾವಾಣಿ), ಎಂ.ಬಿ. ನವೀನ್ (ವಿಜಯವಾಣಿ), ಕೆ.ಎಸ್. ಚನ್ನಬಸಪ್ಪ (ನಗರವಾಣಿ), ಹೆಚ್.ಟಿ. ಪರಶುರಾಮ್ (ಪಬ್ಲಿಕ್ ಟಿವಿ), ಹೆಚ್.ಎಂ. ಸದಾನಂದ (ಕನ್ನಡಪ್ರಭ, ಕುಂಬಳೂರು), ಎಂ.ಎಸ್.ಮಂಜುನಾಥ (ಪತ್ರಿಕಾ ವಿತರಕ), ಎ.ಎಂ. ಪ್ರಕಾಶ್ (ಮುದ್ರಣ ಕ್ಷೇತ್ರ).

**ಸಂಕೀರ್ಣ :** ಎಂ. ಮನು, ಬಿ. ತಿಮ್ಮನಗೌಡ (ದಾವಣಗೆರೆ).

**ಛಾಯಾಗ್ರಹಣ :** ಶ್ರೀನಾಥ್ ಪಿ. ಅಗಡಿ.

**ಕ್ರೀಡೆ :** ಎಸ್.ಪಿ. ಲಾವಣ್ಯ ಶ್ರೀಧರ್ (ಯೋಗಾಸನ, ದಾವಣಗೆರೆ).

**ರಂಗಭೂಮಿ :** ಬಡಪ್ಪ (ತೋರಣಘಟ್ಟ - ಜಗಳೂರು), ವಿನಾಯಕ ನಾಕೋಡ (ದಾವಣಗೆರೆ), ಎಸ್.ವಿ. ವಿಶ್ವನಾಥ (ದೊಣ್ಣೆಹಳ್ಳಿ - ಜಗಳೂರು), ಕೆ. ಎಸ್. ಕೊಟ್ರೇಶ್ (ದಾವಣಗೆರೆ).

**ಕನ್ನಡಪರ ಹೋರಾಟ :** ಸಂತೋಷ್ ದೊಡ್ಮನಿ, ಶ್ರೀಮತಿ ಬಿ.ಎಸ್. ಶುಭಮಂಗಳ, ನಾಗರಾಜ್ ಜಮ್ನಳ್ಳಿ (ದಾವಣಗೆರೆ), ಎಲ್.ಜಿ.ಮಧು ಕುಮಾರ್ (ಚನ್ನಗಿರಿ).

**ಸಾಹಿತ್ಯ :** ಕೆ. ಸಿದ್ದಲಿಂಗಪ್ಪ (ಚನ್ನಗಿರಿ).

**ಕೃಷಿ :** ಕೆ.ಟಿ. ಚಂದ್ರಶೇಖರಪ್ಪ (ಕುಕ್ಕುವಾಡ - ದಾವಣಗೆರೆ).


**IN THE COURT OF THE FIRST ADDITIONAL SENIOR CIVIL JUDGE, AT DAVANAGERE.**

O.S. 80/2024

**Plaintiffs : Sri Gururaj Naik** and Others, V/s
**Defendants : Smt. Lakshmi Bai and others**
**Defendant No. 1 : Smt Lakshmi Bai** W/o Tulja Naik, Aged about 65 Years, House wife, C/o Sri B.T. Ravi, Arsi, 3rd Cross, 2nd Stage, Near Uchhengamma Temple, Shakthi Nagar, Davangere - 577 004.

**Suit Summons to the First defendant by substituted service by paper publication**

Whereas, the above named plaintiffs have filed the above suit against the defendants For declaration that they are the oweners in possession and enjoyment of the agricultural land bearing Re.Sy. No. 26/3P measuring 2 acre 20 guntas of Lingapura village in Davanagere Taluk, As the first defendant avoided the service of suit summons sent to her through the Hon'ble Court and by registered post with acknowledgement due, suit summons to first defendant by paper publication.

Now, the above case is posted to 25th day of 11, 2024, for the appearance of the first defendant in the above case. Hence, the first defendant is hereby called upon to take notice to appear in the above case on 25th day of Nov. 2024 at 11.00 AM either personally or through an advocate failing which all further proceedings in the above case will take place in your absence.

Given under my hand and Seal on 28th day of oct 2024 at Davanagere.

*By order of the Court*
*Sd/-* **Chief Ministerial Officer,**
Principal Senior Civil Judge and CJM Court, Davanagere.

Place : Davangere
Date :




KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas